
ದುಡಿವ ಜನರ ಪ್ರಾಣ ಮಿತ್ರ


ಐಕ್ಯರಂಗ


ಸಂಪುಟ 26 ಸಂಚಿಕೆ 30 ಜುಲೈ 25, 2004 ಬೆಲೆ ರೂ. 3.00





ವಿದೇಶಿ ನೇರ ಹೂಡಿಕೆ ಹೆಚ್ಚಳದ ಅಪಾಯಗಳು





ಶೇರು ಪೇಟೆ ತಲ್ಲಣ ಏಕೆ ?

ಬದಲಾದ ಸ್ಥಿತಿಗತಿಯಲ್ಲಿ ಸರ್ಕಾರಿ ನೌಕರರ ಪಾತ್ರ

ಖಾಸಗೀ ಕ್ಷೇತ್ರಗಳಲ್ಲಿ ಮೀಸಲಾತಿ


ಚಿಂತನೆ...

ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಮೀಸಲಾತಿ

ಯಾವುದೇ ರಾಷ್ಟ್ರವು ತನ್ನ ನೆಲದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವಾಗ ಅದರ ಹಿಂದೆ ಸಾಮಾಜಿಕ ಗುರಿ ಇರುತ್ತದೆಯೇ ಹೊರತು ಲಾಭಗಳಿಸುವ ಆಸೆಯಿರುವುದಿಲ್ಲ. ಭಾರತದಲ್ಲಿ ಇತಿಹಾಸುದ್ದಕ್ಕೂ ಕೆಲವೇ ಬೆರಳೆಣಿಕೆಯಷ್ಟು ಮಂದಿ ಬಹು ಸಂಖ್ಯಾತರನ್ನು ಅನಾಗರೀಕ ರೀತಿಯಲ್ಲಿ ಶೋಷಣೆಗೊಳಪಡಿಸಿರುವುದನ್ನು ಕಾಣಬಹುದಾಗಿದ್ದು, ಇತ್ತೀಚಿನ ದಿನಗಳಲ್ಲಿ ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ 'ಸುಖೀ ರಾಜ್ಯ' ಎಂಬ ಪರಿಕಲ್ಪನೆಗೆ ಕೊಡಲಿ ಏಟನ್ನು ನೀಡುತ್ತಿರುವ ವಿಶ್ವ ಹಣಕಾಸು ಬಂಡವಾಳಗಾರರು ಸವಲತ್ತುಗಳನ್ನೆಲ್ಲ ಬಹು ಸಂಖ್ಯಾತ ಜನರಿಗೆ ನೀಡುವ ಬದಲು ಕೆಲವೇ ಜನರಿಗೆ ನೀಡಲು ಪ್ರಯತ್ನಿಸುತ್ತಿದ್ದಾರೆ. ಉದಾಹರಣೆಗೆ, ಭಾರತದ ಖನಿಜ ಸಂಪತ್ತು ಬಹುತೇಕ ಗುಡ್ಡಗಾಡು ಜನರು ವಾಸಿಸುವ ಪ್ರದೇಶಗಳಲ್ಲಿರುವುದರಿಂದ ಖಾಸಗಿ ಕಂಪನಿಯಿರಲಿ ಅಥವಾ ಸಾರ್ವಜನಿಕ ಉದ್ದಿಮೆಯಿರಲಿ ಗಣಿಗಾರಿಕೆಗಾಗಿ ಅದು ಗುಡ್ಡಗಾಡು ಜನರನ್ನು ತಮ್ಮ ಪೂರ್ವಿಕರ ಭೂಮಿಯಿಂದ ಸ್ಥಳಾಂತರ ಗೊಳಿಸುತ್ತಿವೆ.

ಸಾರ್ವಜನಿಕ ಉದ್ದಿಮೆಗಳಾದರೋ ಸರ್ಕಾರದ ಮಾಲಿಕತ್ವದಲ್ಲಿದ್ದು, ಈ ಜನರಿಂದ ಆಯ್ಕೆಗೊಂಡ ನಾಯಕರ, ಲೋಕಸಭೆಯ ನಿಯಂತ್ರಣದಲ್ಲಿರುತ್ತವೆ. ಸಂವಿಧಾನದ ನಿರ್ದೇಶನದಂತೆ ಸಾರ್ವಜನಿಕ ರಂಗದಲ್ಲಿ ಕೆಳಮಟ್ಟದಿಂದ ಉನ್ನತ ಮಟ್ಟದವರೆಗೂ ಮೀಸಲಾತಿಯು ಸಾಮಾಜಕ ಏಳಿಯನ್ನು ಹಾಕಲಾಗುತ್ತದೆ. ಆದರೆ ಖಾಸಗಿ ಕ್ಷೇತ್ರದಲ್ಲಿ ಈ ರೀತಿಯ ಸಂವಿಧಾನಿಕವಾದ ಕಡ್ಡಾಯ ಗೆರೆಯೇನೂ ಇಲ್ಲ. ಗಣಿಗಾರಿಕಾ ಕಂಪನಿಗಳಲ್ಲಿ ಕೆಲಸವೊಂದು ಸಿಗುವ ಖಾತರಿಯಿಲ್ಲದಿದ್ದರೂ ಸಹ ತಾನು ಜೀವನಪರ್ಯಂತ ಕಲಿತ ದುಡಿಮೆಯ ವಿಧಾನಗಳು, ಅಭಿವೃದ್ಧಿ ಪಡಿಸಿದ ಭೂಮಿ, ಮನೆ ಎಲ್ಲವನ್ನು ಬಿಟ್ಟು ಸರ್ಕಾರ ತೋರಿದ ಭೂಮಿಯ ಕಡೆಗೆ ಬಿಕ್ಕುತ್ತಾ ಸಾಗಲೇ ಬೇಕಿದೆ. ಇದು ಎಂತಹ ಸನ್ನಿವೇಶವನ್ನು ಸೃಷ್ಟಿಸಿದೆಯೆಂದರೆ ಒಂದು ಜನಾಂಗ ತಲಾತಲಾಂತರಗಳಿಂದ ಬದುಕಲು ಕಲಿತ ವೃತ್ತಿ ವಿಧಾನಗಳನ್ನು ಕೈ ಬಿಟ್ಟು ಆದಿಮಾನವನಂತೆ ಪುನಃ ಹೊಸದೊಂದು ಅಸಾಧ್ಯ ಬದುಕನ್ನು ಸರ್ಕಾರದ ನೆರವಿಲ್ಲದೆ ನಿರ್ಗತಿಕರಾಗಿ, ನಿರ್ವಸತಿಯಿಂದ ಬಾಳಬೇಕಿದೆ.

ಖಾಸಗಿ ಕ್ಷೇತ್ರದ ಉದ್ಯೋಗಗಳಲ್ಲಿ ಮೀಸಲಾತಿ ನೀಡುವ ಬಗೆಗಿನ ಚರ್ಚೆ, ಭಾರತದಲ್ಲಿ 1950ರ ದಶಕದಲ್ಲೇ ಕೇಳಿ ಬಂತಾದರೂ ಯಾವನೇ ಒಬ್ಬ ಉದ್ಯಮಶೀಲನೂ ಕೆಲಸದಲ್ಲಿ ಮೀಸಲಾತಿಯನ್ನು ಜಾರಿಗೊಳಿಸಿ ವೈವಿಧ್ಯಮಯ ಪರಿಸರವನ್ನು ನೀಡಲು ಪ್ರಯತ್ನಿಸಿಲ್ಲ. ಅಮೇರಿಕಾ ದೇಶದಂತಹ ಅಭಿವೃದ್ಧಿಯು ಮೇರುಮಟ್ಟದಲ್ಲಿದೆಯೆಂದು ಬೊಗಳೆ ಬಿಡುವ ದೇಶಗಳಲ್ಲೇ ಜನರಲ್



ಮೋಟಾರ್ಸ್ ಮತ್ತು ಫೋರ್ಡ್ ಕಂಪನಿಗಳು ಮೀಸಲಾತಿಯ ಪ್ರಾಮುಖ್ಯತೆಯನ್ನು ಮನಗಂಡು ಆಫ್ರಿಕಾ ಮೂಲದ ಅಮೇರಿಕನ್ನರಿಗೆ, ಏಷ್ಯಾದವರಿಗೆ ಹೀಗೆ ಮುಂತಾದ ಹಿಂದುಳಿದವರೆನಿಸಿರುವ ಜನಾಂಗಕ್ಕೆ ವಿಶೇಷ ಮೀಸಲಾತಿಯನ್ನು ಉದ್ಯೋಗಾವಕಾಶಗಳಲ್ಲಿ ಒದಗಿಸಿವೆ. ಅಲ್ಲಿ ಸರ್ಕಾರದ ಕೆಲಸ ಕಾರ್ಯಗಳಲ್ಲಿ ಭಾಗಿಯಾಗಿರುವ ಪ್ರತಿಯೊಂದು ಖಾಸಗಿ ಕಂಪನಿಯೂ ಉದ್ಯೋಗಗಳಲ್ಲಿ ಮೀಸಲಾತಿಯ ಮುಖೇನಾ ವೈವಿಧ್ಯತೆಯನ್ನು ಕಾಯ್ದುಕೊಳ್ಳಬೇಕಿದೆ.

ನಮ್ಮ ದೇಶದಲ್ಲಿ ಸ್ವಾತಂತ್ರ್ಯಾನಂತರದ ಕಾಲದಿಂದಲೂ ಸರ್ಕಾರಿ ನೌಕರಿಯಲ್ಲಿ ಮತ್ತು ಸಾರ್ವಜನಿಕ ರಂಗದಲ್ಲಿ ಮೀಸಲಾತಿಯಿಂದಾಗಿ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವ ಮಾರ್ಗವಿತ್ತಾದರೂ, ಜಾಗತೀಕರಣವೆಂಬ ಪೆಡಂಭೂತದ ಪರಿಣಾಮದಿಂದಾಗಿ ಈ ಕ್ಷೇತ್ರಗಳ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ಮಾತಿರಲಿ ಇರುವ ನೌಕರರಿಗೇ ಕುತ್ತು ಬಂದಿದೆ. 1950 ರವರೆಗೂ ಶೇ. 95ರಷ್ಟು ಉನ್ನತ ಹುದ್ದೆಗಳನ್ನು ಆಕ್ರಮಿಸಿಕೊಂಡಿದ್ದ ಬ್ರಾಹ್ಮಣಶಾಹಿ, 1950 ರಿಂದ ಇಲ್ಲೀವರೆವಿಗೂ 'ಜನರಲ್ ಕೋಟಾ' ದಡಿಯಲ್ಲಿ ಐ.ಎ.ಎಸ್. ಒಳಗೊಂಡಂತೆ ಉನ್ನತ ಹುದ್ದೆಗಳಲ್ಲಿ ಶೇ.70 ಕ್ಕೂ ಹೆಚ್ಚನ್ನು ಆಕ್ರಮಿಸಿಕೊಂಡಿದೆ. ಆದ್ದರಿಂದ ಮೀಸಲಾತಿ ಯೊಂದೇ ಅಸಮಾನತೆಯನ್ನು ಹೋಗಲಾಡಿಸ ದಿದ್ದರೂ ಸಹ ಬಹು ಸಂಖ್ಯಾತರ ಆರ್ಥಿಕ ಸಮಾನತೆಯನ್ನು ತಕ್ಕಮಟ್ಟಿಗಾದರೂ ಸಾಧಿಸಲು ಅದು ಅತ್ಯವಶ್ಯಕವಾಗಿದೆ.

ಭಾರತೀಯ ಖಾಸಗಿ ಉದ್ಯಮ ಕ್ಷೇತ್ರ ಪ್ರತಿಸಲ 'ಮೀಸಲಾತಿ'ಯ ಹೆಸರು ಕೇಳಿದಾಗ 'ಲ್ಲ ಮೀಸಲಾತಿಯು ಪ್ರತಿಭೆಗೆ ಮಾರಕವಾಗುತ್ತದೆಂದು ಉಸುರಿ ಎಲ್ಲರ ಬಾಯಿ ಮುಚ್ಚಿಸಲು ಪ್ರಯತ್ನಿಸುತ್ತದೆ. ನಮ್ಮ ಸಾರ್ವಜನಿಕ ಉದ್ದಿಮೆಗಳ ತಾಂತ್ರಿಕ ಕಾರ್ಯಸಮರ್ಥತೆ ಸಾಮಾಜಿಕ ನ್ಯಾಯವನ್ನು ಅಳವಡಿಸಿಕೊಂಡು ಉನ್ನತ ಬೆಳವಣಿಗೆಯನ್ನು ಕಂಡಿಲ್ಲವೇನು? ವಿಶ್ವ ಮಾನ್ಯ ಸಾರ್ವಜನಿಕ ಉದ್ದಿಮೆಗಳಾದ BHEL, ONGC, NTPC, IOC, BEL, HAL, ಇತ್ಯಾದಿಗಳು ಮೀಸಲಾತಿಯ ಸಾಮಾಜಿಕ ಸೂತ್ರವನ್ನಳವಡಿಸಿಕೊಂಡು ಔನ್ನತ್ಯವನ್ನೂ ಸಾಧಿಸಿ ಪ್ರಪಂಚದ ಇನ್ನಾವುದೇ ಕಂಪನಿಗಳಿಗೂ ಸ್ಪರ್ಧೆ ನೀಡುತ್ತಿಲ್ಲವೇನು?

ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಆರೋಗ್ಯಕರ ಸ್ಪರ್ಧೆಯಿರಬೇಕೆಂದರೆ ಸಾರ್ವಜನಿಕರಂಗ ಮತ್ತು ಖಾಸಗಿ ಕ್ಷೇತ್ರಗಳೆರಡೂ ಸಮಾನವಾದ ತಳಹದಿಯ ಮೇಲೆ ಸ್ಪರ್ಧಿಸಬೇಕು. ಉದ್ಯೋಗಗಳಲ್ಲಿ ಮೀಸಲಾತಿ ಸೂತ್ರವಿರಿಸಕೊಂಡು ಸಾಮಾಜಿಕ ಬದ್ಧತೆಯನ್ನು ಸಾರ್ವಜನಿಕ ರಂಗ ತೋರುತ್ತಿರಬೇಕಾದರೆ, ಕೈಗಾರಿಕಾಭಿವೃದ್ಧಿಗಾಗಿ ಬಹಳಷ್ಟು ವಿನಾಯಿತಿಗಳನ್ನು ಪಡೆದಿರುವ ಖಾಸಗಿ ಕ್ಷೇತ್ರದಲ್ಲೇಕೆ ಅದೇ ರೀತಿಯ ಸೂತ್ರಗಳು ಅನ್ವಯವಾಗಬಾರದು?

ಕೋಟ್ಯಾನುಕೋಟಿ ರೂಪಾಯಿಗಳನ್ನು ಸಾರ್ವಜನಿಕ ರಂಗದ ಬ್ಯಾಂಕುಗಳಿಂದ ಮತ್ತು ಹಣಕಾಸು ಸಂಸ್ಥೆಗಳಿಂದ ಖಾಸಗಿ ಕ್ಷೇತ್ರ ಸಾಲವಾಗಿ ಪಡೆದಿದ್ದು, ಸಾಲ ಮತ್ತು ತೆರಿಗೆಯನ್ನು ಮರುಪಾವತಿ ಮಾಡದಿರುವುದು ಎಲ್ಲರಿಗೂ ಗೊತ್ತಿರುವ ವಿಷಯ ಯಾವ ಜನರ ಭೂಮಿ, ಶ್ರಮ, ಮತ್ತು ಹಣವನ್ನು ಉದ್ಯಮಶೀಲ ವರ್ಗ ಉಪಯೋಗಿಸಿಕೊಳ್ಳುತ್ತಿದೆಯೋ, ಅಂತಹ ಜನರಿಗೆ ಉದ್ಯೋಗದಲ್ಲಾದರೂ ಸಮಾನತೆಯನ್ನು ನೀಡಬೇಕಿದೆ.

ಸರ್ಕಾರದ ಇಲಾಖೆಗಳನ್ನು ಮತ್ತು ಸಾರ್ವಜನಿಕ ಉದ್ದಿಮೆಗಳನ್ನು ಮಾತ್ರ ಸಾಮಾಜಿಕ ಬದ್ಧತೆಯ ಕಟ್ಟುಪಾಡುಗಳಿಗೆ ಒಳಪಡಿಸಿ ಸಾಮಾಜಿಕ ನ್ಯಾಯದಂಥಹ ರಾಷ್ಟ್ರೀಯ ಗುರಿಗಳಿಂದ ಖಾಸಗಿ ಕ್ಷೇತ್ರವನ್ನು ಹೊರತುಪಡಿಸುವುದು ನಿಜಕ್ಕೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಉದ್ಯೋಗಾವಕಾಶಗಳಲ್ಲಿ ಸಾಮನತೆಯನ್ನೊದಗಿಸುವ ಆಡಳಿತದ ಮೂಲ ತತ್ವಗಳ ಆಶಯಕ್ಕೆ ವಿರುದ್ಧವಾಗಿದೆ.

ಖಾಸಗಿ ಕ್ಷೇತ್ರದ ಬಹುತೇಕ ಉದ್ದಿಮೆಗಳು ಮೇಲ್ವರ್ಗದವರ ಮಾಲಿಕತ್ವದಲ್ಲಿರುವುದೂ ಕೂಡ ಮೀಸಲಾತಿ ವಿರೋಧಕ್ಕೆ ಒಂದು ಕಾರಣ. ಅಷ್ಟಕ್ಕೂ ಪ್ರತಿಭೆ ಹೇಗೆ ಒಬ್ಬ ವ್ಯಕ್ತಿಯಲ್ಲಿ ರೂಪುಗೊಳ್ಳುತ್ತದೆ? ಮನುಷ್ಯನ ಪ್ರಜ್ಞೆಯನ್ನು ರೂಪಿಸುವುದು ಆರ್ಥಿಕ ಮತ್ತು ಸಾಮಾಜಿಕ ಪರಿಸರಗಳೇ ಹೊರತು ರಕ್ತದಿಂದಲೋ ಅಥವಾ ಹುಟ್ಟಿನಿಂದಲೋ ಯಾರೂ ಮೇಧಾವಿಯಾಗುವುದಿಲ್ಲ. ಸಾಮಾಜಿಕ ನ್ಯಾಯದ ಹಿಂದಿರುವ ರಾಷ್ಟ್ರದ ಅಭಿವೃದ್ಧಿಯ ಪ್ರಾಮುಖ್ಯತೆಯನ್ನು ಖಾಸಗಿ ಕ್ಷೇತ್ರ ಅರ್ಥಮಾಡಿಕೊಳ್ಳಬೇಕಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರ ಆಶಯವನ್ನು ಖಾಸಗಿ ಕ್ಷೇತ್ರ ಹೇಗೆ ಪೂರೈಸಬಲ್ಲದೆಂಬುದರ ಬಗ್ಗೆ ರಾಜಕೀಯ ಪಕ್ಷಗಳು ಉದ್ಯಮಗಳು ಮತ್ತು ಇತರರೆಲ್ಲ ಮಾತು ಕತೆಯ ಮುಖೇನಾ ಆರಂಭಿಸಬೇಕೆಂದು ರಾಷ್ಟ್ರಾಧ್ಯಕ್ಷರ ಭಾಷಣದಲ್ಲಿ ವ್ಯಕ್ತಪಡಿಸಿರುವುದು ನಿಜಕ್ಕೂ ಒಂದು ಸ್ವಾಗತಾರ್ಹ ಹೆಜ್ಜೆ. ಇದಕ್ಕೆ ಖಾಸಗಿ ಕ್ಷೇತ್ರವು ಸಂಪೂರ್ಣ ಸಹಕಾರ ನೀಡಬೇಕಿದೆ.

ಜಯ, ಮಂಡ್ಯ

ಡಾ.ವಿ.ಎನ್.ದೇಶಪಾಂಡೆ ನಿಧನ

ಸ್ವಾತಂತ್ರ್ಯ ಹೋರಾಟಗಾರ, ಮಾರ್ಕ್ಸ್‌ವಾದಿ ಚಿಂತಕ, ಸಮಾಜ ವಿಜ್ಞಾನಿ ಡಾ.ವಿ.ಎನ್. ದೇಶಪಾಂಡೆ 16.07.2004 ರಂದು ನಿಧನರಾದರು. ಅವರ ನಿಧನಕ್ಕೆ ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಬೆಳಗಾವಿ ಜಿಲ್ಲೆಯ ಚಿಕಾಲಗುಡ್ಡದಲ್ಲಿ ದಿ.11.09.1927 ರಂದು ಜನಿಸಿದ ಡಾ. ದೇಶಪಾಂಡೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ರಸಾಯನ ಶಾಸ್ತ್ರದಲ್ಲಿ ಎಂ.ಎಸ್ಸಿ, ಪಿಹೆಚ್‌ಡಿ ಹಾಗೂ ಬನಾರಸ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ ಪದವಿ ಪಡೆದು, ಅನೇಕ ವರ್ಷ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತತ್ವಶಾಸ್ತ್ರದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು. ಪ್ರಗತಿಪರ, ಜನಪರ ಚಳುವಳಿಗಾಗಿ ದುಡಿಯಲು ಅವಧಿಗೆ ಮುನ್ನ ನಿವೃತ್ತಿ ಪಡೆದು ವಿಶ್ವವಿದ್ಯಾಲಯದ ಶಿಕ್ಷಕರ ಚಳುವಳಿ, ವಿದ್ಯಾರ್ಥಿ- ಯುವಜನರ ಚಳುವಳಿ, ಮತ್ತು ಕಮ್ಯೂನಿಸ್ಟ್ ಚಳುವಳಿಯಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಧಾರವಾಡ ಜಿಲ್ಲಾ ಕಾರ್ಯದರ್ಶಿಯಾಗಿ ಎರಡು ವರ್ಷ ಸೇವೆ ಸಲ್ಲಿಸಿದ್ದರು. ನಂತರ ಮಾರ್ಕ್ಸ್‌ವಾದದಿಂದ ಪ್ರಭಾವಿತರಾಗಿ ತಮ್ಮ ಜೀವನದುದ್ದಕ್ಕೂ ಮಾರ್ಕ್ಸ್‌ವಾದಿ ಅಧ್ಯಯನ, ಚಿಂತನೆ, ಚಳುವಳಿಯಲ್ಲಿ ಸಕ್ರಿಯ ಪಾತ್ರವಹಿಸಿದ್ದರು. ದೀರ್ಘಕಾಲ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಧಾರವಾಡ ಜಿಲ್ಲಾ ಸಮಿತಿಯ ಸದಸ್ಯರಾಗಿದ್ದರು. Madras Institute of Development Studies ಸಂಸ್ಥೆಯ ಫೆಲೋ ಆಗಿದ್ದ ಡಾ.ದೇಶಪಾಂಡೆ ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರದ ಸ್ಥಾಪಕ ನಿರ್ದೇಶಕರಾಗಿದ್ದರು. ಒಬ್ಬ ಉನ್ನತಮಟ್ಟದ ಸಮಾಜವಿಜ್ಞಾನಿ ಎಂದು ಗುರುತಿಸಲ್ಪಟ್ಟ ಡಾ.ದೇಶಪಾಂಡೆ ಅನೇಕ ವಿದ್ವತ್ ಗೋಷ್ಠಿ, ಕಮ್ಮಟಗಳಲ್ಲಿ ಭಾಗವಹಿಸಿದ್ದರು. ಅವರ ಅನೇಕ ಲೇಖನ, ಪುಸ್ತಕಗಳು ಪ್ರಕಟಗೊಂಡಿವೆ.

ಸಿಪಿಐ(ಎಂ) ಧಾರವಾಡ ಜಿಲ್ಲಾ ಸಂಘಟನಾ ಸಮಿತಿಯು ಡಾ.ದೇಶಪಾಂಡೆಯವರಿಗೆ ಗೌರವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

- **ಜುಲೈ 12 ರಿಂದ ಆಗಸ್ಟ್ 11, 2004**
  ಕಟ್ಟಡ ಕಾರ್ಮಿಕರ ಬೇಡಿಕೆಗಳ ಬಗ್ಗೆ ಪ್ರಚಾರಾಂದೋಲನ
- **ಜುಲೈ 24-25, 2004**
  ಜೆ.ಎಂ.ಎಸ್, ಬೆಂಗಳೂರು ಜಿಲ್ಲಾ ಸಮ್ಮೇಳನ, ಅತ್ತಿಬೆಲೆ, ಆನೇಕಲ್ ತಾಲ್ಲೂಕು, ಬೆಂಗಳೂರು
  25 ರಂದು ಬಹಿರಂಗ ಸಭೆ
- **ಜುಲೈ 29, 2004**
  ಉನ್ನತ ಶಿಕ್ಷಣಕ್ಕೆ ಶೇ.15 ಅನುದಾನ ಕಡಿತ ವಿರೋಧಿಸಿ ರಾಜ್ಯದಾದ್ಯಂತ ಕಾಲೇಜ್ ಬಂದ್ - ಎಸ್‌ಎಫ್‌ಐ ಕರೆ
- **ಜುಲೈ 31, 2004**
  ಜೆಎಂಎಸ್ ವತಿಯಿಂದ ವಿಚಾರ ಸಂಕಿರಣ, ಬೆಳಿಗ್ಗೆ 10 ಕ್ಕೆ, ಸೆನೆಟ್ ಹಾಲ್, ಬೆಂಗಳೂರು
  ಉದ್ಘಾಟನೆ : ದೇವಕಿ ಜೈನ್
  ಅಧ್ಯಕ್ಷತೆ : ಡಾ. ಎಂ.ಎಸ್.ತಿಮ್ಮಪ್ಪ
- **ಆಗಸ್ಟ್ 3,4 ಆಗಸ್ಟ್ 5,2004**
  ಅಖಿಲ ಭಾರತ ವಿದ್ಯಾರ್ಥಿನಿಯರ ಸಮಾವೇಶ
  ರಾಜಸ್ಥಾನ ರಾಜ್ಯದ ಗಂಗಾ ನಗರದಲ್ಲಿ
- **ಆಗಸ್ಟ್ 8, 2004**
  ಪ್ರಾದೇಶಿಕ ಅಸಮಾನತೆ ಕುರಿತು ಸಮಾವೇಶ ಸ್ಥಳ : ಗುಲ್ಬರ್ಗಾ
  ಸಿದ್ಧತಾ ಸಮಿತಿ ಅಧ್ಯಕ್ಷರು : ಶಾಂತರಸ, ಸಾಹಿತಿಗಳು
  ಕಾರ್ಯಾಧ್ಯಕ್ಷ : ಮಾರುತಿ ಮಾನ್ಪಡೆ
  ಪ್ರ. ಕಾರ್ಯದರ್ಶಿ : ಆರ್.ಕೆ.ಹುಡಗಿ
- **ಆಗಸ್ಟ್ 9 ರಿಂದ 24,2004**
  ಅಂಧಶ್ರದ್ಧೆ, ಮೌಢ್ಯದ ವಿರುದ್ಧ ಜನಜಾಗೃತಿ, 24 ರಂದು ಸಮಾರೋಪ ದಾವಣಗೆರೆಯಲ್ಲಿ 4 ಜಾಥಾ

ಸರ್ಕಾರ ಕೆಲಸಕ್ಕಿಳಿಯಲಿ

ರಾಜ್ಯದಲ್ಲಿ, ಚುನಾವಣೆಯ ನಂತರ, ಹೊಸ ಸಮ್ಮಿಶ್ರ ಸರ್ಕಾರ ಅಧಿಕಾರವಹಿಸಿಕೊಂಡ ದಿನದಿಂದ ನಿರೀಕ್ಷಿಸಲಾಗುತ್ತಿದ್ದ ಸಾಮಾನ್ಯ ಕನಿಷ್ಠ ಕಾರ್ಯಕ್ರಮವು ಈಗ ಪ್ರಕಟವಾಗಿದೆ. ಹತ್ತು ಹಲವು ಭರವಸೆಗಳನ್ನು ಪಟ್ಟಿ ಮಾಡಲಾಗಿದೆ. ಆದರೆ ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷ ಮತ್ತು ಜನತಾದಳ(ಜಾತ್ಯತೀತ)ವು ಜನತೆಗೆ ನೀಡಿದ ಭರವಸೆಗಳಿಗೂ ಈಗ ಪ್ರಕಟಿಸಲಾದ ಸಾಮಾನ್ಯ ಕನಿಷ್ಠ ಕಾರ್ಯಕ್ರಮಕ್ಕು ಅಜಗಜಾಂತರ ವ್ಯತ್ಯಾಸವಿರುವುದು ಎದ್ದು ಕಾಣುತ್ತದೆ.

ರೈತರಿಗೆ ಶೇ 6 ರ ರಿಯಾಯ್ತಿ ಬಡ್ಡಿ ದರದಲ್ಲಿ ಸಾಲ ನೀಡಿಕೆ, ರೈತರ ಪಂಪ್‌ಸೆಟ್‌ಗಳಿಗೆ ಉತ್ತಮ ಗುಣಮಟ್ಟದ ವಿದ್ಯುತ್ತನ್ನು ನ್ಯಾಯಯುತವಾದ ದರಗಳಲ್ಲಿ ಒದಗಿಸುವುದು, ಆನ್‌ಲೈನ್ ಲಾಟರಿ, ಒಂದಂಕಿ ಲಾಟರಿ ನಿಷೇಧ, ಕಡುಬಡವರಿಗೆ 3 ರೂ. ಗೆ ಒಂದು ಕೆ.ಜಿ.ಯಂತೆ 20 ಕೆ.ಜಿ. ಅಕ್ಕಿ ವಿತರಣೆ, ನೇಕಾರರಿಗೆ ವಿಶೇಷ ಪ್ಯಾಕೇಜ್, ಅಸಂಘಟಿತ ಕಾರ್ಮಿಕರ ಮಸೂದೆಯನ್ನು ಅಂಗೀಕರಿಸುವುದು, ಸಣ್ಣ ಕೈಗಾರಿಕಾ ವಲಯವನ್ನು ಸಬಲೀಕರಣಗೊಳಿಸುವುದು, ವಸತಿಹೀನರಿಗೆ ವಸತಿ ಸೌಲಭ್ಯ ವಿಸ್ತರಿಸುವುದು, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ಡಾ. ನಂಜುಂಡಪ್ಪ ವರದಿಯ ಅನುಷ್ಠಾನ, ವ್ಯರ್ಥವಾಗಿ ಹರಿದು ಸಮುದ್ರ ಸೇರುತ್ತಿರುವ ನದಿಗಳ ನೀರನ್ನು ಅಂತರಜಲ ವೃದ್ಧಿ ಹಾಗೂ ಕುಡಿಯುವ ನೀರಿಗೆ ಬಳಸಲು ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದು ಮೊದಲಾದ ಅಂಶಗಳನ್ನು ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ. ಆದರೆ ಕಾಂಗ್ರೆಸ್ ಹಾಗೂ ಜೆಡಿ(ಎಸ್) ಪಕ್ಷಗಳು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾಮಾಡುವ ವಿಚಾರವು



ಸಮ್ಮಿಶ್ರ ಸರ್ಕಾರದ ಕನಿಷ್ಠ ಕಾರ್ಯಕ್ರಮದಲ್ಲಿ ಕಾಣಸಿಗದಿರುವುದು ಆಶ್ಚರ್ಯಕರವಾಗಿದೆ. ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಕುರಿತು ಚಕಾರ ಶಬ್ದವಿಲ್ಲ. ಕಾಂಗ್ರೆಸ್ ಪಕ್ಷದ ಚುನಾವಣಾ ಪೂರ್ವದ ಪ್ರಮುಖ ಭರವಸೆಗಳಲ್ಲಿ ಒಂದಾದ 'ನಿರುದ್ಯೋಗಿಗಳ ಭತ್ಯೆ'ಯ ಪ್ರಸ್ತಾಪವೇ ಇಲ್ಲ.

ಹೀಗೆ ಬಹಳ ನಿರೀಕ್ಷೆಗಳೊಂದಿಗೆ ಕಾಯುತ್ತಿದ್ದ ರಾಜ್ಯದ ಜನತೆಗೆ ಈ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಘೋಷಣೆ ತೀವ್ರ ನಿರಾಸೆಯನ್ನು ಉಂಟುಮಾಡಿದೆ. ಈ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಒಳಗೊಳಿಸಲಾದ ಭರವಸೆಗಳಿಗೆ ಮುಂಬರುವ ಬಜೆಟ್‌ನಲ್ಲಿ ಏನು ವ್ಯವಸ್ಥೆ ಮಾಡಲಾಗಿದೆ ಎಂಬುದನ್ನು ಕಾದು ನೋಡಬೇಕು.

ಈ ವಾರ ಕರ್ನಾಟಕ ಒಂದು ನೋಟ

ನಿತ್ಯಾನಂದಸ್ವಾಮಿ

ಸಿಇಟಿ ವಿವಾದ: ಸುಪ್ರೀಂಕೋರ್ಟ್ ತೀರ್ಪು

ಎಂಜಿನಿಯರಿಂಗ್, ಮೆಡಿಕಲ್ ಮೊದಲಾದ ವೃತ್ತಿ ಶಿಕ್ಷಣದ ಸೀಟುಗಳನ್ನು 75 ಹಾಗೂ 25 ರ ಅನುಪಾತದಲ್ಲಿ ಹಂಚುವ ರಾಜ್ಯ ಸರ್ಕಾರದ ನಿರ್ಧಾರವನ್ನು ತಿರಸ್ಕರಿಸಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 50 ಹಾಗೂ 50 ರ ಅನುಪಾತದಲ್ಲಿ ಸೀಟು ಹಂಚಿಕೆ ಮಾಡಬೇಕೆಂದು ಸುಪ್ರೀಂಕೋರ್ಟ್ ಆದೇಶ ನೀಡಿದ್ದು ಧರ್ಮಸಿಂಗ್ ಸರ್ಕಾರಕ್ಕೆ ತೀವ್ರ ಮುಖಭಂಗ ಉಂಟು ಮಾಡಿದೆ. ಸುಪ್ರೀಂಕೋರ್ಟ್‌ನ ಈ ಆದೇಶದ ಹಿನ್ನೆಲೆಯಲ್ಲಿ ಸಿಇಟಿ ಕೌನ್ಸಿಲಿಂಗ್ ರದ್ದುಪಡಿಸಲಾಗಿದ್ದು ವಿದ್ಯಾರ್ಥಿಗಳಲ್ಲಿ ಮತ್ತು ಅವರ ಪಾಲಕರಲ್ಲಿ ತೀವ್ರವಾದ ಆಘಾತ ಉಂಟಾಗಿದೆ. ಆದರೆ ಇತ್ತ ಖಾಸಗಿ ವೃತ್ತಿ ಶಿಕ್ಷಣ ಸಂಸ್ಥೆಗಳ ಆಡಳಿತ ವರ್ಗದವರಿಗೆ ಖುಷಿಯಾಗಿದೆ.

ಸಿಇಟಿ ಬಿಕ್ಕಟ್ಟನ್ನು ಬಗೆಹರಿಸಲು ಸಾಧ್ಯವಾಗುವಂತ ಮಸೂದೆಯೊಂದನ್ನು ರೂಪಿಸುವಂತೆ ಕೇಂದ್ರ ಸರ್ಕಾರದೊಂದಿಗೆ ಚರ್ಚೆ ಮಾಡುವುದಾಗಿ ಮುಖ್ಯಮಂತ್ರಿ ಧರ್ಮಸಿಂಗ್ ಈಗ ಹೇಳಲಾರಂಭಿಸಿದ್ದಾರೆ. ಶೇ 50:50 ರ ಅನುಪಾತದಲ್ಲಿ ಸೀಟು ಹಂಚಿಕೆಯಾಗಬೇಕೆಂದು ಸುಪ್ರೀಂಕೋರ್ಟ್ ಕಳೆದ ವರ್ಷವೇ ತೀರ್ಪು ನೀಡಿತ್ತು. ಆದರೆ ಶೇ 75:25 ರ ಅನುಪಾತದಲ್ಲಿ ಸೀಟು ಹಂಚಿಕೆಗೆ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಒಪ್ಪಿಗೆ ಸೂಚಿಸಿದ್ದವು. ಆದರೆ ಈ ಸಲ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳು ಮತ್ತೆ ಶೇ. 50:50 ರ ಅನುಪಾತಕ್ಕೆ ಬಿಗಿ ಪಟ್ಟುಹಿಡಿದವು. ಸರ್ಕಾರ ಅವರೊಂದಿಗೆ ಮಾತುಕತೆ ನಡೆಸಿ ಅವರ ಮನವೊಲಿಸುವ ವಿಶ್ವಾಸ ವ್ಯಕ್ತಪಡಿಸುತ್ತಿದೆ. ಆದರೆ ಈ ಬಿಕ್ಕಟ್ಟಿಗೆ ಶಾಶ್ವತ ಪರಿಹಾರ ದೊರಕುವಂತಾಗಬೇಕಾದರೆ ಕೇಂದ್ರ ಸರ್ಕಾರವು ಶಾಸನ ರಚನೆಗೆ ಮುಂದಾಗಲೇಬೇಕು. ಅಲ್ಲಿಯರೆಗೆ ರಾಜ್ಯ ಸರ್ಕಾರವು ಸರ್ಕಾರಿ ಕಾಲೇಜುಗಳಲ್ಲಿ ಸೀಟುಗಳನ್ನು ಹೆಚ್ಚಿಸುವುದು, ಹೊಸ ಸರ್ಕಾರಿ ವೃತ್ತಿ ಶಿಕ್ಷಣ ಕಾಲೇಜುಗಳನ್ನು ಆರಂಭಿಸಲು ಮುಂದಾಗಬೇಕು. ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹಾಗೂ ಬ್ಯಾಂಕ್ ಸಾಲ ಸೌಲಭ್ಯಗಳನ್ನು ನೀಡುವ ಮೂಲಕ ನೆರವಾಗಬೇಕು.

ಆಗದಿರುವ ಸಂಪುಟ ವಿಸ್ತರಣೆ

ರಾಜ್ಯ ಸಚಿವ ಸಂಪುಟದ ರಚನೆ ಇನ್ನೂ ಕಗ್ಗಂಟಾಗಿ ಉಳಿದಿದೆ. ಬಜೆಟ್ ಅಧಿವೇಶನ ಸಮೀಪಿಸಿದ್ದರೂ ಪೂರ್ಣ ಪ್ರಮಾಣದ ಸಚಿವ ಸಂಪುಟ ರಚನೆಯಾಗಿಲ್ಲ. ಹೀಗಾಗಿ ಒಂದು ಕೆಲಸ ಮಾಡುವ ಸರ್ಕಾರ ಇನ್ನೂ ಅಸ್ತಿತ್ವಕ್ಕೆ ಬಂದಂತಾಗಲಿಲ್ಲ. ಈಗ ಇರುವ ಸಚಿವರ ಸಂಖ್ಯೆ 12 ಮಾತ್ರ. ಇನ್ನೂ 22 ಮಂದಿ ಸಚಿವರುಗಳಾಗಬಹುದು. ಈ 22 ಸ್ಥಾನಗಳನ್ನು ಕಾಂಗ್ರೆಸ್ ಮತ್ತು ಜೆಡಿ(ಎಸ್) ಸಮನಾಗಿ ಹಂಚಿಕೊಳ್ಳಬಹುದಾಗಿದೆ. ಮಂತ್ರಿಗಳಾಗಲು ಕಾಂಗ್ರೆಸ್ ಪಕ್ಷದೊಳಗೆ ತೀವ್ರ ಪೈಪೋಟಿ ಇರುವುದು ರಹಸ್ಯವಾಗಿ ಉಳಿದಿಲ್ಲ.

ಮಂತ್ರಿ ಪದವಿಗಾಗಿ ಕಾಯುತ್ತಿರುವ ಕೆಲವು ಕಾಂಗ್ರೆಸ್ ನಾಯಕರ ಮೇಲೆ ನಕಲಿ ಛಾಪಾ ಕಾಗದ ಹಗರಣದ ಕರಿ ನೆರಳು ಬಿದ್ದಿದೆ. ಮಂತ್ರಿಮಂಡಲ ವಿಸ್ತರಣೆ ಆಗಬೇಕೆನ್ನುವಷ್ಟರಲ್ಲಿ ನಿವೃತ್ತ ಎಸಿಪಿ ಸಂಗ್ರಾಂಸಿಂಗ್ ಸಿಡಿಸಿದ ಬಾಂಬ್ ಕಾಂಗ್ರೆಸ್ ಪಾಳೆಯದಲ್ಲಿ ನಡುಕವನ್ನು ಉಂಟು ಮಾಡಿದೆ. ಬಜೆಟ್ ಅಧಿವೇಶನದ ಮೊದಲೇ ಸಚಿವ ಸಂಪುಟದ ವಿಸ್ತರಣೆಯಾಗಲಿದೆ ಎಂದು ಹೇಳಲಾಗಿತ್ತು. ಬಜೆಟ್ ಅಧಿವೇಶನದ ನಂತರ ಒಂದೇ ಕಂತಿನಲ್ಲಿ ಪೂರ್ಣ ಪ್ರಮಾಣದ ಸಂಪುಟ ವಿಸ್ತರಣೆ ಆಗುವುದು ಒಳ್ಳೆಯದೆಂದು ದೇವೇಗೌಡರು ಹೇಳಿರುವುದು ಗಮನಾರ್ಹವಾಗಿದೆ.

ಸಂಗ್ರಾಂಸಿಂಗ್ ಆರೋಪಗಳಲ್ಲಿ ಏನೂ ಹುರುಳಿಲ್ಲ ಎಂದು ಹೇಳಲಾಗದು. ಅದು ಪೂರ್ಣ ಸತ್ಯವೆಂದೂ ಹೇಳಲಾಗದು. ಬಿಜೆಪಿಯ ಕೈವಾಡವನ್ನೂ ಅಲ್ಲಗಳೆಯಲಾಗದು. ಇದರ ಪೂರ್ಣ ಲಾಭ ಪಡೆಯಲು ಅದು ಎಲ್ಲಾ ಪ್ರಯತ್ನ ಮಾಡುತ್ತಿದೆ.

ಹೊಸ ತಾಲ್ಲೂಕುಗಳ ರಚನೆಯ ಪ್ರಸ್ತಾವ

ಸರ್ಕಾರವೇ ಇನ್ನೂ ಕೆಲಸ ಮಾಡಲು ಆರಂಭಮಾಡಿಲ್ಲ. ಹೊಸ ತಾಲ್ಲೂಕುಗಳ ರಚನೆಯ ಪ್ರಶ್ನೆಯನ್ನು ಎತ್ತಲಾಗಿದೆ. ಆಡಳಿತಾತ್ಮಕ ಅನುಕೂಲತೆಗಾಗಿ ಹೊಸ ಜಿಲ್ಲೆಗಳನ್ನು, ತಾಲ್ಲೂಕುಗಳನ್ನು ರಚಿಸುವುದು ಸರ್ಕಾರಕ್ಕೆ ಬಿಟ್ಟ ವಿಷಯ. ಆದರೆ ಯಾವುದಕ್ಕೆ ಯಾವಾಗ ಆದ್ಯತೆ ನೀಡಬೇಕು ಎಂಬುದನ್ನು ಸರ್ಕಾರ ಮನಗಾಣಬೇಕಾಗಿದೆ. ರಾಜ್ಯದ ಜನರನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳಿಗೆ ಸರ್ಕಾರ ಮೊದಲು ಸ್ಪಂದಿಸಬೇಕಾಗಿದೆ. ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಬೇಕಾಗಿದೆ. 100 ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಮುಂದುವರೆದಿರುವ ಬರವನ್ನು ಎದುರಿಸಲು, ಸರ್ಕಾರ ಆದ್ಯತೆ ನೀಡಬೇಕಾಗಿದೆ. ಎಲ್ಲಾ ಬಡವರಿಗೆ ಹಳದಿ ರೇಷನ್ ಕಾರ್ಡ್‌ಗಳನ್ನು ವಿತರಣೆ ಮಾಡುವ ಕಾರ್ಯಪೂರ್ಣಗೊಳ್ಳಬೇಕಾಗಿದೆ. ಇಂತಹ ಮೂಲಭೂತ ಪ್ರಶ್ನೆಗಳಿಂದ ಅನ್ಯತ್ರ ಗಮನವನ್ನು ಬೇರೆ ಕಡೆ ಸೆಳೆಯಲು ಈ ಹೊಸ ತಾಲ್ಲೂಕುಗಳ ರಚನೆಯ ಪ್ರಶ್ನೆ ಕಾರಣವಾಗುತ್ತಿದೆಯೆ [illegible] ಸಂಶಯವಿಲ್ಲ.

ಕುಂಭಕೋಣಂ ದುರಂತ - ಸಿಪಿಐ(ಎಂ) ಕಂಬನಿ

ತಮಿಳುನಾಡು ರಾಜ್ಯದ ಕುಂಭ ಕೋಣಂನಲ್ಲಿ 90 (ಸಂಖ್ಯೆ ಹೆಚ್ಚಾಗುವಂತೆ ಕಾಣುತ್ತಿದೆ) ಶಾಲಾ ಮಕ್ಕಳು ಬೆಂಕಿ ಅನಾಹುತದಿಂದ ಅಸುನೀಗಿದ ಸುದ್ದಿ ತಿಳಿದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ತೀವ್ರ ಸಂತಾಪ ಸೂಚಿಸಿದೆ. ಇದೇ ವರ್ಷದ ಜನವರಿಯಲ್ಲಿ ತಮಿಳುನಾಡಿನ ಶ್ರೀರಂಗನಲ್ಲಿ ಮದುವೆ ಮಂಟಪದಲ್ಲಿ ಬೆಂಕಿ ಅನಾಹುತದಿಂದ 50 ಮಂದಿ ಮೃತರಾದ ಬೆನ್ನಲ್ಲೇ ಇನ್ನೊಂದು ದುರ್ಘಟನೆ ನಡೆದಿದೆ.

ಹಣದ ಆಸೆಗಾಗಿ ಹೆಚ್ಚು ಹೆಚ್ಚು ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ಖಾಸಗಿ ಆಡಳಿತ ವರ್ಗ ಸುರಕ್ಷತೆಗಾಗಿ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಕಿರಿದಾದ ಜಾಗದಲ್ಲಿ ಆಕಾಶದೆತ್ತರಕ್ಕೆ ಕಟ್ಟಡಗಳನ್ನು ಕಟ್ಟುತ್ತಾರೆ. ಆದರೆ ಓಡಾಡುವ ಜಾಗ ತೀರಾ ಚಿಕ್ಕದು. ಒಂದೇ ಬಾರಿಗೆ ಇಬ್ಬರಿಗಿಂತ ಜಾಸ್ತಿ ನಡೆದಾಡಲು ಸಾಧ್ಯವಿಲ್ಲ. ಬೆಂಕಿ ಹೊತ್ತುವ ಅಡುಗೆ ಮನೆಗೆ ಹುಲ್ಲಿನ ಛಾವಣಿ! ಅಲ್ಲೇ ಪಕ್ಕದಲ್ಲಿ ಚಿಕ್ಕ ಮಕ್ಕಳಿಗೆ ಪಾಠ! 21ನೇ ಶತಮಾನದ ವಿಜ್ಞಾನ ಯುಗದಲ್ಲಿ ಲಾಭಕೋರರ ನೀತಿಗೆ ಅಮಾಯಕರು ಬಲಿ. ಇಂತಹ ಶಾಲಾ ಕಟ್ಟಡಗಳು ಕರ್ನಾಟಕದಲ್ಲೂ ಸಾಕಷ್ಟಿವೆ.

ಪದೇ ಪದೇ ಮರುಕಳಿಸುವ ಘಟನೆಗಳ ಹಿನ್ನೆಲೆಯಲ್ಲಿ ಸಾರ್ವಜನಿಕ ಕಟ್ಟಡ ಮತ್ತು ಶಾಲೆಗಳಲ್ಲಿ ಬೆಂಕಿ ತಡೆಗಟ್ಟಲು ಸುರಕ್ಷತಾ ವಿಧಾನಗಳನ್ನು ಬಲಪಡಿಸುವುದು ಮಾತ್ರವಲ್ಲದೆ, ಅದನ್ನು ಜಾರಿಗೊಳಿಸಲು ತಮಿಳುನಾಡು ಸರ್ಕಾರವು ಕ್ರಮಕೈಗೊಳ್ಳಬೇಕು. ಕೇಂದ್ರ ಸರ್ಕಾರವು ದೇಶದಲ್ಲಿ ಚಾಲ್ತಿಯಲ್ಲಿರುವ ಬೆಂಕಿ ಸುರಕ್ಷತಾ ಕ್ರಮಗಳನ್ನು ಪುನರ್ ವಿಮರ್ಶಿಸಬೇಕು ಮಾತ್ರವಲ್ಲದೆ ಅದನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಯಂತ್ರವನ್ನು ಸಜ್ಜುಗೊಳಿಸಬೇಕು ಎಂದು ಹೇಳಿರುವ ಸಿಪಿಐ(ಎಂ) ದುಃಖಪೀಡಿತ ಕುಟುಂಬಗಳಿಗೆ ಸಾಂತ್ವಾನ ಹೇಳಿದೆ.



ರಾಜ್ಯ ಸರಕಾರಿ ನೌಕರರ ಸಂಘಟನೆ ಬಲಪಡಿಸಲು

ಕಾಂ|| ಸುಕೋಮಲ್ ಸೇನ್ ಕರೆ

"ಬದಲಾದ ರಾಜಕೀಯ ಸನ್ನಿವೇಶದಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘಟನೆಯ ಪಾತ್ರ", ವಿಷಯದ ಮೇಲೆ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ದಿನಾಂಕ ಜುಲೈ 10 ರಂದು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಕಾಂ. ಸುಕೋಮಲ್ ಸೇನ್‌ರವರು ಮಾತನಾಡಿ ಬದಲಾದ ರಾಜಕೀಯ ಸನ್ನಿವೇಶದಲ್ಲೂ ಸಹ ಕಾರ್ಮಿಕರು ಮತ್ತು ಸರ್ಕಾರಿ ನೌಕರರು ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪ್ರಜಾಸತ್ತಾತ್ಮಕವಾಗಿ ಸಂಘಟಿತರಾಗಿ ನಿರಂತರ ಹೋರಾಟ ನಡೆಸುವುದು ಅನಿವಾರ್ಯವೆಂದರು.

ಐ.ಎಂ.ಎಫ್. ಮತ್ತು ವಿಶ್ವಬ್ಯಾಂಕ್ ನಿರ್ದೇಶಿತ ಜನ ವಿರೋಧಿ ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣ ನೀತಿಗಳನ್ನು ಅನುಸರಿಸಿ ಕಾರ್ಮಿಕ ಹಾಗೂ ನೌಕರ ವಿರೋಧಿ ಕ್ರಮಗಳನ್ನು ಜಾರಿಗೆ ತಂದ ಸರ್ಕಾರಗಳನ್ನು ದೇಶದ ಪ್ರಬುದ್ಧ ಮತದಾರರು ಅಧಿಕಾರದಿಂದ ಕಿತ್ತೊಗೆದು ಕೇಂದ್ರದಲ್ಲಿ ನೂತನ ಯು.ಪಿ.ಎ. ಸಮ್ಮಿಶ್ರ ಸರ್ಕಾರ ಅಸ್ತಿತ್ವಕ್ಕೆ ಬಂದಿದ್ದು, ಸಾಮಾನ್ಯ ಕನಿಷ್ಟ ಕಾರ್ಯಕ್ರಮದಡಿ ಕಾರ್ಯನಿರ್ವಹಿಸಬೇಕಾದ ಅಲ್ಪ ಮತದ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತಿರುವ ಎಡಪಕ್ಷಗಳು ದುಡಿಯುವ ವರ್ಗದ ಪರವಾಗಿ ಸ್ವಲ್ಪ ಪ್ರಭಾವ ಬೀರುವುದು ಸಾಧ್ಯವಾದರೂ ಕೇಂದ್ರ ಸರ್ಕಾರದ ಈ ಸಾಲಿನ ಆಯ-ವ್ಯಯ ಅವಲೋಕಿಸಿದರೆ ಸರ್ಕಾರದ ಧೋರಣೆಯಲ್ಲಿ ಬದಲಾವಣೆ ಕಂಡು ಬರುತ್ತಿಲ್ಲವೆಂದು ವಿಷಾದ ವ್ಯಕ್ತಪಡಿಸಿದರು.

ನೌಕರರ ಆದಾಯ ಕರ ಮಿತಿ ಏರಿಸಲಾಗಿದ್ದರೂ ಹೊಸದಾಗಿ ಶೇಕಡಾ 2 ರಷ್ಟು ಶಿಕ್ಷಣ ಸೆಸ್ ವಿಧಿಸಿ ನೌಕರರಿಗೆ ಲಾಭವಾಗದಂತೆ ಮಾಡಿದ್ದು, ಉಳಿತಾಯ ಠೇವಣಿಗಳ ಮೇಲಿನ ಬಡ್ಡಿದರ ತೀವ್ರವಾಗಿ ಕಡಿತ ಮಾಡಿ ಸರ್ಕಾರ ಬಡವರ ವಿರೋಧಿ ನೀತಿ ಅನುಸರಿಸುತ್ತಿದೆ. ನಿವೃತ್ತಿ ವೇತನದ ಸೌಲಭ್ಯವನ್ನು ಹಂತ ಹಂತವಾಗಿ ಕಡಿತಗೊಳಿಸುತ್ತಾ ಬಂದು ಅಂತಿಮವಾಗಿ ಪಿಂಚಣಿಯನ್ನು ಶೇರು ಹೂಡಿಕೆಯನ್ನಾಗಿ ಪರಿವರ್ತಿಸುವ ವಿಶ್ವಬ್ಯಾಂಕ್ ನಿರ್ದೇಶಿತ ಯೋಜನೆಯು ರೂಪುಗೊಳ್ಳುತ್ತಿದ್ದು, ಅದು ಪಿಂಚಣಿದಾರರನ್ನು ಬೀದಿ ಪಾಲು ಮಾಡುವ ಭೀತಿಯಿದೆ. ಕಳೆದ ವರ್ಷವೇ ಇಂತಹ ಯೋಜನೆಯ ವಿರುದ್ಧ ಫ್ರಾನ್ಸ್, ಇಟಲಿ ಮುಂತಾದ ಕಡೆ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. ದೇಶದ ಪ್ರಮುಖ ಆರ್ಥಿಕ ಸಂಪನ್ಮೂಲಗಳಾದ ವಿಮಾ, ದೂರ ಸಂಪರ್ಕ ಹಾಗೂ ನಾಗರೀಕರ ವಿಮಾನಯಾನ ವಲಯಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆಯನ್ನು ವಿಪರೀತವಾಗಿ ಏರಿಸಿದ್ದರಿಂದ ಲಾಭ ವಿದೇಶಿ ಕಂಪನಿಗಳ ಪಾಲಾಗಿದೆ. ಇದಕ್ಕೆ ತೀವ್ರ ಪ್ರತಿಭಟನೆ ವ್ಯಕ್ತವಾಗಿದೆ. ದೇಶದ ಪ್ರಮುಖ ಆರ್ಥಿಕ ಸಂಪನ್ಮೂಲಗಳಾದ ಈ ವಲಯಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ ವಿಪರೀತವಾಗಿ ತೀವ್ರ ಉದ್ಯೋಗ ಕಡಿತವಾಗುವುದಲ್ಲದೆ ನಮ್ಮ ಮುಂದಿನ ಯುವಪೀಳಿಗೆಗೆ ಉದ್ಯೋಗಾವಕಾಶ ಸಂಪೂರ್ಣ ನಶಿಸುತ್ತದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರ ವೇತನದಲ್ಲಿ ತಾರತಮ್ಯ ಹೆಚ್ಚಾಗುತ್ತಿರುವುದರಿಂದ ರಾಜ್ಯ ಸರ್ಕಾರಿ ನೌಕರರ ವೇತನ ಹೆಚ್ಚಿಲು ಕೇಂದ್ರ ಅನುದಾನ ನೀಡಬೇಕೆಂಬ ಬೇಡಿಕೆ ಮಾಡಲಾಗುತ್ತಿದೆಯೆಂದು ವಿವರಿಸಿ, ಸರ್ಕಾರದ ಜನ ವಿರೋಧಿ ನೀತಿಗಳ ವಿರುದ್ಧ ಕಾರ್ಮಿಕರು ಮತ್ತು ನೌಕರರು ಐಕ್ಯ ಹೋರಾಟಗಳನ್ನು ಮುಂದುವರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.



ಮುಷ್ಕರದ ಹಕ್ಕು: ಸರ್ವೋಚ್ಚ ನ್ಯಾಯಾಲಯವು ಸರ್ಕಾರಿ ನೌಕರರಿಗೆ ಮುಷ್ಕರ ಮಾಡುವ ಹಕ್ಕನ್ನು ನಿರಾಕರಿಸಿದ್ದನ್ನು ವಿರೋಧಿಸಿ ಮುಷ್ಕರ ಹಕ್ಕಿಗಾಗಿ ಫೆಬ್ರವರಿ 24, 2004 ರಂದು ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಒಂದು ದಿನದ ರಾಷ್ಟ್ರವ್ಯಾಪಿ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದ್ದು, ಹಲವಾರು ಅಡಚಣೆಗಳಿದ್ದರೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟವು ಮುಷ್ಕರದಲ್ಲಿ ಭಾಗವಹಿಸಿದ್ದಕ್ಕೆ ಅಭಿನಂದಿಸುತ್ತಾ, ತಮಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸುವುದು ಮೂಲಭೂತ ಹಕ್ಕಾಗಿರುವುದರಿಂದ ಮುಷ್ಕರದ ಹಕ್ಕನ್ನು ಶಾಸನಬದ್ಧವಾಗಿ ನೌಕರರಿಗೆ ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿ ಐದು ಕೋಟಿ ಸಹಿ ಹೊಂದಿದ ಮನವಿಯನ್ನು ಸಲ್ಲಿಸಲು ಒಕ್ಕೂಟ ತೀರ್ಮಾನಿಸಿದ್ದಾಗಿ ತಿಳಿಸಿ ಕರ್ನಾಟಕ ರಾಜ್ಯದಿಂದಲೂ ಎರಡು ಲಕ್ಷಕ್ಕೆ ಮೀರಿ ಸಹಿ ಸಂಗ್ರಹಣೆ ಮಾಡಬೇಕೆಂದು ಕೋರಿದರು.

ಮುಂದಿನ ತಿಂಗಳ ಮೊದಲ ವಾರದಲ್ಲಿ ಪಾಟ್ನಾದಲ್ಲಿ ನಡೆಯುವ ರಾಜ್ಯ ಪರಿಷತ್ತಿನ ಸಭೆಯಲ್ಲಿ ನೌಕರರ ಬೇಡಿಕೆಗೆ ಸಂಬಂಧಿಸಿದಂತೆ 'ಸಂಸತ್ ಚಲೋ' ಕಾರ್ಯಕ್ರಮ ರೂಪಿಸುವುದಾಗಿ ಹಾಗೂ ಐದನೇ ಆರ್ಥಿಕ ಆಯೋಗಕ್ಕೆ ಸಲ್ಲಿಸುವ ಮನವಿ ತಯಾರಿಸುವುದಾಗಿ ತಿಳಿಸಿದರು.

ಸಾಮೂಹಿಕ ನಾಯಕತ್ವ : ಪ್ರಸಕ್ತ ಸನ್ನಿವೇಶದಲ್ಲಿ ಸಣ್ಣ ಗುಂಪೊಂದು ಏಕಪಕ್ಷೀಯ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾ, ಸಮ್ಮೇಳನಗಳನ್ನು ಜಾತ್ರೆಯಂತೆ ನಡೆಸಿ ಅಲ್ಲಿ ಮಂತ್ರಿಮಹಾಶಯರಿಗೆ ಹಾರ, ತುರಾಯಿ ಹಾಕಿ, ಬೆಳ್ಳಿ ಕಿರೀಟ ತೊಡಿಸುವ ತಂತ್ರಗಾರಿಕೆಯನ್ನು ತೊರೆದು ಸಾಮೂಹಿಕ ನಾಯಕತ್ವದಡಿ ಪ್ರಜಾಸತ್ತಾತ್ಮಕವಾಗಿ ಸಂಘಟನೆಯನ್ನು ಕಟ್ಟಿ ನಿರಂತರ ಹೋರಾಟ ಕಾರ್ಯಕ್ರಮಗಳನ್ನು ನಡೆಸುವುದರಿಂದ ಮಾತ್ರ ನೌಕರರ ಬೇಡಿಕೆ ಈಡೇರಬಹುದೆಂದು ಆಶಯ ವ್ಯಕ್ತಪಡಿಸಿ, ಆ ದಿಶೆಯಲ್ಲಿ ತಾಲ್ಲೂಕು, ಜಿಲ್ಲೆಗಳಲ್ಲಿ ಅಖಿಲ ಕರ್ನಾಟಕ ರಾಜ್ಯ ಸಕಾರರಿ ನೌಕರರ ಒಕ್ಕೂಟ ಸಂಘಟನೆ ಕಟ್ಟಿ ಬೆಳೆಸಿ ಉಜ್ವಲ ಭವಿಷ್ಯದತ್ತ ಮುನ್ನಡೆಯಲೆಂದು ಹಾರೈಸಿದರು.

ಮಹಿಳೆಯರಿಗೆ ನಾಯಕತ್ವ : ಜನಸಂಖ್ಯೆಯ ಶೇಕಡಾ 50 ರಷ್ಟಿರುವ ಮಹಿಳೆಯರನ್ನು ಕಾರ್ಮಿಕ ಸಂಘಟನೆಗಳಲ್ಲಿ ಕೇವಲ ಪ್ರದರ್ಶನಕ್ಕಾಗಿ ಬಳಸದೆ, ಅವರನ್ನು ಕಾರ್ಮಿಕ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವುದರ ಜೊತೆಗೆ ನಿಜವಾದ ಅರ್ಥದಲ್ಲಿ ಅವರಿಗೆ ಸಂಘಟನೆಯಲ್ಲಿ ಸೂಕ್ತ ಸ್ಥಾನ-ಮಾನದೊಂದಿಗೆ ನಾಯಕತ್ವದ ಜವಾಬ್ದಾರಿಯನ್ನು ನೀಡಬೇಕೆಂದರು. ಕರ್ನಾಟಕದಲ್ಲಿ ಮಹಿಳಾ ನೌಕರರನ್ನು ಸಮರ್ಪಕವಾಗಿ ಸಂಘಟಿಸುವ ದೃಷ್ಟಿಯಿಂದ, ವಿವಿಧ ರಾಜ್ಯಗಳಲ್ಲಿ ಹಾಗೂ ವಿವಿಧ ನೌಕರರ ಸಂಘಟನೆಗಳಲ್ಲಿರುವಂತೆ ಅಖಿಲ ಭಾರತ ಕರ್ನಾಟಕ ರಾಜ್ಯ ಸರಕಾರಿ ನೌಕರರ ಒಕ್ಕೂಟದಲ್ಲಿ ಸಹ "ಮಹಿಳಾ ಉಪ ಸಮಿತಿ"ಗಳನ್ನು ರಚಿಸುವಂತೆ ಸೇನ್ ಸಲಹೆ ನೀಡಿದರು.

ಪ್ರಾರಂಭದಲ್ಲಿ ಒಕ್ಕೂಟದ ಅಧ್ಯಕ್ಷರಾದ ಯು.ಡಿ. ನರಸಿಂಹಯ್ಯ ರವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ ಬಿ.ಎಸ್. ಸಚ್ಚಿದಾನಂದ ಮೂರ್ತಿಯವರು ವಂದನೆ ಸಲ್ಲಿಸಿದರು. ಕೇಂದ್ರ ಸ್ಥಾನ ಕಾರ್ಯದರ್ಶಿ ಎಸ್.ರೇಣುಕಾರಾಧ್ಯ ರವರು ಕಾರ್ಯಕ್ರಮ ನಿರೂಪಿಸಿದರು.

ವರದಿ : ಮಡಿವಾಳ್

ಬಜೆಟ್‌ನಲ್ಲಿ ನೇಕಾರರ ಪ್ಯಾಕೇಜ್‌ಗೆ ಹಣ ಒದಗಿಸಲು ಆಗ್ರಹ

ಹಿಂದಿನ ಸರ್ಕಾರ ಘೋಷಿಸಿದ್ದ 105 ಕೋಟಿ ರೂ.ಗಳ ನೇಕಾರರ ವಿಶೇಷ ಪ್ಯಾಕೇಜನ್ನು ಜಾರಿಗೊಳಿಸುವುದಕ್ಕಾಗಿ ಈ ಸಲದ ಬಜೆಟ್‌ನಲ್ಲಿ ಅಗತ್ಯ ಹಣವನ್ನು ಒದಗಿಸಬೇಕೆಂದು ಒತ್ತಾಯಿಸಿ ಜುಲೈ 16 ರಂದು ರಾಣೆಬೆನ್ನೂರಿನಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರು ಮೆರವಣಿಗೆ ಹೊರಡಿಸಿ, ತಾಲ್ಲೂಕು ತಹಶೀಲ್ದಾರರ ಕಛೇರಿ ಎದುರು ಪ್ರದರ್ಶನ ನಡೆಸಿ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ವಿದ್ಯಾ ವಿಕಾಸ ಯೋಜನೆಯ ಅಡಿಯಲ್ಲಿ ಶಾಲಾ ಮಕ್ಕಳಿಗೆ ಒದಗಿಸಲಾಗುತ್ತಿರುವ ಉಚಿತ ಸಮವಸ್ತ್ರದ ಬಟ್ಟೆಯನ್ನು ಸಿದ್ಧಪಡಿಸಲು ನಿಗಮಕ್ಕೆ ಅಗತ್ಯವಾದ ಶೇಕಡಾ 25 ರಷ್ಟು ಮುಂಗಡ ಹಣವನ್ನು ತಕ್ಷಣ ಒದಗಿಸಬೇಕೆಂದು ಸಹ ಮನವಿಯಲ್ಲಿ ಒತ್ತಾಯಿಸಲಾಗಿದೆ. ಇತ್ತೀಚಿಗೆ ಹುಬ್ಬಳ್ಳಿಯಲ್ಲಿ ಜರುಗಿದ ಕರ್ನಾಟಕ ರಾಜ್ಯಕೈಮಗ್ಗ ನೇಕಾರ ಕಾರ್ಮಿಕರ ಸಮನ್ವಯ ಸಮಿತಿಯ ಸಭೆಯಲ್ಲಿ ಕೈಗೊಳ್ಳಲಾಗಿದ್ದ ತೀರ್ಮಾನದ ಮೇರೆಗೆ ಚಳುವಳಿಯ ಈ ಕಾರ್ಯಕ್ರಮವನ್ನು ನಡೆಸಲಾಯಿತು. ಸಮನ್ವಯ ಸಮಿತಿಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ನೇಕಾರರ ಮುಖಂಡರಾದ ಹನುಮಂತಪ್ಪ ಕದರಮಂಡಲಗಿ, ಪರಶುರಾಮ ಬಾಗಾದಿ, ಬಸವರಾಜು ಕೋಳೂರು, ಫಕೀರಪ್ಪ ವಿಭೂತಿ, ತಿರಕಪ್ಪ' ಗೋಂದಕರ್ ಮತ್ತು ಸಿಐಟಿಯು ಮುಖಂಡರಾದ ಕೆ.ಎಲ್.ಭಟ್ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಹುಬ್ಬಳ್ಳಿ ಸಭೆ : ಜುಲೈ 13 ರಂದು ಹುಬ್ಬಳ್ಳಿಯಲ್ಲಿ ಜರುಗಿದ ನೇಕಾರರ ಸಮನ್ವಯ ಸಮಿತಿ ಸಭೆಯು ಚುನಾವಣೆಗಳ ನಂತರದ ಪರಿಸ್ಥಿತಿಯನ್ನು ಪರಿಶೀಲಿಸಿತು. ರಾಜ್ಯದಲ್ಲಿ, ಸಾಲದ ಬಾಧೆಗೆ ಒಳಗಾಗಿ ಕಂಗೆಟ್ಟ ರೈತರ, ಭೀಕರ ಬರಗಾಲದಿಂದ ತತ್ತರಿಸಿದ ಗ್ರಾಮೀಣ ಜನತೆಯ ಹಾಗೂ ಉದ್ಯೋಗವಿಲ್ಲದೆ, ಸಂಪಾದನೆ ಇಲ್ಲದೆ ಪರದಾಡುತ್ತಿದ್ದ ನೇಕಾರರ ಸಂಕಷ್ಟಗಳಿಗೆ ಸ್ಪಂದಿಸಲು ವಿಫಲವಾದ ಎಸ್.ಎಂ.ಕೃಷ್ಣ ಸರ್ಕಾರದ ವಿರುದ್ಧ ಜನ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜನರ ಅತೃಪ್ತಿಯ ಲಾಭವನ್ನು ಬಿಜೆಪಿ ಪಡೆದುಕೊಂಡಿದೆ. ನೇಕಾರರು ಅಧಿಕ ಸಂಖ್ಯೆಯಲ್ಲಿರುವ ಕ್ಷೇತ್ರಗಳಲ್ಲಿ ಹೆಚ್ಚಾಗಿ ಕಾಂಗ್ರೆಸ್ಸಿಗೆ ಸೋಲಾಗಿ ಬಿಜೆಪಿ ಗೆದ್ದಿದೆ. ನೇಕಾರರು ಕಾಂಗ್ರೆಸ್ಸಿಗೆ ವಿರುದ್ಧವಾಗಿ ಮತ ಚಲಾಯಿಸಿದ್ದರೂ, ಅದರ ಲಾಭ ಕೋಮುವಾದಿ ಬಿಜೆಪಿ ಪಕ್ಷಕ್ಕೆ ಸಿಕ್ಕಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ ಎಂದು ಅಭಿಪ್ರಾಯಪಡಲಾಯಿತು.

ಕೋಮುವಾದಿ ಬಿಜೆಪಿಯು ಅಧಿಕಾರಕ್ಕೆ ಬರುವುದನ್ನು ತಡೆಯಲು ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ(ಎಸ್) ಸಮ್ಮಿಶ್ರ ಸರ್ಕಾರವು ಅಧಿಕಾರಕ್ಕೆ ಬಂದಿರುವುದು ಸ್ವಾಗತಾರ್ಹವಾಗಿದ್ದರೂ, ರಾಜ್ಯದಲ್ಲಿ ಕೆಲಸ ಮಾಡುವ ಸರ್ಕಾರವೊಂದು ಇನ್ನೂ ಕಾಣದಂತಾಗಿದೆ ಎಂದು ಸಭೆಯು ಅಭಿಪ್ರಾಯಪಟ್ಟಿತು. ಸಾಮಾನ್ಯ ಕನಿಷ್ಠ ಕಾರ್ಯಕ್ರಂ ಘೋಷಣೆ ಆಗದಿರುವುದು, ಮಂತ್ರಿಮಂಡಲದ ವಿಸ್ತರಣೆ ಆಗದಿರುವುದು, ಬಹುಕೋಟಿ ಅಕ್ಕಿಹಗರಣ, ತೆಲಗಿ ಹಗರಣಗಳಿಂದ ಹಾಗೂ ಸೀಟಿ ವಿವಾದಗಳಲ್ಲಿ ಮುಳುಗಿದ ಸರ್ಕಾರವು ಜನರ ಕಡೆ ತಿರುಗಿನೋಡುತ್ತಿಲ್ಲ. ನನೆಗುದಿಗೆ ಬಿದ್ದಿರುವ ನೇಕಾರರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಹೋರಾಟವನ್ನು ತೀವ್ರಗೊಳಿಸುವುದು ಅನಿವಾರ್ಯವಾಗಿದೆ ಎಂದು ನಿರ್ಧರಿಸಲಾಯಿತು. ನೇಕಾರರ ವಿಶೇಷ ಪ್ಯಾಕೇಜ್‌ಗಾಗಿ ಬಜೆಟ್‌ನಲ್ಲಿ ಹಣ ಒದಗಿಸುವಂತೆ ಮತ್ತು ಶಾಲಾ ಮಕ್ಕಳ ಸಮವಸ್ತ್ರ ಬಟ್ಟೆ ಸಿದ್ಧಪಡಿಸಲು ಮುಂಗಡ ಹಣ ಬಿಡುಗಡೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಲು ಎಲ್ಲಾ ಕಡೆಗಳಲ್ಲಿ ಮತಪ್ರದರ್ಶನಗಳನ್ನು ಏರ್ಪಡಿಸಬೇಕೆಂದೂ ನಿರ್ಣಯಿಸಲಾಯಿತು.

ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚೆ

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಎಂ.ಮದನ್ ಗೋಪಾಲ ಅವರೊಂದಿಗೆ ನೇಕಾರರ ಸಮಸ್ಯೆಗಳ ಬಗ್ಗೆ ಸಮನ್ವಯ ಸಮಿತಿಯು ಚರ್ಚೆ ನಡೆಸಿತು. ರಾಜ್ಯದ ನೇಕಾರರ ಪರವಾಗಿ ಮನವಿಯೊಂದನ್ನು ಅವರಿಗೆ ಸಲ್ಲಿಸಲಾಯಿತು. ನೇಕಾರರಿಗೆ ಅಡೆತಡೆ ಇಲ್ಲದೆ ಮಜೂರಿ ಸಂದಾಯ ಮಾಡಲು ವ್ಯವಸ್ಥೆ ಮಾಡಬೇಕೆಂದೂ, ಕಳೆದ ಮೂರು ವರ್ಷಗಳಿಂದ ಪರಿಷ್ಕರಿಸದಿರುವ ನೇಕಾರರ ಮಜೂರಿಯನ್ನು ಶೇಕಡಾ 50 ರಷ್ಟು ಹೆಚ್ಚಿಸಬೇಕೆಂದೂ, ನೇಕಾರರಿಗೆ ಹಿಂದಿನಂತೆ ಹಬ್ಬದ ಮುಂಗಡವನ್ನು ನೀಡಬೇಕೆಂದೂ, ನೇಕಾರರು ಮರಣ ಹೊಂದಿದಾಗ ಅಂತ್ಯ ಸಂಸ್ಕಾರಕ್ಕಾಗಿ ನೀಡಲಾಗುತ್ತಿರುವ ನೆರವನ್ನು ರೂ.1500 ರಿಂದ ರೂ.2000 ಕ್ಕೆ ಹೆಚ್ಚಿಸಬೇಕೆಂದೂ 60 ವರ್ಷ ದಾಟಿದ ನೇಕಾರರಿಗೆ ಪಿಂಚಣಿ ಸೌಲಭ್ಯ ನೀಡಬೇಕೆಂದೂ ಮನವಿಯಲ್ಲಿ ಒತ್ತಾಯಿಸಲಾಗಿದೆ. ನೇಕಾರರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದು ವ್ಯವಸ್ಥಾಪಕ ನಿರ್ದೇಶಕರು ಭರವಸೆ ನೀಡಿದ್ದಾರೆ.

ಫಕೀರಪ್ಪ ವಿಭೂತಿ, ರಾಣೇಬೆನ್ನೂರ್

ಏಜೆನ್ಸಿದಾರರ ಗಮನಕ್ಕೆ

ಪತ್ರಿಕೆಯ ಕೆಲ ಏಜೆನ್ಸಿದಾರರು ತುಂಬಾ ಬಾಕಿ ಉಳಿಸಿಕೊಂಡಿದ್ದು, ಇದರಿಂದ ಪತ್ರಿಕೆಯ ಮುಂದಿನ ಸಂಚಿಕೆಗಳ ಪ್ರಕಟಣೆಗೆ ಆರ್ಥಿಕ ತೊಂದರೆ ಉಂಟಾಗಿದೆ. ಬಾಕಿ ಇರುವ ಏಜೆನ್ಸಿದಾರರು ಶೀಘ್ರ ಬಾಕಿ ಪಾವತಿಸದಿದ್ದರೆ ಮುಂದಿನ ಸಂಚಿಕೆಯಿಂದ ಪತ್ರಿಕೆ ನಿಲ್ಲಿಸುವುದು ಅನಿವಾರ್ಯವಾಗುತ್ತದೆ.

ಸಂ.

ಮನಮೋಹನ ಸಿಂಗ್ ಸರ್ಕಾರದ ಬಜೆಟ್ ಪ್ರಸ್ತಾವಗಳಲ್ಲಿ ವಿದೇಶಿ ನೇರ ಹೂಡಿಕೆ ಹೆಚ್ಚಳದ ಪ್ರಸ್ತಾವವನ್ನು ಎಡಪಕ್ಷಗಳು ಏಕೆ ಇಷ್ಟೊಂದು ಬಲವಾಗಿ ವಿರೋಧಿಸುತ್ತಿವೆ ಎಂಬುದನ್ನು ದೇಶದ ಜನತೆ ತಿಳಿಯುವುದು ಅಗತ್ಯವಿದೆ. ಕಾಂಗ್ರೆಸ್ ಬೆಂಬಲದಿಂದ ವಿಮಾ ನಿಯಂತ್ರಣ ಕಾನೂನನ್ನು ಪಾಸು ಮಾಡಿದ ವಾಜಪೇಯಿ ಸರ್ಕಾರದ ನೇತೃತ್ವ ವಹಿಸಿದ ಬಿಜೆಪಿಯು ಸಹಾಯ ಹಸ್ತ ಚಾಚಬಹುದು ಎಂಬುದು ಕಾಂಗ್ರೆಸ್ಸಿಗರ ಲೆಕ್ಕಾಚಾರ. ಇಡೀ ದೇಶದ ಗಮನ ಸೆಳೆದಿರುವ ಈ ಪ್ರಶ್ನೆಯ ಕುರಿತು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ **ಹರ್ಕಿಶನ್ ಸಿಂಗ್ ಸುರ್ಜಿತ್** ವಿವರಿಸಿದ್ದಾರೆ.

ಪ್ರತಿಗಾಮಿ ನೀತಿಗಳಿಂದ ಬಿಜೆಪಿಗಷ್ಟೇ ಪ್ರಯೋಜನ

ಹರ್ಕಿಶನ್ ಸಿಂಗ್ ಸುರ್ಜಿತ್



ವಿಮೆ, ದೂರಸಂಪರ್ಕ ಇತ್ಯಾದಿ ವಲಯಗಳಲ್ಲಿ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಕುರಿತಂತೆ ಇತ್ತೀಚಿನ ವಿವಾದ ದೇಶವನ್ನು ಇಕ್ಕಟ್ಟಿಗೆ ತಂದು ನಿಲ್ಲಿಸಿದೆ. ಈಗ ಯುಪಿಎ ಸರ್ಕಾರ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಮೂಲಕ ನೀಡಿದ ವಚನವನ್ನು ಮರೆಯುತ್ತಿದೆಯೋ ಎಂದು ಜನಸಾಮಾನ್ಯರು ಭಾವಿಸುವಂತಾಗಿದೆ.

ದೂರಸಂಪರ್ಕ ವಲಯದಲ್ಲಿ ಎಫ್‌ಡಿಐನ್ನು 49 ರಿಂದ 74 ಶೇಕಡಾಕ್ಕೆ, ನಾಗರೀಕ ವಿಮಾನ ಯಾನ ವಲಯದಲ್ಲಿ 40 ರಿಂದ 49 ಶೇಕಡಾಕ್ಕೆ ಮತ್ತು ವಿಮಾ ವಲಯದಲ್ಲಿ 26 ರಿಂದ 49 ಶೇಕಡಾಕ್ಕೆ ಏರಿಸುವ ಬಜೆಟ್ ಪ್ರಸ್ತಾಪಗಳ ಬಗ್ಗೆ ಎಡಪಕ್ಷಗಳಿಗೆ ಗಂಭೀರ ಆತಂಕಗಳಿವೆ. ಅವನ್ನ ಹಿಂದಕ್ಕೆ ಪಡೆಯುವಂತೆ ನಾವು ಪ್ರಯತ್ನಿಸುತ್ತೇವೆ. ದೂರಸಂಪರ್ಕ, ವಿಮಾನಯಾನ ವಲಯಗಳಲ್ಲಿ ಈ ಮಿತಿ ಏರಿಸಲು ಸಂಸತ್ತಿನ ಮಂಜೂರಾತಿ ಬೇಕಿಲ್ಲ ಎಂಬುದು ನಿಜ. ಆದರೆ ಸರ್ಕಾರ ಇದನ್ನೇ ಬಳಸಿ ತನ್ನ ಮಿತ್ರರ ಅಭಿಪ್ರಾಯವನ್ನು ಧಿಕ್ಕರಿಸಿ ತನಗೆ ಬೇಕಾದಂತೆ ಮಾಡಲು ಹೊರಟಿದೆ ಅದು ದುರದುಷ್ಟಕರ.


ವಿಮಾನ ನಿಲ್ದಾಣ ಖಾಸಗೀಕರಣ

ಇಂತಹ ಒಂದು ದುರದೃಷ್ಟಕರ ದೃಷ್ಟಾಂತವೆಂದರೆ ಮುಂಬೈ ಮತ್ತು ದಿಲ್ಲಿ ವಿಮಾನ ನಿಲ್ದಾಣಗಳ ಖಾಸಗೀಕರಣದ ಪ್ರಯತ್ನ. ಸಾಮಾನ್ಯ ಕನಿಷ್ಟ ಕಾರ್ಯಕ್ರಮ(ಸಿಎಂಪಿ) ದಲ್ಲಿ ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಘಟಕಗಳನ್ನು ಖಾಸಗಿಕರಿಸುವುದಿಲ್ಲ ಎಂದು ವಿಶೇಷವಾಗಿ ಹೇಳಲಾಗಿದೆ ಎಂಬುದನ್ನು ಗಮನಿಸಬೇಕು. ಸಹಜವಾಗಿ ಈ ವಿಚಾರಕ್ಕೂ ಎಡಪಕ್ಷಗಳು ಬೆಂಬಲಿಸಿದವು. ರೋಗಗ್ರಸ್ತ ಘಟಕಗಳಲ್ಲೂ ಯಾವುದನ್ನು ಸ್ವಲ್ಪ ಹೂಡಿಕೆಯಿಂದ ಲಾಭಕರಗೊಳಿಸಬಹುದು ಎಂಬುದನ್ನು ಸರ್ಕಾರ ಪರಿಶೀಲಿಸಬೇಕು ಎಂದು ಕೂಡಾ ಒಪ್ಪಲಾಗಿತ್ತು. ಉದಾಹರಣೆಗೆ ಒಂದು ರೋಗಗ್ರಸ್ತ ಘಟಕದಲ್ಲಿ 800 ಕೋಟಿ ರೂ. ಬಂಡವಾಳ ಹೂಡಿ ಅದನ್ನು ಸ್ವಸ್ಥಗೊಳಿಸಿದರೆ ಅದು ವರ್ಷಕ್ಕೆ 3000 ಕೋಟಿ ಲಾಭ ಕೊಡಲಾರಂಭಿಸುವುದಾದರೆ ಇಂತಹ ಹೂಡಿಕೆ ಮಾಡದಿರಲು ಸರ್ಕಾರಕ್ಕೆ ಏನೂ ಕಾರಣಗಳಿಲ್ಲ. ಸ್ವಸ್ಥಗೊಳಿಸಲಾಗದ ಘಟಕಗಳಿಗೆ ಮಾತ್ರ ಖಾಸಗೀಕರಣದ ದಾರಿಯನ್ನು ಪರಿಶೀಲಿಸಬೇಕು ಎಂಬ ಮಾತಿತ್ತು.

ಮುಂಬೈ ಮತ್ತು ದಿಲ್ಲಿ ವಿಮಾನ ನಿಲ್ದಾಣಗಳೆರಡೂ ಲಾಭದಲ್ಲಿ ನಡೆಯುತ್ತಿವೆ. ಅದನ್ನು ಖಾಸಗೀಕರಿಸುವ ಬಗ್ಗೆ ಸರ್ಕಾರ ಯೋಚಿಸಬೇಕಾಗಿಯೇ ಇರಲಿಲ್ಲ. ಆದರೆ ವಿಮಾನ ಯಾನ ಮಂತ್ರಿ ಪ್ರಫುಲ್ಲ ಪಟೇಲ್ ಮಾಡಿದ್ದು ಅದನ್ನೇ. ತನ್ನ ಹಂಚಿಕೆಯನ್ನು ಅವರು ಪ್ರಕಟಿಸಿದರು.

ಈ ಪ್ರಯತ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮಕ್ಕೆ ಕಾಯಾ ವಾಚಾ ವಿರುದ್ಧವಾಗಿದೆ ಮಾತ್ರವಲ್ಲ, ಈ ವಿಮಾನ ನಿಲ್ದಾಣಗಳ ಆಧುನೀಕರಣಕ್ಕೆ ಇದು ಅಗತ್ಯ ಎಂಬ ತರ್ಕ ಕೂಡಾ ಟೊಳ್ಳು. ವಿಮಾನ ನಿಲ್ದಾಣ ಪ್ರಾಧಿಕಾರದ ಬಳಿ ಈ ಎರಡು ವಿಮಾನ ನಿಲ್ದಾಣಗಳ ಆಧುನೀಕರಣಕ್ಕೆ ಸಾಲುವಷ್ಟು ಹಣ ಖಂಡಿತಾ ಇದೆ. ಆದ್ದರಿಂದ ಸರ್ಕಾರಕ್ಕೆ ಒಂದು ವೇಳೆ ಸದುದ್ದೇಶ ಇದ್ದರೂ ಈ ವಿಮಾನ ನಿಲ್ದಾಣಗಳ ಖಾಸಗೀಕರಣಕ್ಕೆ ಒತ್ತು ಅಥವಾ ವಿದೇಶಿ ಕಂಪನಿಗಳು ಇವನ್ನು ವಹಿಸಿಕೊಳ್ಳಲು ಅವಕಾಶ ನೀಡುವ ಪ್ರಯತ್ನ ಜನರಲ್ಲಿ ಸಂದೇಹ ಹುಟ್ಟಿಸುತ್ತದೆಯಷ್ಟೆ.

ವಿಮಾನಯಾನ ಮಂತ್ರಿಗಳು ಇದುವರೆಗೂ ಹೋರಾಟದ ಕಣಕ್ಕಿಳಿದ ವಿಮಾನ ಯಾನ ನೌಕರರ ಆತಂಕಗಳನ್ನು ನಿವಾರಿಸಲು ಪ್ರಯತ್ನಿಸಿಲ್ಲ. ಅವರ ತರ್ಕಗಳೂ ಬೇಡಿಕೆಗಳಿಗೆ ಸಮರ್ಪಕ ಉತ್ತರವನ್ನು



ನೀಡಿಲ್ಲ. ಸದ್ಯಕ್ಕೆ ವಿಮಾನ ನಿಲ್ದಾಣ ಖಾಸಗೀಕರಣದ ವಿಚಾರವನ್ನು ಮುಂದೂಡಲಾಗಿದೆ. ಅದನ್ನು ಕೈಬಿಡಲಾಗಿಲ್ಲ. ಮಂತ್ರಿಗಳು ತನ್ನ ಹಂಚಿಕೆಯನ್ನು ಈಡೇರಿಸಲು ಪ್ರಯತ್ನಿಸಿದರೆ ಆ ಆಟವನ್ನು ಹೇಗೆ ವಿಫಲಗೊಳಿಸಲಾಗುವುದು ಎಂದು ಎಡಪಕ್ಷಗಳು ಯೋಚಿಸಬೇಕಾಗಿ ಬರುತ್ತದೆ.

ದೂರ ಸಂಪರ್ಕ ವಲಯದಲ್ಲಿ

ವಿದೇಶಿ ಬಂಡವಾಳ ಹೂಡಿಕೆಯ ಪ್ರಶ್ನೆಯ ಇದೊಂದು ದುಷ್ಟ ಆಯಾಮವನ್ನು ನೋಡಿ. 1980 ರ ದಶಕದಲ್ಲಿ ಪೆಪ್ಸಿಗೆ ಆಲೂಗಡ್ಡೆ ಚಿಪ್ಸ್ ವ್ಯಾಪಾರಕ್ಕೆ ಅವಕಾಶ ನೀಡಿದಾಗ ಅದು ಪಂಜಾಬಿನ ರೈತರಿಂದ ಅತೀ ಅಗ್ಗ ಬೆಲೆಯಲ್ಲಿ, ಕೆ.ಜಿ.ಗೆ 25 ಪೈಸೆಯಂತೆ ಆಲೂಗಡ್ಡೆ ಖರೀದಿಸಿ ಚಿಪ್ಸ್‌ಗಳನ್ನು ಕೆ.ಜಿ.ಗೆ 180 ರೂ ಗೆ ಮಾರುತ್ತಿತ್ತು. ಇದು ಸೂಪರ್ ಲಾಭ ಎನ್ನುವುದಕ್ಕಿಂತ ಸೂಪರ್ ಲೂಟಿ ಎಂದೇ ಹೇಳಬೇಕು. ಈಗಲೂ ಇದು ಮುಂದುವರೆದಿದೆ. ಖರ್ಚು-ವೆಚ್ಚ ಪ್ರಮಾಣ ಸ್ವಲ್ಪ ಬದಲಾಗಿದೆಯಷ್ಟೆ. ಆಗ ಭಾರತದಲ್ಲಿ ಆಲೂಗಡ್ಡೆ ಚಿಪ್ಸ್ ತಯಾರಿಕೆಯ ತಂತ್ರಜ್ಞಾನದ ಕೊರತೆಯೇನೂ ಇರಲಿಲ್ಲ. ಅದಕ್ಕಿಂತ ಕಡಿಮೆ ಬೆಲೆಯಲ್ಲಿಯೇ ಉತ್ಪಾದಿಸಲಾಗುತ್ತಿತ್ತು. ಪೆಪ್ಸಿಯ ಪ್ರವೇಶ ನೂರಾರು ದೇಶೀ ಘಟಕಗಳನ್ನು ಕೊಂದಿತು. ಅವುಗಳಲ್ಲಿ ಹಲವು ಸಣ್ಣ ಪ್ರಮಾಣದ ಉದ್ದಿಮೆಗಳು.

ಇದೇ ದುಷ್ಟ ತರ್ಕವೇ ಈಗಲೂ ಎಫ್‌ಡಿಐ ಮಿತಿ ಏರಿಕೆಯ ಪ್ರಸ್ತಾವದಲ್ಲಿ ವ್ಯಕ್ತವಾಗುತ್ತಿದೆ. ಉದಾಹರಣೆಗೆ ಟೆಲಿಕಾಂ ಅಥವಾ ದೂರಸಂಪರ್ಕ ವಲಯದಲ್ಲಿ ಬಿಎಸ್‌ಎನ್‌ಎಲ್, ಎಂಡಿಎನ್‌ಎಲ್ ಬಳಿ ಅತ್ಯಾಧುನಿಕ ತಂತ್ರಜ್ಞಾನ ಇದೆ. ಬಿಎಸ್‌ಎನ್‌ಎಲ್ ದೇಶವ್ಯಾಪಿ ಜಾಲವನ್ನು ಹೊಂದಿವೆ. ಈ ಕಂಪನಿಗಳನ್ನು ಅಧಿಕಾರ ಶಾಹಿಯಿಂದ ಮುಕ್ತಗೊಳಿಸಿ ಇನ್ನಷ್ಟು ಸಮರ್ಥಗೊಳಿಸಬೇಕು ಎಂದು ಹಣಕಾಸು ಮಂತ್ರಿಗಳು ಹೇಳಿದ್ದರೆ ಅದನ್ನು ಅರ್ಥಮಾಡಿಕೊಳ್ಳಬಹುದಿತ್ತು. ಇದರಲ್ಲಿ ನಾವೂ ಸಕಲ ನೆರವು ಕೊಡುತ್ತಿದ್ದೆವು. ಆದರೆ ಮಂತ್ರಿಗಳ ವಿಚಾರವೇ ಬೇರೆ. ಅವರ ಪ್ರಸ್ತಾವಗಳು ಜಾರಿಗೆ ಬಂದರೆ ವಿದೇಶಿ ಕಂಪನಿಗಳು ಭಾರತೀಯ ಕಂಪನಿಗಳನ್ನು ವಹಿಸಿಕೊಂಡು ನಮ್ಮ ರಾಷ್ಟ್ರೀಯ ಹಿತಾಸಕ್ತಿಗಳಿಗೆ ಧಕ್ಕೆ ಬರುತ್ತದೆ. ವಿಎಸ್‌ಎನ್‌ಎಲ್‌ನ್ನು ವಹಿಸಿಕೊಂಡ ಮೇಲೆ ಟಾಟಾಗಳು ಅದನ್ನು ಹೊಲಬುಗೆಡಿಸಿದ ರೀತಿ ನಾಳೆ ವಿದೇಶಿ ಕಂಪನಿಗಳು ಏನು ಮಾಡಬಹುದು ಎಂಬುದನ್ನು ಸೂಚಿಸುತ್ತದೆ.

ಟೆಲಿಕಾಂನಲ್ಲಿ 74 ಶೇಕಡಾ ವಿದೇಶಿ ನೇರ ಹೂಡಿಕೆಗೆ ಅವಕಾಶ ನೀಡಿದರೆ ವಿದೇಶಿ ಕಂಪನಿಗಳಿಗೆ ಎಂತಹ ಆಯಕಟ್ಟಿನ ಸ್ಥಳದಲ್ಲಿ ಪ್ರವೇಶ ದೊರೆಯುತ್ತದೆ ಎಂಬ ಬಗ್ಗೆ ಆತಂಕವೂ ಹಣಕಾಸು ಮಂತ್ರಿಗಳಿಗೆ ಇದ್ದಂತಿಲ್ಲ. ಅಲ್ಲಿಂದ ಅವರಿಗೆ ನಮ್ಮ ರಕ್ಷಣಾ ಸಂಬಂಧಿ ಮಾಹಿತಿಗಳೂ ಲಭ್ಯವಾಗಬಹುದು. ಇದು ದೇಶದ ಭದ್ರತೆಗೆ ಒಂದು ಗಂಭೀರ ಬೆದರಿಕೆಯನ್ನು ಒಡ್ಡಬಹುದು.

ಎಫ್‌ಡಿಐ ಹೆಚ್ಚಳ ಟೆಲಿಕಾಂ ಜಾಲವನ್ನು ವಿಸ್ತರಿಸಿ, ಅದರ ಸೇವೆಗಳನ್ನು ಉತ್ತಮಗೊಳಿಸುತ್ತವೆ ಎಂಬ ಮಾತಿನ ಬಗ್ಗೆ ಸಂದೇಹಕ್ಕೆ ಬಹಳ ಅವಕಾಶಗಳಿವೆ. 1995 ರಲ್ಲಿ ದೂರಸಂಪರ್ಕ ನೀತಿ ಅಂಗೀಕಾರವಾಯಿತು. ಆದರೆ 9 ವರ್ಷಗಳಾದರೂ ಗ್ರಾಮೀಣ ದೂರಸಂಪರ್ಕ ಕುರಿತಂತೆ ತಮ್ಮ ಕರ್ತವ್ಯಗಳನ್ನು ಖಾಸಗೀ ಕಂಪನಿಗಳು ಇನ್ನೂ ಈಡೇರಿಸಿಲ್ಲ. ಮೊದಲು ಏನೋ ಮಾಡಿದ್ದಾರೆ, ಬಿಎಸ್‌ಎನ್‌ಎಲ್ ಮೇಲಿಗೆ ಮಾಡಿದ್ದರ ಎದುರು ಅದು ನಗಣ್ಯ.

ವಿಮಾ ವಲಯ

ವಿಮಾ ವಲಯದ ಬಗ್ಗೆಯೂ ಅದನ್ನೇ ಹೇಳಬಹುದು. ವಿಮಾ ವಲಯಕ್ಕೆ ದೇಶದ ಅಭಿವೃದ್ಧಿಯಲ್ಲಿ ಒಂದು ಮಹತ್ವದ ಸ್ಥಾನವಿದೆ. ಸುಮಾರು ನಾಲ್ಕೂವರೆ ವರ್ಷಗಳ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರ ಕಾಂಗ್ರೆಸ್‌ನ ನೆರವಿನಿಂದ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಮಸೂದೆಯನ್ನು ಪಾಸು ಮಾಡಿಕೊಂಡಿತು. ಆ ಮಸೂದೆಯ ಪ್ರಕಾರ ಭಾರತೀಯರು ವಿದೇಶಿ ಜೊತೆಗಾರಿಕೆಯೊಂದಿಗೆ ಮಾತ್ರವೇ ರಂಗ ಪ್ರವೇಶಿಸಲು ಸಾಧ್ಯ. ಒಂದೆಡೆ ಸ್ವದೇಶಿ ಮಂತ್ರದಿಂದ ಜನಸಾಮಾನ್ಯರನ್ನು ವಂಚಿಸುತ್ತಾ ಇನ್ನೊಂದೆಡೆ ವಿದೇಶೀಯರ ಬಗ್ಗೆ ಬಿಜೆಪಿಯ ಮೋಹಕ್ಕೆ ಇದೊಂದು ಸ್ಪಷ್ಟ ಸಾಕ್ಷ್ಯ.

1956 ರಲ್ಲಿ ದೇಶೀ ಮತ್ತು ವಿದೇಶಿ ಖಾಸಗಿ ವಿಮಾ ಕಂಪನಿಗಳನ್ನು ರಾಷ್ಟ್ರೀಕರಿಸುವ ಒಂದು ಮುಖ್ಯ ಕಾರಣ ಈ ಕಂಪನಿಗಳು ಜನರಿಗೆ ಮಾಡುತ್ತಿದ್ದ ಮೋಸ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಈ ಕಂಪನಿಗಳು ವಿಮೆ ಬಯಸುವ ಜನಸಾಮಾನ್ಯರನ್ನು ವಂಚಿಸಿ ಅವರ ಉಳಿತಾಯವನ್ನು ನುಂಗಿ ಹಾಕುವುದಕ್ಕೆ ಕುಖ್ಯಾತವಾಗಿದ್ದವು. ಕೇವಲ 5 ಕೋಟಿ ಸರ್ಕಾರಿ ಹೂಡಿಕೆಯಿಂದ ಜೀವ ವಿಮಾ ಕಾರ್ಪೋರೇಷನ್ (ಎಲ್‌ಐಸಿ) ಸರ್ಕಾರಕ್ಕೆ ಡಿವಿಡೆಂಡ್, ತೆರಿಗೆ, ಸಾಲಗಳ ಮೂಲಕ ಕೋಟಿಗಟ್ಟಲೆ ರೂಪಾಯಿಗಳನ್ನು ದೇಶದ ಅಭಿವೃದ್ಧಿಗೆ ಒದಗಿಸಿದೆ. ಇನ್ನೊಂದು ಸಾರ್ವಜನಿಕ ವಲಯದ ವಿಮಾ ಕಂಪನಿ ಜಿಐಸಿ ಕೂಡಾ ಇಂತಹುದೇ ಉತ್ತಮ ದಾಖಲೆ ಹೊಂದಿದೆ. ಈ ಕಂಪನಿಗಳು ಕೃಷಿ, ಗ್ರಾಮೀಣ ಅಭಿವೃದ್ಧಿ ಮತ್ತು ಸಣ್ಣ ಉದ್ದಿಮೆಗಳಿಗೆ ಮಾಡಿದ್ದನ್ನು ಮೀರಿ ಮುಂದೆ ಹೋಗಲು ಯಾರಿಂದಲೂ ಸಾಧ್ಯವಿಲ್ಲ. ಈ ಖಾಸಗೀ ಕಂಪನಿಗಳಿಗೆ ಲಾಭವೇ ತಂದೆ-ತಾಯಿಯಾಗಿರುವಾಗ ಇಂತಹ ಆಕರ್ಷಕವಲ್ಲದ, ಆದರೆ ಮಹತ್ವದ ವಲಯಗಳಿಗೆ ಅವು ಬರಲು ಇಷ್ಟಪಡುವುದಿಲ್ಲ.

ಐಆರ್‌ಡಿಎ ಶಾಸನ ಬಂದ ಮೇಲೆ ವಿಮಾ ರಂಗ ಪ್ರವೇಶಿಸಿದ ಹಲವಾರು ದೇಶಿ-ವಿದೇಶಿ ಜೋಡಿಗಳು ಮಾಡಿರುವುದೇನು? ಅವು ವಿಮಾ ಮಾರುಕಟ್ಟೆಯಲ್ಲಿ ವಿಶೇಷ ಸಾಧನೆಯನ್ನೇನನ್ನೂ ತೋರಿಸಿಲ್ಲ. ಸಾರ್ವಜನಿಕ ವಲಯದ ವಿಮಾ ಉದ್ದಿಮೆ ಈಗಲೂ ಮಾರುಕಟ್ಟೆಯ 92 ಶೇಕಡಾ ಪಾಲು ಪಡೆದಿದೆ. ಅಂದರೆ ವಿಮೆ ಬಯಸುವ ಸಾರ್ವಜನಿಕರಿಗೆ ಈಗಲೂ ಈ ಖಾಸಗಿ ಕಂಪನಿಗಳ ಬಗ್ಗೆ ಭರವಸೆಯಿಲ್ಲ. ಅವು ಎಲ್‌ಐಸಿ, ಜಿಐಸಿಗಳಲ್ಲೇ ವಿಶ್ವಾಸ ಇಟ್ಟಿವೆ ಎಂಬುದು ಒಂದು ಸರಳ ಸತ್ಯ. ಖಾಸಗಿ ಕಂಪನಿಗಳು ಹೂಡಿಕೆದಾರರ ಎದುರು ಆಕರ್ಷಕ ಪ್ರಸ್ತಾವಗಳನ್ನಿಡುತ್ತಾರೆ ಎಂಬುದು ನಿಜ.

ಆದರೆ ಅವು ಅಷ್ಟೇ ವಂಚನೆಯಿಂದ ಕೂಡಿರುತ್ತವೆ ಎಂಬುದೂ ನಿಜ. ಉದಾಹರಣೆಗೆ, ಒಂದು ಖಾಸಗಿ ಕಂಪನಿ ಒಮ್ಮೆ ನೀವು ರೂ. 1940 ಕೊಟ್ಟರೆ ಹತ್ತು ವರ್ಷಕ್ಕೆ ನಿಮ್ಮ ಜೀವಕ್ಕೆ ವಿಮೆ ಮಾಡಿಸುತ್ತೇವೆ ಎನ್ನುತ್ತಾರೆ. ಆದರೆ ಹತ್ತು ವರ್ಷಗಳಲ್ಲಿ ನೀವೇನಾದರೂ ಮರಣಾಂತಿಕ ಅಪಘಾತಕ್ಕೆ ಒಳಗಾಗದಿದ್ದರೆ ನೀವು ಕೊಟ್ಟ ಪ್ರೀಮಿಯಂ ಹಣವೂ ಹಿಂದೆ ಬರುವುದಿಲ್ಲ ಎಂಬುದನ್ನು ಮಾತ್ರ ಅದು ಹೇಳುವುದಿಲ್ಲ. ಖಾಸಗಿಯವರ ಪ್ರವೇಶದಿಂದ ತಮ್ಮ ಆದಾಯ ಹೆಚ್ಚುತ್ತದೆ ಎಂದು ನಿರೀಕ್ಷಿಸಿದ್ದ ವಿಮಾ ಏಜೆಂಟರೂ ಕೂಡಾ ನಿರಾಶರಾಗಿರುವ ಪರಿಸ್ಥಿತಿ ಅಲ್ಲಿದೆ?

ಮಂತ್ರಿಗಳಿಗೆ ಯಾವ ಬಗ್ಗೆ ಆತಂಕ?

ಈ ಎಲ್ಲಾ ಸಂಗತಿಗಳು ಸರಳ ಹಾಗೂ ಸ್ಪಷ್ಟವಾಗಿದೆ. ಆದರೂ ಹಣಕಾಸು ಮಂತ್ರಿಗಳು ಇವುಗಳತ್ತ ಗಮನ ನೀಡಲು ನಿರ್ಧರಿಸಿದಂತೆ ಕಾಣುತ್ತದೆ. ಬಹುಶಃ ಜನತೆಯ ಹಿತಾಸಕ್ತಿಗಳನ್ನು ಬಲಿಗೊಟ್ಟು ದೇಶೀ-ವಿದೇಶಿ ಖಾಸಗಿಯವರಿಗೆ ಪ್ರಯೋಜನ ಒದಗಿಸಲು ಧಾವಿಸುವುದು ಅವರ ಉದ್ದೇಶವಿರಬಹುದು.

ಇತ್ತೀಚಿಗೆ ನಡೆದ ತಮಾಷೆಯನ್ನು ನೋಡಿ. ಪಿ.ಚಿದಂಬರಂರವರು ತಮ್ಮ ಬಜೆಟ್‌ನ್ನು ಮಂಡಿಸುವ ದಿನ ಜುಲೈ 8 ರ ಬೆಳಗಿನ ದಿಲ್ಲಿ ಪತ್ರಿಕೆಗಳಲ್ಲಿ ಪ್ರಮುಖವಾಗಿ ಎಲ್ಲದರಲ್ಲೂ ಒಂದು

ಪುಟ 10 ಕ್ಕೆ

ಶೇರು ಅಂದರೇನು? ಶೇರು ಮಾರುಕಟ್ಟೆ ಅಂದರೇನು? ಶೇರು ಮಾರುಕಟ್ಟೆಯಲ್ಲಿ ಕುಸಿತ ಹೇಗೆ ಉಂಟಾಗುತ್ತದೆ? ಶೇರು ಮಾರುಕಟ್ಟೆಗೂ ದೇಶದ ಅರ್ಥವ್ಯವಸ್ಥೆಗೂ ಏನು ಸಂಬಂಧ? ಎಂಬ 'ಐಕ್ಯರಂಗ' ಓದುಗರ ಪ್ರಶ್ನೆಗಳಿಗೆ ಈ ಲೇಖನವು ಉತ್ತರಗಳನ್ನು ಒದಗಿಸುತ್ತದೆ

ಶೇರುಪೇಟೆಯ

ಲೋಕಸಭಾ ಚುನಾವಣೆಯ ಫಲಿತಾಂಶಗಳು ಪ್ರಕಟವಾಗುತ್ತಿದ್ದಂತೆಯೇ, ಶೇರುಪೇಟೆಯ ತಲ್ಲಣಗಳನ್ನು ಮಾಧ್ಯಮಗಳು ವಿಪರೀತವಾಗಿ ಬಿಂಬಿಸಿದವು. ಇಡೀ ದೇಶದ ಆರ್ಥಿಕತೆಯೇ ಕುಸಿತದ ಅಪಾಯಕ್ಕೆ ಒಳಗಾಗಿದೆ ಎಂಬ ಭ್ರಮೆಯನ್ನು ಮೂಡಿಸಿದವು. ಲಕ್ಷಾಂತರ ಕೋಟಿ ರೂ.ಗಳ ನಷ್ಟವಾಗಿದೆಯೇನೋ ಎಂಬಂತೆ ಚಿತ್ರಿಸುವ ಪ್ರಯತ್ನವೂ ನಡೆಯಿತು. ಇದಕ್ಕೆಲ್ಲಾ ಎಡಪಕ್ಷಗಳೇ ಕಾರಣ ಎಂಬ ಅಪಪ್ರಚಾರವೂ ಜೋರಾಗಿಯೇ ನಡೆಯಿತು. ಪತ್ರಿಕೆಗಳ ಸಂಪಾದಕೀಯಗಳಲ್ಲಿ, ಮಾಧ್ಯಮಗಳ ಸುದ್ದಿ ಬಿತ್ತರದಲ್ಲಿ ಎಡಪಕ್ಷಗಳನ್ನು ತೆಗಳುವ ಭರಾಟೆಯೂ ಸಾಗಿತು. ಈಗ ಈ ವಿಷಯ ಸಾಕಷ್ಟು ತಣ್ಣಗಾಗಿದೆ. ಮಾಧ್ಯಮಗಳು ನಡೆಸಿದ ಅಪಪ್ರಚಾರ ಹುರುಳಿಲ್ಲದ್ದು ಎಂಬ ಸತ್ಯ ಎಲ್ಲರಿಗೂ ಮನವರಿಕೆಯಾಗುತ್ತಿದೆ.


ಶೇರುಪೇಟೆಯ ವ್ಯವಹಾರಗಳ ಬಗ್ಗೆ ಸಾಮಾನ್ಯ ಜನರಿಗೆ ಏನೇನೂ ಗೊತ್ತಿಲ್ಲ. ಇಂತಹ ಅರಿವಿನ ಕೊರತೆಯೇ ಅಪಪ್ರಚಾರದ ಸುಳ್ಳಿನ ಸರಮಾಲೆಗೆ ಇಂಬು ಕೊಡುತ್ತದೆ.

ವಾಸ್ತವವಾಗಿ ಶೇರು ಎಂದರೇನು? ಶೇರು ಎಂದರೆ ಮಾಲೀಕತ್ವದ (ಅಂದರೆ ಉದ್ಯಮವೊಂದರ ಒಡೆತನದಲ್ಲಿ) ಒಂದು ಪಾಲು. ಒಬ್ಬರು ಅಥವಾ ಕೆಲವೇ ಕೆಲವು ಜನ ಒಟ್ಟಾಗಿ ಉದ್ಯಮವೊಂದರ ಸ್ಥಾಪನೆಗೆ ಬೇಕಾಗುವ ಬಂಡವಾಳವನ್ನು ತೊಡಗಿಸಲು ಸಾಧ್ಯವಿಲ್ಲದಾಗ, ಶೇರುಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡಿ ಅಗತ್ಯವಾದ ಬಂಡವಾಳವನ್ನು ಶೇಖರಿಸಲಾಗುತ್ತದೆ. ಯಾರು ಬೇಕಾದರೂ (ಹಣವಿದ್ದವರು) ಇದರಲ್ಲಿ ಹಣ ತೊಡಗಿಸಬಹುದು.

ಇಂತಹ ಹೂಡಿಕೆಗಳಿಗೆ ಪ್ರತಿವರ್ಷ ಆ ಉದ್ಯಮವು ಗಳಿಸುವ ಲಾಭದಲ್ಲಿ ಒಂದಂಶವನ್ನು ಲಾಭಾಂಶ (ಡಿವಿಡೆಂಡ್) ರೂಪದಲ್ಲಿ ನೀಡಲಾಗುತ್ತದೆ. ಇಂತಹ ಶೇರುಗಳ ಮುಖಬೆಲೆ (face value) ನಿಗದಿತವಾಗಿರುತ್ತದೆ. ಉದಾಹರಣೆಗೆ, 10 ರೂ.ಮುಖಬೆಲೆಯ ಶೇರುಗಳು. ಇಂತಹ ಹಲವು ಶೇರುಗಳನ್ನು ಹೂಡಿಕೆದಾರ ಖರೀದಿಸಬಹುದು ಮತ್ತು ಅಂತಹ ಹೂಡಿಕೆಗಳ ಮೇಲೆ ಬರುವ ಲಾಭಾಂಶವನ್ನು ವರ್ಷವರ್ಷವೂ ಪಡೆಯುತ್ತಾ ನೆಮ್ಮದಿಯಾಗಿರಬಹುದು. ಲಾಭಾಂಶದ ಪ್ರಮಾಣ ಕಡಿಮೆ ಎಂದು ಭಾವಿಸಬೇಡಿ. ಕೆಲವು ಕಂಪನಿಗಳು ಶೇ.100 ಕ್ಕೂ ಮೀರಿ ಲಾಭಾಂಶ ಪ್ರಕಟಿಸಿದ್ದೂ ಇದೆ. ಪ್ರಸಕ್ತ ಇಂತಹ ಲಾಭಾಂಶಗಳ ದರ ಶೇ.12 ರಿಂದ ಶೇ. 50 ವರೆಗೂ ಇದೆ. ಅಂದರೆ ಒಂದು ಲಕ್ಷ ರೂ.ಗಳಷ್ಟು ಹಣವನ್ನು ಅಂತಹ ಕಂಪನಿಗಳ ಶೇರುಗಳ ಮೇಲೆ ಹೂಡಿದರೆ ವರ್ಷವೊಂದಕ್ಕೆ ರೂ.12000 ರಿಂದ ರೂ.50000 ದವರೆಗೂ ಲಾಭಾಂಶವನ್ನು ಪಡೆಯಬಹುದು. ಬ್ಯಾಂಕುಗಳಲ್ಲಿ ಉಳಿತಾಯ ಮಾಡುವ ಸಾಮಾನ್ಯ ಜನರಿಗೆ ಹೆಚ್ಚೆಂದರೆ ಕೇವಲ ಶೇ.6 ಮಾತ್ರ ಬಡ್ಡಿ ಲಭ್ಯ. ಇದೇ ರೀತಿ ಅಂಚೆ ಕಛೇರಿಗಳಲ್ಲಿ ಹೂಡಿದ ಹಣಕ್ಕೆ ಶೇ.8ವರೆಗೂ ಲಭಿಸುತ್ತದೆ. ಬಡ ಕಾರ್ಮಿಕರ ಭವಿಷ್ಯನಿಧಿಗೆ ಶೇ.9.5 ಬಡ್ಡಿ ನೀಡಿಕೆ ಮುಂದುವರಿಸಲು ತಕರಾರು ಮಾಡಲಾಗುತ್ತಿದೆ. ಆದರೆ ಶ್ರೀಮಂತರ ಆದಾಯಗಳಿಕೆಗೆ ಯಾವ ಮಿತಿಯೂ ಇಲ್ಲ.

ಶೇರು ಪೇಟೆಯ ವ್ಯವಹಾರ ಕೇವಲ ಶೇರುಗಳಲ್ಲಿ ಹಣ ಹೂಡಿಕೆ ಮತ್ತು ಪ್ರತಿವರ್ಷ ಲಾಭಗಳಿಕೆಗೇ ಸೀಮಿತವಾಗಿದ್ದಲ್ಲಿ, ಈ ವ್ಯವಸ್ಥೆಯಲ್ಲಿ ನಡೆಯುವುದೇ ಹೀಗೆ ಎಂದು ಭಾವಿಸಬಹುದಿತ್ತು. ಆದರೆ ಇಷ್ಟಕ್ಕೇ ನಿಂತಿಲ್ಲ. ಹೂಡಿಕೆ ಮತ್ತು ಲಾಭದ ವ್ಯಾಪ್ತಿಯನ್ನೇ ಮೀರಿ ಅದು ಮುಂದು ಹೋಗಿದೆ.

ಜಾಗತೀಕರಣದ ಪ್ರಕ್ರಿಯೆ ಮುಂದುವರೆದಂತೆಲ್ಲಾ, ಉಳ್ಳವರ ಸಂಪತ್ತು ಇನ್ನಷ್ಟು, ಮತ್ತಷ್ಟು ವೃದ್ಧಿಯಾಗಿರುವುದು ನಿಚ್ಚಳವಾಗಿ ವ್ಯಕ್ತವಾಗಿದೆ. ಲಾಭದ ಪ್ರಮಾಣ ಅಧಿಕಗೊಂಡಿರುವುದೇ ಇದಕ್ಕೆ ಕಾರಣ. ಸಂಪತ್ತು ಹೆಚ್ಚಿದಂತೆಲ್ಲಾ, ಇನ್ನೂ ಬೇಕು ಎಂಬ ತಹತಹ ಬಂಡವಾಳಿಗರಲ್ಲಿ ಉದ್ಭವಿಸುತ್ತದೆ. ನೇರ ಮಾರ್ಗಗಳಲ್ಲಿ ಅದನ್ನು ಸಾಧಿಸಲಾಗದಿದ್ದರೆ, ಅಡ್ಡದಾರಿಗಳನ್ನವರು ಹಿಡಿಯುತ್ತಾರೆ. ಉತ್ಪಾದನೆಯನ್ನು ಹೆಚ್ಚಿಸುವ, ವೆಚ್ಚವನ್ನು ತಗ್ಗಿಸುವ ಪ್ರಯತ್ನಗಳು ನಡೆಯುತ್ತವೆ. ಆದರೆ ಉತ್ಪಾದಿಸಿದ್ದೆಲ್ಲಾ ಮಾರಾಟವಾಗಬೇಕಲ್ಲವೆ? ಅದಕ್ಕೂ ಒಂದು ಮಿತಿ ಇದೆ. ಕೊಳ್ಳುವವರ ಶಕ್ತಿ ಮತ್ತು ಸಂಖ್ಯೆಗೂ ಮಿತಿಗಳಿರುತ್ತವೆ. ಅದಕ್ಕಾಗಿ, ಮಾರುಕಟ್ಟೆಯ ಮೇಲೆ ನಿಯಂತ್ರಣವನ್ನು ಸಾಧಿಸುವ ಕಾಯಕ ನಡೆಯುತ್ತದೆ. ಕೃತಕ ಅಭಾವ ಸೃಷ್ಟಿಸುವ ಮೂಲಕ ಬೆಲೆ ಏರಿಸಿ ಲಾಭ ಕೊಳ್ಳೆ ಹೊಡೆಯುವ ಪರಿ ಒಂದೆಡೆಯಾದರೆ, ಜಾಹೀರಾತುಗಳ ಮೂಲಕ ಆಮಿಷ ಹುಟ್ಟಿಸಿ ತೀರಾ



ಅನಾವಶ್ಯಕವಾದ ಸರಕುಗಳಿಗೆ ಬೇಡಿಕೆ ಹೆಚ್ಚಿಸುವುದು ಇನ್ನೊಂದು ಪರಿ. ಕಡೆಗೆ ಇಡೀ ಮಾರುಕಟ್ಟೆಯ ಮೇಲೆ ಸಂಪೂರ್ಣ ಹತೋಟಿ ಸ್ಥಾಪಿಸಿ, ಕೊಳ್ಳೆ ಹೊಡೆಯುವ ಪ್ರಕ್ರಿಯೆಯನ್ನು ಗಟ್ಟಿಗೊಳಿಸುವಲ್ಲಿಗೂ ಇದು ಮುಂದುವರೆಯುತ್ತದೆ. (ಉದಾಹರಣೆಗೆ, ಕೋಕಾಕೋಲಾ ಮತ್ತು ಪೆಪ್ಸಿ. ಇವರಿಬ್ಬರದೇ ಈಗ ಮಾರುಕಟ್ಟೆ. ಮೊದಲಿದ್ದ ಇತರರು ಹೇಳ ಹೆಸರಿಲ್ಲದಂತಾಗಿದ್ದಾರೆ!)

ಆದರೆ ಇದರೊಂದಿಗೇನೇ ಇನ್ನೊಂದು ಪ್ರಕ್ರಿಯೆಯೂ ನಡೆಯುತ್ತಿರುತ್ತದೆ. ಮಾರುಕಟ್ಟೆಯ ಮೇಲೆ ನಿಯಂತ್ರಣ ಎಂದರೆ ಇತರ ಮಾರುಕಟ್ಟೆಗಳನ್ನು ವಶಪಡಿಸಿಕೊಳ್ಳುವುದು. ಸ್ಥಳೀಯ ಉತ್ಪಾದನಾ ಘಟಕಗಳು ಇದರಿಂದಾಗಿ ನಿಷ್ಕ್ರಿಯಗೊಳ್ಳುತ್ತವೆ. ಉತ್ಪಾದನೆಗೆ ಮೊದಲಿದ್ದ ಆದ್ಯತೆ ಇಲ್ಲವಾಗುತ್ತವೆ. ಉತ್ಪಾದನಾ ವೆಚ್ಚ ತಗ್ಗಿಸುವ ನೆಪದಲ್ಲಿ ಉದ್ಯೋಗಕಡಿತ, ಖಾಯಂ ಉದ್ಯೋಗಗಳ ಬದಲಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ, ಕೆಲಸದ ಹೊರೆಯಲ್ಲಿ ಹೆಚ್ಚಳ ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಇದೆಲ್ಲದರ ಪರಿಣಾಮವಾಗಿ ಸಾಮಾನ್ಯ ಜನರ ಕೊಳ್ಳುವ ಶಕ್ತಿ ಕುಂಠಿತವಾಗುತ್ತದೆ. ಸಂಪತ್ತು ಕೂಡಾ ಉಳ್ಳವರ ತಿಜೋರಿಗೆ ಹರಿದು ಹೋಗುವುದರಿಂದಾಗಿ, ಬಹುಪಾಲು ಜನ ದಾರಿದ್ರ್ಯದ ಸಂಕಷ್ಟಕ್ಕೆ ಒಳಗಾಗುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ, ಉತ್ಪಾದನೆಯನ್ನು ಇನ್ನಷ್ಟು ಹೆಚ್ಚಿಸುವುದರಿಂದ ಬಂಡವಾಳಿಗನಿಗೆ ಹಾನಿಯೇ ಆಗುವುದಲ್ಲದೆ, ಲಾಭ ಹೆಚ್ಚಿಸಿಕೊಳ್ಳುವ ಆತನ ಆಸೆ ಫಲಿಸುವ ಸಂಭವ ಕಡಿಮೆಯಾಗುತ್ತದೆ. ಸಹಜವಾಗಿಯೇ ಉತ್ಪಾದಕತೆಯನ್ನು ವಿಸ್ತರಿಸುವ ಪ್ರಯತ್ನಗಳು ಕ್ಷೀಣವಾಗುತ್ತವೆ.

ಇದೇ ಸಮಯದಲ್ಲಿ, ಅಪಾರವಾಗಿ ಹರಿದುಬಂದ ಲಾಭ ದೊಡ್ಡ ಪ್ರಮಾಣದಲ್ಲಿ ಸಂಗ್ರಹವಾಗಿ ಬಂಡವಾಳದ ವೃದ್ಧಿಯಾಗಿರುತ್ತದೆ. ಇದನ್ನು ಪುನಃ ವ್ಯವಹಾರದಲ್ಲಿ ಹೂಡಲೇಬೇಕು. ಏಕೆಂದರೆ ಲಾಭವಿಲ್ಲದೆ ಬಂಡವಾಳ ಉಳಿಯಲಾರದು. ಆದರೆ ಅದನ್ನು ತೊಡಗಿಸುವುದಾದರೂ ಎಲ್ಲಿ? ಈ ಮೊದಲೇ ವಿವರಿಸಿದಂತೆ ಉತ್ಪಾದನೆಗೆ, ಮಾರುಕಟ್ಟೆಗೆ, ಕೊಳ್ಳುವವರ ಶಕ್ತಿ ಮತ್ತು ಸಂಖ್ಯೆಗೆ ಮಿತಿಗಳಿರುತ್ತವೆ. ಲಾಭಕ್ಕೆ ಮಾತ್ರ ಮಿತಿ ಇರುವುದಿಲ್ಲ. ಈ ವಿಷಮ ಪರಿಸ್ಥಿತಿಯಿಂದ ಪಾರಾಗಲು ಬಂಡವಾಳಿಗರಿಗೆ ಇರುವುದೊಂದೇ ದಾರಿ. ಉತ್ಪಾದನೆ ಇಲ್ಲದ ಕ್ಷೇತ್ರಗಳಲ್ಲಿ ಬಂಡವಾಳವನ್ನು ಹರಿಯಬಿಡುವುದು. ಬಂಡವಾಳ ಹೂಡಿಕೆಯ ಈ ಹಂತವನ್ನು ನಾವು ಜೂಜುಕೋರ ಬಂಡವಾಳ (speculative capital) ಎನ್ನುತ್ತೇವೆ. ಮೊದಲು ಕುದುರೆ ಪಂದ್ಯ (Horse race), ಲಾಟರಿ ಇತ್ಯಾದಿ ಮಾತ್ರವೇ ಇತ್ತು. ಈಗ ಪ್ರತಿಯೊಂದು ಕ್ರೀಡೆಯಲ್ಲೂ ಜೂಜು ವ್ಯವಹಾರ ನಡೆಯುತ್ತದೆ. ಉದಾಹರಣೆಗೆ ಕ್ರಿಕೆಟ್, ಫುಟ್‌ಬಾಲ್, ಟೆನಿಸ್ ಇತ್ಯಾದಿ. ದೊಡ್ಡ ದೊಡ್ಡ ಜೂಜು ಕೇಂದ್ರಗಳು ತಲೆಯೆತ್ತಿವೆ. ರಿಸಾರ್ಟುಗಳು, ಕ್ಲಬ್ಬುಗಳು ದಿಢೀರನೆ ಉದ್ಭವವಾಗಿ ಐಷಾರಾಮಿ ಜೀವನಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಒದಗಿಸುತ್ತಿವೆ. ಆದರೆ ಇವುಗಳಲ್ಲಿನ ಹೂಡಿಕೆಗೂ ಮಿತಿ ಇದೆ. ದಿನೇ ದಿನೇ ಹೆಚ್ಚುತ್ತಿರುವ ಬಂಡವಾಳದ ಪ್ರಮಾಣದಲ್ಲಿ, ಕೇವಲ ಅಲ್ಪಭಾಗ ಮಾತ್ರ ಇಂತಹ ಕ್ಷೇತ್ರಗಳಲ್ಲಿ ಹೂಡಿಕೆಯಾಗುತ್ತದೆ. ಇನ್ನುಳಿದಂತೆ ಬಹು ದೊಡ್ಡ ಭಾಗ, ಶೇರು ಮಾರುಕಟ್ಟೆಗೆ ಬರುತ್ತದೆ.

ಈ ಮೊದಲೇ ಹೇಳಿದಂತೆ, ಶೇರುಗಳ ಮುಖ ಬೆಲೆ ನಿಗದಿತವಾಗಿರುತ್ತದೆ. ಅಲ್ಲದೆ ಮಾರುಕಟ್ಟೆಗೆ ಬಿಡುಗಡೆಯಾಗುವ ಶೇರುಗಳ ಸಂಖ್ಯೆಯೂ ನಿಗದಿತವಾಗಿರುತ್ತದೆ. ಹೆಚ್ಚು ಹೆಚ್ಚು ಹಣ ಶೇರು ಮಾರುಕಟ್ಟೆಗೆ ಬಂದಂತೆ, ಶೇರುಗಳಿಗೆ ಬೇಡಿಕೆ ಏರುತ್ತದೆ. ಪರಿಣಾಮವಾಗಿ ಶೇರುಗಳ ಬೆಲೆಯೂ ಏರುತ್ತದೆ. ಕಡಿಮೆ ಬೆಲೆಗೆ ಕೊಂಡು ಹೆಚ್ಚಿನ ಬೆಲೆಗೆ ಮಾರುವ ಮತ್ತು ಆ ಮೂಲಕ ಅಪಾರ ಲಾಭಗಳಿಸುವ ಪ್ರವೃತ್ತಿ ಹೆಚ್ಚುತ್ತದೆ. ಇದು ಎಷ್ಟೊಂದು ವಿಪರೀತ ಪ್ರಮಾಣಕ್ಕೆ ಏರಿದೆಯೆಂದರೆ, ಒಂದೇ ದಿನದಲ್ಲಿ ಒಂದು ಶೇರಿನ ಬೆಲೆ ಹತ್ತಾರು ಸಲ ಏರಿಳಿತಗಳನ್ನು ಕಾಣುತ್ತದೆ. ಬೆಳಿಗ್ಗೆ ಕೊಂಡ ಶೇರುಗಳನ್ನು ಮಧ್ಯಾಹ್ನ ಮಾರಿ ಲಾಭಗಳಿಸಬಹುದು. ಅಥವಾ ಬೆಳಿಗ್ಗೆ ಹೆಚ್ಚಿನ ಬೆಲೆಗೆ ಮಾರಿದ ಶೇರುಗಳನ್ನು, ಸಂಜೆಯ ಹೊತ್ತಿಗೆ ಅವುಗಳ ಬೆಲೆ ಕಡಿಮೆ ಆದಾಗ ಪುನಃ ಖರೀದಿಸಲೂಬಹುದು. ಅಂದರೆ ವ್ಯವಹಾರ ಮುಗಿಸಿ ಮನೆಗೆ ಹೋಗುವಾಗ ಬೆಳಿಗ್ಗೆ ಒಯ್ದಿದ್ದ ಶೇರುಗಳನ್ನು ಮಾತ್ರವಲ್ಲ, ವ್ಯವಹಾರಗಳಲ್ಲಿ ಗಳಿಸಿದ ಲಾಭದ ಗಂಟನ್ನೂ ಸಾಗಿಸಬಹುದು. ಬೇರೆ ರೀತಿಯ ವ್ಯವಹಾರಗಳಲ್ಲಿ ನಿಮ್ಮ ಸರಕನ್ನು ಇತರರಿಗೆ ವರ್ಗಾಯಿಸಿದಾಗ ಮಾತ್ರ ನಗದು ನಿಮ್ಮ ಕೈಸೇರುತ್ತದೆ. ಆದರೆ ಇಲ್ಲಿ ಹಾಗಲ್ಲ. ನಿಮ್ಮ ಸರಕು ನಿಮ್ಮ ಬಳಿಯೇ ಇರಬಹುದು. ಮಾತ್ರವಲ್ಲ, ಲಾಭದ ರೂಪದಲ್ಲಿ ನಗದೂ ಸಹ ನಿಮ್ಮ ಕೈ ಸೇರಬಹುದು.

ಇದಕ್ಕೊಂದು ಸಣ್ಣ ಉದಾಹರಣೆಯನ್ನು ಕೊಡೋಣ. ದೃಶ್ಯ ಮಾಧ್ಯಮದ ಎನ್‌ಡಿಟಿವಿ(NDTV) ಯು ಯಾರಿಗೆ ತಾನೇ ಗೊತ್ತಿಲ್ಲ. (ಶೇರು ಮಾರುಕಟ್ಟೆಯ ತಲ್ಲಣಗಳನ್ನು ವಿಜೃಂಭಿತವಾಗಿ ಬಿಂಬಿಸುತ್ತಾ, ಎಡಪಕ್ಷಗಳ ನಿಂದನೆಗೆ ಸಾಕಷ್ಟು ಸಮಯವನ್ನು ಬಳಸಿಕೊಂಡ ಮಾಧ್ಯಮ ಸಂಸ್ಥೆಗಳಲ್ಲಿ ಇದೂ ಒಂದು!) ಎನ್‌ಡಿಟಿವಿ ಗೆ ಯಾಕೆ ಶೇರು ಮಾರುಕಟ್ಟೆಯ ಬಗ್ಗೆ ಅಷ್ಟೊಂದು ಕಾಳಜಿ? ಕಳಕಳಿ? ಬೇರೇನೂ ಇಲ್ಲ. 19.05.2004 ರಂದು ಎನ್‌ಡಿಟಿವಿಯ ಶೇರುಗಳು ಮಾರುಕಟ್ಟೆಗೆ ಬಿಡುಗಡೆಯಾದವು. 10 ರೂ. ಮುಖಬೆಲೆಯ ಶೇರುಗಳನ್ನು ರೂ.70ರಂತೆ ವಿತರಿಸಲಾಗಿತ್ತು. (ಅಂದರೆ ಕಂಪನಿಯ ಖಜಾನೆಗೆ ಪ್ರತಿಶೇರಿಗೆ ರೂ.60 ರಂತೆ ಹೆಚ್ಚುವರಿ ಸಂಪತ್ತು ರವಾನೆ!) ಮುಂಬಯಿಯ ಶೇರು ವಿನಿಮಯ ಕೇಂದ್ರದಲ್ಲಿ (Bombay Stock Exchange) ಬಿಡುಗಡೆಯಾದಾಗ ಈ ಶೇರಿನ ಬೆಲೆ ಪ್ರಾರಂಭದಲ್ಲಿ ರೂ.101 ರಷ್ಟಿತ್ತು. ಬೆಲೆ ರೂ.124.85 ರ ಗರಿಷ್ಠ ಮಟ್ಟಕ್ಕೆ ಏರಿ, ಆ ನಂತರ ರೂ.86.65 ಕ್ಕೆ ಇಳಿದು, ದಿನದ ಅಂತ್ಯದಲ್ಲಿ ರೂ.99.40 ಕ್ಕೆ ಬಂದು ನಿಂತಿತ್ತು. ಒಂದೇ ದಿನದಲ್ಲಿ, ಬೊಂಬಾಯಿ ಕೇಂದ್ರದಲ್ಲಿ ಸುಮಾರು 66 ಲಕ್ಷ ಎನ್‌ಡಿಟಿವಿ ಶೇರುಗಳ ವ್ಯವಹಾರ ನಡೆಯಿತು. 70 ರೂ. ಮುಖಬೆಲೆಯ ಶೇರುಗಳು, ದಿನಾಂತ್ಯದ ಬೆಲೆ ರೂ.99.40ಕ್ಕೆ ಮಾರಾಟ ಆಗಿದೆ ಎಂದುಕೊಂಡರೂ, ಪ್ರತಿಶೇರಿನ ಮೇಲೆ ರೂ.29.40 ರಷ್ಟು ಲಾಭ! ಅಥವಾ ರೂ.86.65 ರ ಬೆಲೆಗೆ ಮಾರಾಟವಾಗಿದೆ ಎಂದರೂ ಸಹಾ, ಲಾಭದ ಪ್ರಮಾಣ ರೂ.16.65 ರಷ್ಟು. 66 ಲಕ್ಷ ಶೇರುಗಳ ವಹಿವಾಟು ನಡೆದಿದೆ ಎಂದರೆ ಕನಿಷ್ಟ ರೂ.10.99 ಕೋಟಿಗಳಷ್ಟು ಲಾಭ ಒಂದೇ ದಿನದಲ್ಲಿ, ಎನ್‌ಡಿಟಿವಿ ಶೇರುಗಳ ವ್ಯವಹಾರದಲ್ಲಿ ಬಾಂಬೆ ವಿನಿಮಯ ಕೇಂದ್ರವೊಂದರಲ್ಲೇ ಗಿಟ್ಟಿತು. (ರಾಷ್ಟ್ರೀಯ ವಿನಿಮಯ ಕೇಂದ್ರದಲ್ಲೂ (National Stock Exchange) ಅಂದು, ಸುಮಾರು 130 ಲಕ್ಷಗಳಷ್ಟು ಎನ್‌ಡಿಟಿವಿ ಶೇರುಗಳ ವಹಿವಾಟು ನಡೆಯಿತು!)

ಶೇರು ಬೆಲೆಗಳಲ್ಲಿ ಇಷ್ಟೊಂದು ಪ್ರಮಾಣದ ಏರಿಳಿತ, ಅದೂ ಒಂದೇ ದಿನದಲ್ಲಿ ಆಗುವುದಾದರೂ ಏಕೆ?

ವಿಪರೀತ ಪ್ರಮಾಣದಲ್ಲಿ ಶೇರುಪೇಟೆಗೆ ಬಂಡವಾಳ ಹರಿದುಬರುವುದೇ ಇದಕ್ಕೆ ಕಾರಣ. ಕೆಲವೇ ಗಂಟೆಗಳಲ್ಲಿ (ಹೆಚ್ಚೆಂದರೆ ದಿನಗಳಲ್ಲಿ)

ತಲ್ಲಣವೇಕೆ?

ಎಂ.ಆರ್. ಶೆಣೈ

...ಾರ ಲಾಭಗಳಿಸುವ ಸಾಧ್ಯತೆಗಳು ...ುವುದರಿಂದಲೇ, ಲಾಭಕ್ಕೆ ತಹತಹಿಸುವ ...ಡವಾಳಿಗರು ಷೇರುಪೇಟೆಗೆ ಮುಗಿಬೀಳುತ್ತಾರೆ. ...ನ್ರ, ಗತಿಯು ವ್ಯವಹಾರದಲ್ಲಿ ಬೆಲೆಗಳ ...ಗಣಕುಣಿತ ಅವ್ಯಾಹತವಾಗಿ ನಡೆಯುತ್ತದೆ.

ಈಗ ಎನ್‌ಡಿಟಿವಿ ಷೇರಿನ ಬೆಲೆಗಳ ಏರಿಳಿತದ ...ಯನ್ನ್ನ ಸ್ವಲ್ಪ ಗಮನಿಸೋಣ. ಪ್ರತಿಷ್ಠಿತ ...ಪನಿಯಾದ ಅದರ ಷೇರುಗಳ ಬೆಲೆ ...ಬಹುದು ಎಂಬ ನಿರೀಕ್ಷೆಯಿಂದಲೇ, 70 ರೂ. ...ಲೆಯ ಷೇರುಗಳಿಗೆ ದಿನದ ಆರಂಭದಲ್ಲೇ ...101 ಆಗಿರುತ್ತದೆ. ಅದನ್ನು ಕೊಳ್ಳುವವರ ...ಖ್ಯೆ ಜಾಸ್ತಿಯಾದಷ್ಟೂ ಬೆಲೆ ಏರುತ್ತಾ ಹೋಗಿ ...124.85 ರ ಹಂತಕ್ಕೆ ಬಂದಾಗ, ಕೆಲವರು ಆ ...ಲೆಗೆ ಮಾರಲು ಪ್ರಾರಂಭಿಸುತ್ತಾರೆ. ಈ ರೀತಿ ...ಾರಾಟವಾಗುವ ಷೇರುಗಳ ಸಂಖ್ಯೆ ...ಸ್ತಿಯಾದಂತೆ ದಿಢೀರನೆ ಬೆಲೆ ...ಿಯಲಾರಂಭಿಸಿ ರೂ.86.65ಕ್ಕೆ ತಲುಪುತ್ತದೆ. ...ಗ್ಗೆ ರೂ.101 ಇದ್ದ ಷೇರು ರೂ.86.65ಕ್ಕೆ ಲಭ್ಯ ...ದೊಡನೆ ಇನ್ನೂ ಕೆಲವರು ಅದನ್ನು ಕೊಳ್ಳಲು ...ನ್ನುಗ್ಗುತ್ತಾರೆ. ಪುನಃ ಬೆಲೆ ಏರಿ, ದಿನದ ಕೊನೆಗೆ ...99.40 ಕ್ಕೆ ನಿಲ್ಲುತ್ತದೆ. ಕೇವಲ 100 ...ೀರುಗಳನ್ನು ಹೊಂದಿದ್ದಾತ (ಅಂದರೆ ರೂ.7000 ...ಟ್ಟು ಪಡಕೊಂಡದ್ದು) ರೂ.124.85 ರ ...ತದಲ್ಲಿ ಅಷ್ಟನ್ನೂ ಮಾರಿ ರೂ.5485 ಲಾಭ ...ಡೆಯುತ್ತಾನೆ. ಆದರೆ, ಲಾಭದ ಆಸೆ (ಅಥವಾ ...ರಾಸೆ) ಅಷ್ಟಕ್ಕೇ ಕಮರಿಹೋಗುವುದಿಲ್ಲ! ...ಾರನೆಯ ದಿನ ಮತ್ತೆ ಬೆಲೆಗಳು ಏರುವ ಸಾಧ್ಯತೆ ...ದ್ದೇ ಇರುತ್ತದೆಯಲ್ಲ. ಅದರಿಂದಾಗಿ ತಾನು ...ಾರಿದ ಷೇರುಗಳನ್ನು ಆತ ಅದರ ಬೆಲೆ ...ಮೆಯಾದಾಗ (ಅಂದರೆ ರೂ.86.65 ಕ್ಕೆ) ಪುನಃ ...ರೀದಿಸುತ್ತಾನೆ. ಮೂಲತಃ ರೂ.70 ಕ್ಕೆ ...ಡಕೊಂಡ ಷೇರುಗಳನ್ನು ಒಮ್ಮೆ ಮಾರಿ, ಪುನಃ ...ದೇ ಷೇರುಗಳನ್ನು ರೂ.86.65 ಕ್ಕೆ ಖರೀದಿಸುವ ...ತನ ವ್ಯವಹಾರದಲ್ಲಿ ಮೇಲ್ನೋಟಕ್ಕೆ ಮೂರ್ಖತನ ...ೋಚರಿಸಬಹುದೇನೋ. ಆದರೆ ದಿನವಿಡೀ ...ಡೆಸಿದ ವ್ಯವಹಾರದ ಕೊನೆಯಲ್ಲಿ ಆತನ ಬಳಿ, ...00 ಷೇರುಗಳು ಹಾಗೆಯೇ ಉಳಿಯುತ್ತವೆ. ...ಾತ್ರವಲ್ಲ, ರೂ.3820 ಗಳಷ್ಟು ಹಣದ ಗಂಟೂ ...ತನಿಗೆ ದಕ್ಕುತ್ತದೆ. ಇದು ಸಣ್ಣ ...ಮಾಣದಲ್ಲಾಯಿತು. ಲಕ್ಷಗಟ್ಟಲೆ ಷೇರುಗಳ ...ರೀದಿ/ ಮಾರಾಟ ನಡೆಸುವವರು ಗಳಿಸುವ ಲಾಭ ...ಷ್ಟೆಂದು ನೀವೇ ಊಹಿಸಿ!

ಈ ನಡುವೆ ರೂ.124-85 ಕ್ಕೆ ಖರೀದಿಸಿದಾತನ ...ತಿ ಏನು ಎಂಬ ಪ್ರಶ್ನೆ ಏಳುತ್ತದಲ್ಲವೆ? ಆತನೇನೂ ...ದೆಗುಂದುವುದಿಲ್ಲ. ಮಾರನೆಯ ದಿನ ಪುನಃ ...ೇರುಪೇಟೆಗೆ ಬರುತ್ತಾನೆ. ಬೆಲೆಗಳ ಏರಿಳಿತದ ಗತಿಯನ್ನು ಅನುಸರಿಸಿ ಮಾರಾಟ ಮಾಡಿ ಲಾಭ ಗಳಿಸಲು ನೋಡುತ್ತಾನೆ.



ಇಂತಹ ಹೇರಳ ಪ್ರಮಾಣದ ಲಾಭ ಇರುವುದರಿಂದಲೇ ವಿದೇಶಿ ಬಂಡವಾಳ ಸಹ ಷೇರುಪೇಟೆಯತ್ತಲೇ ಆಕರ್ಷಿತವಾಗುತ್ತದೆ. 2003 ರ ಒಂದೇ ವರ್ಷದಲ್ಲಿ ವಿದೇಶೀ ಸಾಂಸ್ಥಿಕ ಹೂಡಿಕೆದಾರರು (Foreign Institutional Investors) ಮಾತ್ರವೇ ಸುಮಾರು 23000 ಕೋಟಿ ರೂಪಾಯಿಗಳನ್ನು ಷೇರು ಪೇಟೆಯಲ್ಲಿ ಹೂಡಿದ್ದರು ಎಂಬುದನ್ನು ಗಮನಿಸಿದಾಗ, ಷೇರುಪೇಟೆಯ ವ್ಯವಹಾರ ಮತ್ತು ಆ ಮೂಲಕ ಕೊಳ್ಳೆಹೊಡೆದಿರಬಹುದಾದ ಲಾಭದ ಪ್ರಮಾಣ ಎಷ್ಟೊಂದು ಅಗಾಧವಾಗಿದೆ ಎಂಬುದನ್ನು ಕಲ್ಪಿಸಿಕೊಳ್ಳಬಹುದು.

ಈ ಭಾರೀ ಪ್ರಮಾಣದ ಲಾಭ ಸಿಗಬೇಕಾದರೆ, ಕೆಲವರಾದರೂ ನಷ್ಟ ಅನುಭವಿಸಲೇಬೇಕಲ್ಲ. ಖಂಡಿತವಾಗಿಯೂ. ಯಾರೊಬ್ಬನಿಗೂ ನಷ್ಟವಾಗದೆ ಯಾರಿಗೂ ಲಾಭ ಆಗುವ ಸಾಧ್ಯತೆಯೇ ಇಲ್ಲ. ಷೇರು ಪೇಟೆಯ ವ್ಯವಹಾರದಲ್ಲಿ ಕೈಹಾಕಿ ಸೋತು ಸುಣ್ಣವಾದವರೂ ಇದ್ದಾರೆ. ಇತ್ತೀಚೆಗಂತೂ ಇಂತಹ ಪರಿಸ್ಥಿತಿ, ಷೇರುಪೇಟೆ ಮಾತ್ರವಲ್ಲ, ಇತರ ಎಲ್ಲಾ ಕ್ಷೇತ್ರಗಳಲ್ಲೂ ಇದೆ. ಎಲ್ಲಾ ಕಡೆಯೂ ಇದ್ದಂತೆ, ದುರ್ಬಲರು, ಅಂದರೆ ಸಣ್ಣ ಪ್ರಮಾಣದಲ್ಲಿ ವ್ಯವಹಾರ ನಡೆಸುವವರು ಕೊನೆಗೆ ಎಲ್ಲವನ್ನೂ ಕಳಕೊಂಡು ಬಲಾಢ್ಯರ ತಿಜೋರಿ ತುಂಬಿಸುತ್ತಾರೆ. ಷೇರುಪೇಟೆಯಲ್ಲೂ ಇದೇ ಪರಿಸ್ಥಿತಿ. ಸ್ವಲ್ಪ ಲಾಭ ಬಂದರೆ ಮಗಳ ಮದುವೆ ಮಾಡಬಹುದು ಅಥವಾ ಮನೆಯೊಂದನ್ನು ಖರೀದಿಸಬಹುದು ಎಂಬ ಆಸೆಯಿಂದ ನೂರಾರು, ಸಾವಿರಾರು ಜನ ಸಣ್ಣ ಪ್ರಮಾಣದಲ್ಲಿ ಹಣ ಹೂಡುತ್ತಾರೆ. ವಂಚಕತನ, ಕಪಟವನ್ನರಿಯದ ಈ ಹೂಡಿಕೆದಾರರು ಯಾವುದೇ ಒಂದು ಷೇರಿನ ಅಥವಾ ಇಡೀ ಷೇರು ಮಾರುಕಟ್ಟೆಯ ಕುಸಿತದಿಂದಾಗಿ ಇದ್ದುದೆಲ್ಲವನ್ನೂ ಕಳಕೊಂಡು ನಿರ್ಗತಿಕರಾಗುತ್ತಾರೆ. ಇನ್ನೂ ಹಲವರು ನೇರವಾಗಿ ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುವುದಿಲ್ಲ. ಬದಲಾಗಿ ಈ ವ್ಯವಹಾರವನ್ನೇ ನಡೆಸುವ ಕೆಲವು ಸಂಸ್ಥೆಗಳಲ್ಲಿ ಹಣ ಹೂಡುತ್ತಾರೆ. ಅವರ ಪರವಾಗಿ ಆ ಸಂಸ್ಥೆ ಷೇರು ಮಾರುಕಟ್ಟೆಯಲ್ಲಿ ಹಣ ತೊಡಗಿಸುತ್ತದೆ. ಹೂಡಿಕೆದಾರರ ಹಣ; ಸಂಸ್ಥೆಯುದ್ದಲ್ಲ. ಲಾಭ ಬಂದರೆ ಸರಿ. ಹೂಡಿಕೆದಾರರಿಗೆ ಸಂತಸ. ಆದರೆ ಕೊನೆಗೆ ಆಘಾತ ಕಾದಿರುತ್ತದೆ. ಸಂಸ್ಥೆಯ ಹೂಡಿಕೆಯಲ್ಲಾ ಕರಗುತ್ತದೆ. ಸಂಸ್ಥೆ ಮುಳುಗುತ್ತದೆ. ಹೂಡಿಕೆದಾರರ ಬೆವರಿನ ಸಂಪತ್ತು ಮಾಯವಾಗುತ್ತದೆ. ಪ್ರತಿಷ್ಠಿತ ಕಿರ್ಲೋಸ್ಕರ್ ಇನ್ವೆಸ್ಟ್‌ಮೆಂಟ್‌ನಂತಹ ಅಥವಾ ಮಣಿಪಾಲದ ಐಸಿಡಿಎಸ್‌ನಂತಹ ಸಂಸ್ಥೆಗಳಿಗೆ ಆದ ಗತಿ ಇದಕ್ಕೊಂದು ಉದಾಹರಣೆ. ಅವುಗಳಲ್ಲಿ ಹಣ ಹೂಡಿದ್ದ ಲಕ್ಷಾಂತರ ಜನ ಕಂಗಾಲು.

ಇಷ್ಟು ಮಾತ್ರವೇ ಅಲ್ಲ. ಷೇರುಪೇಟೆಯಲ್ಲಿ ಹಣ ತೊಡಗಿಸುವ ಪ್ರವೃತ್ತಿ ಜನಸಾಮಾನ್ಯರಲ್ಲಿ ಹೆಚ್ಚಿದಂತೆಲ್ಲಾ, ಪರಿಸ್ಥಿತಿಯ ಲಾಭ ಪಡೆಯಲು ತೋಳಗಳು, ತಿಮಿಂಗಿಲಗಳು ಕಾಯುತ್ತಿರುತ್ತವೆ. ಲಾಭದಾಯಕ ಉದ್ಯಮ ಸ್ಥಾಪಿಸುತ್ತೇವೆ; ಅತ್ಯುತ್ತಮವಾಗಿ ನಡೆಸಿ ಅಪಾರ ಲಾಭಗಳಿಸಿ ಹೂಡಿಕೆದಾರರಿಗೆ ಹಂಚುತ್ತೇವೆ ಎಂಬೆಲ್ಲಾ ರೀತಿಯ ಪ್ರಚಾರದ ಬೊಗಳೆಯನ್ನೇ ಹರಿಯಬಿಟ್ಟು ಮಾರುಕಟ್ಟೆ ಪ್ರವೇಶಿಸಿದ ಹಲವಾರು ಸಂಸ್ಥೆಗಳು, ಅಮಾಯಕರಿಂದ ಸಾವಿರಾರು ಕೋಟಿಗಳಷ್ಟು ಷೇರು ಹಣವನ್ನು ಸಂಗ್ರಹಿಸಿ ಇದ್ದಕ್ಕಿದ್ದಂತೆ ಮಾಯವಾಗುತ್ತವೆ. ಕಡಿಮೆ ಬೆಲೆಗೆ ಟಿ.ವಿ., ವಾಹನಗಳು, ಇತ್ಯಾದಿಗಳನ್ನು ಕೊಡುತ್ತೇವೆ ಎಂದು ಪ್ರಚಾರ ನಡೆಸಿ ಜನರಿಂದ ಹಣ ವಸೂಲು ಮಾಡಿ ರಾತ್ರೋರಾತ್ರಿ ಪರಾರಿಯಾಗುವ ಹಲವಾರು ಮೋಸದ ಪ್ರಕರಣಗಳು ನಿಮ್ಮ ಊರು/ ನಗರದಲ್ಲಿಯೇ ನಡೆದಿವೆಯಲ್ಲವೆ? ಇವು ಸಣ್ಣ ಪ್ರಮಾಣದ ಲೂಟಿಗಳು. ಷೇರುಮಾರುಕಟ್ಟೆಯಲ್ಲಿನ ಲೂಟಿಯೂ ಇದೇ ತರಹದ್ದು. ಆದರೆ ಲೂಟಿಯ ಪ್ರಮಾಣ ಮಾತ್ರ ಅಗಾಧ. ದೆಹಲಿಯ ಷೇರು ವಿನಿಮಯ ಕೇಂದ್ರವೊಂದರಲ್ಲೇ ಇಂತಹ ಸುಮಾರು 450 ಕ್ಕೂ ಹೆಚ್ಚು ನಕಲಿ ಸಂಸ್ಥೆಗಳ ಪ್ರಕರಣಗಳು ವರದಿಯಾಗಿವೆ. (ನೆನಪಿಡಿ. ಇದುವರೆಗೆ ಈ ಪ್ರಕರಣಗಳಲ್ಲಿ ಯಾರಿಗೂ ಶಿಕ್ಷೆಯಾಗಿಲ್ಲ. ಯಾರ ಆಸ್ತಿಯೂ ಜಪ್ತಿಯಾಗಿಲ್ಲ. ಯಾರೊಬ್ಬರ ಹೆಸರುಗಳೂ ಬೆಳಕಿಗೆ ಬಂದಿಲ್ಲ. ಸಾಲಗಾರ ಬಡರೈತನ ನೇಗಿಲನ್ನೇ ಹೊತ್ತೊಯ್ಯುವ, ಮನೆಯಲ್ಲಿನ ಅನ್ನದ ಪಾತ್ರೆಯನ್ನೇ ಹರಾಜು ಹಾಕುವ ಈ ವ್ಯವಸ್ಥೆಯಲ್ಲಿ, ಉಳ್ಳವರು ನಡೆಸುವ ಲೂಟಿಗೆ ಯಾವುದೇ ಅಡ್ಡಿ ಆತಂಕಗಳಿಲ್ಲ!)


ಇನ್ನೊಂದು ಉದಾಹರಣೆ ಕೊಡೋಣ. ಉತ್ತರಪ್ರದೇಶದಲ್ಲಿ ಭಾಜಪ ಸರ್ಕಾರ ಆಡಳಿತ ನಡೆಸುತ್ತಿದ್ದಾಗ ಆರ್‌ಎಸ್‌ಎಸ್‌ನ ಕಾರ್ಯಕರ್ತನೊಬ್ಬ ಒಂದು ಕಂಪನಿಯನ್ನು ಹುಟ್ಟುಹಾಕಿದ. ಆತ ನಡೆಸಿದ ಸಮಾರಂಭವೊಂದರಲ್ಲಿ ದೇಶದ ಪ್ರಧಾನಿ ಸ್ವತಃ ವಾಜಪೇಯಿಯವರೇ ಉದ್ಘಾಟಕರು. ದೇಶದ ಪ್ರಧಾನಿಯವರೇ ಆಶೀರ್ವದಿಸಿರುವ ಪ್ರಮುಖನೊಬ್ಬನ ಸಂಸ್ಥೆ ಸಾಮಾನ್ಯವೆ? ಆ ಕಂಪನಿಯ ಷೇರುಗಳು ಬಿಡುಗಡೆಯಾದಾಗ ಬಿಸಿದೋಸೆಯಂತೆ ಬಿಕರಿಯಾದವು. ಯದ್ವಾತದ್ವಾ ಬೆಲೆ ಏರಿತು. ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ (ಯುಟಿಐ) ನಂತಹ ಸಂಸ್ಥೆಯೇ ರೂ.10 ಮುಖಬೆಲೆಯ ಷೇರುಗಳನ್ನು ರೂ.900 ಕ್ಕೂ ಅಧಿಕ ದರದಲ್ಲಿ ಖರೀದಿಸಿತು. (ಈ ಖರೀದಿಗೆ ಕೇಂದ್ರ ಹಣಕಾಸು ಸಚಿವಾಲಯದಿಂದಲೇ ಒತ್ತಡ ಬಂದಿತ್ತು ಎಂಬುದು ಬೇರೆಯೇ ವಿಷಯ) ಅದೂ ಸ್ವಲ್ಪ ಪ್ರಮಾಣದಲ್ಲಲ್ಲ. ಲಕ್ಷಾಂತರ ಷೇರುಗಳ ಖರೀದಿ. ಯುಟಿಐ ಹಗರಣ ಬಯಲಾದದ್ದೇ ತಡ, ಈ ಷೇರುಗಳು ನೆಲಕಚ್ಚಿದವು. ಸಾಮಾನ್ಯ ಜನ ಯುಟಿಐನಲ್ಲಿ ತೊಡಗಿಸಿದ್ದ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಈ ಒಂದೇ ವ್ಯವಹಾರದಲ್ಲಿ ಬಿಸಿ ಕಾವಲಿಯ ಮೇಲೆ ಬಿದ್ದ ನೀರಿನ ಹನಿಯಂತೆ ಕರಗಿಹೋಯಿತು. ಕೊಳ್ಳೆ ಹೊಡೆದವರಾರು ಎಂಬ ಪ್ರಶ್ನೆಗೆ ಉತ್ತರವನ್ನು ಹುಡುಕುವ ಅಗತ್ಯವಿದೆಯೇ?

ಷೇರು ಮಾರುಕಟ್ಟೆಯ ಹೂರಣಗಳು ಆಗಾಗ್ಗೆ ಬಯಲಿಗೆ ಬರುತ್ತಲೇ ಇರುತ್ತವೆ. ಹರ್ಷದ್ ಮೆಹ್ತಾ ಹಗರಣ, ಕೇತನ್ ಪಾರೀಖ್ ಹಗರಣ, ಯೂಟಿಐ ಹಗರಣಗಳು ಇಡೀ ಷೇರುಮಾರುಕಟ್ಟೆಯನ್ನೇ ಅಸ್ತವ್ಯಸ್ತಗೊಳಿಸಿದವು. ಸಾಲದ್ದಕ್ಕೆ ನೂರಾರು ಹಣಕಾಸು ಸಂಸ್ಥೆಗಳು ಮುಳುಗಿ ಲಕ್ಷಾಂತರ ಸಾಮಾನ್ಯ ಹೂಡಿಕೆದಾರರ ಉಳಿತಾಯದ ಹಣವೆಲ್ಲಾ ಮಾಯವಾಗುವಲ್ಲಿ ನೆರವಾದವು. ಸಿಆರ್‌ಬಿ ಕ್ಯಾಪಿಟಲ್, ಈಶ್ವರೀ ಫೈನಾನ್ಸ್, ಶ್ರೀನಿಧಿ ಫೈನಾನ್ಸ್, ಮಹಾರಾಷ್ಟ್ರ ಅಪೆಕ್ಸ್ ಕಾರ್ಪೊರೇಷನ್‌ನಂತಹ ಸಂಸ್ಥೆಗಳನ್ನು ಇಲ್ಲಿ ಉದಾಹರಿಸಬಹುದು. ಅದು ಮಾತ್ರವಲ್ಲ. ಇತ್ತೀಚಿನ ದಿನಗಳಲ್ಲಿ ಪಟ್ಟಣ ಸಹಕಾರಿ ಬ್ಯಾಂಕುಗಳು, ಸಹಕಾರಿ ಸೊಸೈಟಿಗಳು ನಾಯಿ ಕೊಡೆಗಳಂತೆ ಹುಟ್ಟಿರುವುದನ್ನು ಗಮನಿಸಿದ್ದೀರಲ್ಲವೆ? ಮೊದಲೆಲ್ಲಾ, ಸಹಕಾರಿ ಬ್ಯಾಂಕೊಂದನ್ನು ಸ್ಥಾಪಿಸುವುದು ಸುಲಭದ ಮಾತಾಗಿರಲಿಲ್ಲ, ರಿಸರ್ವ್ ಬ್ಯಾಂಕಿನ ನೀತಿ ನಿಯಮಗಳು ಬಿಗುವಾಗಿದ್ದವು. ಜಾಗತೀಕರಣದ ಆರ್ಥಿಕ ನೀತಿಗಳು ಜಾರಿಗೆ ಬಂದದ್ದೇ ತಡ, ಎಲ್ಲಾ ಕ್ಷೇತ್ರಗಳಲ್ಲಂತೆ ಇಲ್ಲೂ ಉದಾರೀಕರಣವೇ ಮಂತ್ರವಾಯಿತು. ಇದರ ಫಲವಾಗಿ 1993 ರ ಮೇ ತಿಂಗಳಲ್ಲಿ ಸಹಕಾರಿ ಬ್ಯಾಂಕುಗಳ ಸ್ಥಾಪನೆಗೆ ಸಂಬಂಧಿಸಿದಂತೆ ನಿಯಮಗಳನ್ನು ಸಡಿಲುಗೊಳಿಸಲಾಯಿತು. ಮೇ 1993 ರಿಂದ ಜೂನ್ 2001ರವರೆಗಿನ ಅವಧಿಯಲ್ಲಿ ಒಟ್ಟು 823 ಪಟ್ಟಣ ಸಹಕಾರಿ ಬ್ಯಾಂಕುಗಳಿಗೆ (Urban Co-operative Banks) ಅನುಮತಿ ಪತ್ರ ನೀಡಲಾಯಿತು. ಅಂದರೆ ತಿಂಗಳಿಗೆ ಸರಾಸರಿ 8 ಬ್ಯಾಂಕುಗಳು! ಆದರೆ ಇತ್ತೀಚೆಗೆ, ಅಂದರೆ ಈ ವರ್ಷದ ಮೇ ತಿಂಗಳಲ್ಲಿ ಇಂತಹ ಬ್ಯಾಂಕುಗಳ ಸ್ಥಾಪನೆಗೆ ಅನುಮತಿ ನೀಡುವುದನ್ನು ರಿಸರ್ವ್ ಸ್ಥಗಿತಗೊಳಿಸಿದೆ. ಏಕೆಂದು ಹುಬ್ಬೇರಿಸಬೇಡಿ? ಈ 823 ಬ್ಯಾಂಕುಗಳಲ್ಲಿ, ಶೇ.31ರಷ್ಟು ಬ್ಯಾಂಕುಗಳು ಸ್ವಲ್ಪ ಕಾಲದಲ್ಲೇ ಆರ್ಥಿಕವಾಗಿ ಬಲಹೀನವಾದವು! ಅಂದರೆ ಸುಮಾರು 255 ಬ್ಯಾಂಕುಗಳು. ಕಾರಣ ಸುಸ್ಪಷ್ಟ. ಸಾವಿರಾರು ಜನರ ಉಳಿತಾಯದಿಂದ ಸಂಗ್ರಹಿಸಿದ್ದ ಕೋಟ್ಯಾಂತರ ರೂಪಾಯಿಗಳ ಸಂಪತ್ತನ್ನು ಕೆಟ್ಟ ಸಾಲ/ ಕೆಟ್ಟ ಹೂಡಿಕೆಗಳಲ್ಲಿ ವಿನಿಯೋಗಿಸಿದ್ದು. ಈ ನಡುವೆ, ಮಾಧ್ಯಮಗಳಲ್ಲಿ ಯಾವುದಾದರೊಂದು ಇಂತಹ ಬ್ಯಾಂಕು ಮುಳುಗಿಹೋದ ಬಗ್ಗೆ ವರದಿಗಳಿದ್ದೇ ಇರುತ್ತವೆ, ಗಮನಿಸಿದ್ದೀರಲ್ಲವೆ? ಅಂದರೆ ಷೇರು ಪೇಟೆಯ ನೇರ ಹೂಡಿಕೆ, ಹಣಕಾಸು ಸಂಸ್ಥೆಗಳಲ್ಲಿನ ಹೂಡಿಕೆಯಲ್ಲದೆ, ಸಹಕಾರಿ ಬ್ಯಾಂಕುಗಳಲ್ಲಿ ಹೂಡಿದ್ದ ಹಣವೂ ಮಾಯವಾಗುವ ಪ್ರಕರಣಗಳು ಹೆಚ್ಚುತ್ತಲೇ ಇವೆ. ಸಾವಿರಾರು ಜನ ಕಳಕೊಂಡ ಸಂಪತ್ತು ಕೆಲವೇ ತಿಮಿಂಗಲಗಳ ಖಜಾನೆಯನ್ನು ಸೇರುತ್ತದೆ.

ಇದೆಲ್ಲದರ ನಡುವೆ ಷೇರು ಮಾರುಕಟ್ಟೆಯ ಮೇಲೆ ಮಾಧ್ಯಮಗಳಿಗೇಕೆ ಅಷ್ಟೊಂದು ಮಮತೆ ಎಂಬ ಪ್ರಶ್ನೆಗೆ ಸ್ವಲ್ಪಮಟ್ಟಿಗೆ ಉತ್ತರ ಎನ್‌ಡಿಟಿವಿಯ ಉದಾಹರಣೆಯಿಂದ ಸಿಕ್ಕಿರಬಹುದು. ವಾಸ್ತವವಾಗಿ ಇದೇ ವರ್ಷದ ಮೇ 17ರ ಷೇರುಪೇಟೆಯ ತಲ್ಲಣಗಳನ್ನು ಅರೆ ಉನ್ಮಾದದ ಆವೇಶದಿಂದಲೇ ಮಾಧ್ಯಮಗಳು ಭಯಾನಕವಾಗಿ ಬಿತ್ತರಿಸಿದವು. ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಂತೂ ತನ್ನ ಮುಖಪುಟದ ಅಗ್ರಭಾಗವನ್ನು ಸಂಪೂರ್ಣ ಆವರಿಸುವಂತೆ 2340000000000 ರ ಸಂಖ್ಯೆಯನ್ನು ಮುದ್ರಿಸಿತು. 2.34 ಲಕ್ಷ ಕೋಟಿ ರೂಪಾಯಿಗಳಷ್ಟು ಹೂಡಿಕೆದಾರರ ಹಣ 'ಕರಗಿತು' ಎಂದು ಹಲುಬಿತು. ಈ ಕಾಗದದ ಸಂಪತ್ತಿನ (paper money) ನಷ್ಟವನ್ನು 'ಶೂನ್ಯನೆಲೆ' ಎಂಬ ತಲೆಬರಹದಡಿ ಸುಮಾರು ಎಂಟು ಕಲಮುಗಳ ಸುದೀರ್ಘ ಬರಹದಲ್ಲಿ ಬಗೆಬಗೆಯಾಗಿ ಬಣ್ಣಿಸಿತು. ಅಷ್ಟು ಸಾಲದು ಎಂಬಂತೆ, ಆ ವಿದ್ಯಮಾನವನ್ನು ಸೆಪ್ಟೆಂಬರ್ 11 ರ ಭಯಾನಕ ಘಟನೆಗೆ (ಅಮೇರಿಕಾದ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ ನಡೆದ ಭಯೋತ್ಪಾದಕ ಧಾಳಿ) ಹೋಲಿಸಿತು ಕೂಡಾ! ಆದರೆ ಇವೇ ಮಾಧ್ಯಮಗಳು, ಸಾಲದ ಹೊರೆಯನ್ನು ತಾಳಲಾಗದೆ ಸಾವಿರಾರು ಸಂಖ್ಯೆಯಲ್ಲಿ ಭಾರತದ ರೈತರು ಆತ್ಮಹತ್ಯೆಯಂತಹ ದುರಂತದ ದಾರಿಯನ್ನು ಕ್ರಮಿಸಿದ್ದುದನ್ನು ಬಿತ್ತರಿಸಲು ಎಷ್ಟು ಶ್ರಮ ವಹಿಸಿದ್ದವು ಎಂಬುದನ್ನು ನೆನಪಿಸಿಕೊಂಡರೆ ಸಾಕು ಮಾಧ್ಯಮಗಳ ಕಾಳಜಿ ಯಾರ ಪರವಾಗಿದೆ ಎಂದು ತಿಳಿಯುತ್ತದೆ.

ಲೂಟಿಕೋರರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ನೀಡಿದ್ದ ಎನ್‌ಡಿಎ ಸರ್ಕಾರ ಪದಚ್ಯುತವಾಗಿದ್ದನ್ನು ಅರಗಿಸಿಕೊಳ್ಳಲು ಮಾಧ್ಯಮಗಳಿಗೆ ಕಷ್ಟವೇ ಆಗಿತ್ತು. ಪುನಃ ತಮ್ಮದೇ ಸರ್ಕಾರ ಅಸ್ತಿತ್ವಕ್ಕೆ ಬರುತ್ತದೆ ಎಂದು ಬಲವಾಗಿ

ಪುಟ 8 ಕ್ಕೆ



ನಾವೇಕೆ ವಿಮಾ ಉದ್ದಿಮೆಯಲ್ಲಿ ವಿದೇಶಿ ನೇರ ಬಂಡವಾಳ ವಿರೋಧಿಸುತ್ತೇವೆ?

ವಿಮಾ ಕ್ಷೇತ್ರದಲ್ಲಿ ವಿದೇಶಿ ನೇರ ಹೂಡಿಕೆಯನ್ನು ಹೆಚ್ಚಿಸುವ ಹಣಕಾಸು ಮಂತ್ರಿ ಪಿ.ಚಿದಂಬರಂ ಅವರ ಪ್ರಸ್ತಾವವನ್ನು ವಿಮಾ ನೌಕರರೂ ವಿರೋಧಿಸುತ್ತಿದ್ದಾರೆ. ಜುಲೈ 8 ರಂದು ಲೋಕಸಭೆಯಲ್ಲಿ ಈ ಪ್ರಸ್ತಾವವು ಪ್ರಸ್ತಾಪಿಸಲ್ಪಡುತ್ತಿರುವಾಗಲೇ ವಿಮಾ ನೌಕರರು ದೇಶಾದ್ಯಂತ ಅದರ ವಿರುದ್ಧ ಪ್ರತಿಭಟನೆ ಮಾಡಿದ್ದಾರೆ. ವಿಮಾ ನೌಕರರ ದೃಷ್ಟಿಕೋನವನ್ನು ತಿಳಿಯಲು ಮುಂದೆ ಓದಿ.

— ಎಸ್.ಕೆ.ಗೀತಾ

ಜುಲೈ 8 ರಂದು ವಿತ್ತಮಂತ್ರಿ ಪಿ.ಚಿದಂಬರಂ ಮಂಡಿಸಿದ ಬಡ್ಜೆಟ್‌ನಲ್ಲಿ ವಿಮಾರಂಗದಲ್ಲಿ ವಿದೇಶಿ ಬಂಡವಾಳವನ್ನು ಶೇ.26 ರಿಂದ ಶೇ.49ಕ್ಕೆ ಏರಿಸುವ ಪ್ರಸ್ತಾಪ ಬಂದಾಗಿನಿಂದ ಈ ಬಗ್ಗೆ ಚರ್ಚೆ ಆರಂಭವಾಗಿದೆ. ವಿಮಾ ಪ್ರಾಧಿಕಾರ ಮತ್ತು ಅಭಿವೃದ್ಧಿ ಕಾಯ್ದೆ 1999 ರನುಗುಣವಾಗಿ ವಿಮಾ ಉದ್ದಿಮೆಯಲ್ಲಿ ಶೇ.26 ರಷ್ಟು ಮಾತ್ರ ವಿದೇಶಿ ಬಂಡವಾಳ ಹೂಡಿಕೆಗೆ ಅವಕಾಶವಿದೆ. ಈ ಮಿತಿಯಲ್ಲಿ ಹೆಚ್ಚಳವಾಗಬೇಕೆಂಬುದು ಎಲ್ಲಾ ಖಾಸಗಿ ವಿಮಾ ಕಂಪನಿಗಳ ನಿರಂತರ ಬೇಡಿಕೆಯಾಗಿತ್ತು. ಇದಕ್ಕೆ ಪ್ರತಿಕ್ರಿಯೆಯಾಗಿ ಹಿಂದಿನ ಬಿ.ಜೆ.ಪಿ. ನೇತೃತ್ವದ ಎನ್‌ಡಿಎ ಸರ್ಕಾರ ಎಸ್.ಕೆ.ಸಿಂಗರ ನೇತೃತ್ವದಲ್ಲಿ ರಚಿಸಿದ್ದ ಸಮಿತಿಯು ವಿದೇಶಿ ನೇರ ಬಂಡವಾಳವನ್ನು ಶೇ.26 ರಿಂದ ಶೇ.49 ಕ್ಕೆ ಏರಿಸುವ ಸಲಹೆ ನೀಡಿತ್ತು. ಈ ಸಲಹೆಗೆ ಎನ್‌ಡಿಎ ಸರ್ಕಾರ ಒಪ್ಪಿಗೆ ನೀಡಿದ್ದು ಮಾತ್ರವಲ್ಲ ಬಿಜೆಪಿ ತಾನು ಮತ್ತೆ ಅಧಿಕಾರಕ್ಕೆ ಬಂದರೆ ಎಸ್.ಕೆ.ಸಿಂಗ್ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರುವುದಾಗಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲೇ ಹೇಳಿಕೊಂಡಿತ್ತು. ಚುನಾವಣಾ ನಂತರ ಸರ್ಕಾರ ಬದಲಾದಾಗಲೂ ಖಾಸಗಿ ವಿಮಾ ಸಂಸ್ಥೆಗಳು ಈ ಬಗ್ಗೆ ತಮ್ಮ ಒತ್ತಡವನ್ನು ಮುಂದುವರೆಸಿದ್ದು ನಮ್ಮ ಪತ್ರಿಕೆಗಳಲ್ಲಿ ವ್ಯಾಪಕವಾಗಿ ವರದಿಯಾಗಿವೆ.

ಖಾಸಗಿ ಬಂಡವಾಳಗಾರರ ಬೇಡಿಕೆಯಂತೆ ಈಗ ವಿತ್ತ ಸಚಿವರು ಖಾಸಗಿ ವಿಮಾ ಉದ್ದಿಮೆಯಲ್ಲಿ ವಿದೇಶಿ ನೇರ ಬಂಡವಾಳವನ್ನು ಶೇ.26 ರಿಂದ ಶೇ.49 ಕ್ಕೆ ಏರಿಸುವ ಪ್ರಸ್ತಾಪ ಮಾಡಿದ್ದಾರೆ. ತಾನು ಈ ಖಾಸಗಿ ಬಂಡವಾಳದಾರರ ಬೇಡಿಕೆಯನ್ನು ಪೂರೈಸಿದ್ದೇನೆಂದು ಚಿದಂಬರಂರವರು 12.07.2004 ರಂದು ದ ಹಿಂದೂ ಪತ್ರಿಕೆಗೆ ಚೆನ್ನೈನಲ್ಲಿ ನೀಡಿದ ಸಂದರ್ಶನದಲ್ಲಿ ಒಪ್ಪಿಕೊಂಡಿದ್ದಾರೆ. ಇದು ಸಾರ್ವಜನಿಕ ವಲಯದ ವಿಮಾ ಸಂಸ್ಥೆಗಳಾದ ಎಲ್‌ಐಸಿ/ ಜಿಐಸಿಯನ್ನು ದುರ್ಬಲಗೊಳಿಸುವ ಸಂಚೆಂಬುದು ಸ್ಪಷ್ಟ.

1999 ರ ವಿಮಾ ಪ್ರಾಧಿಕಾರ ಮತ್ತು ಅಭಿವೃದ್ಧಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಮಾತ್ರವೇ ಈ ಬದಲಾವಣೆ ತರಲು ಸಾಧ್ಯ. ಹಾಗಾಗಿ ನೌಕರರಿಗೆ ಇದರ ವಿರುದ್ಧ ಕಾರ್ಯಕ್ರಮದ ರೂಪುರೇಷೆ ರಚಿಸಲು ಸ್ವಲ್ಪ ಕಾಲಾವಕಾಶವಿದೆ.

ವಿಮಾ ನೌಕರರು ವಿತ್ತ ಸಚಿವರ ಈ ಪ್ರಸ್ತಾಪವನ್ನು ತೀವ್ರವಾಗಿ ವಿರೋಧಿಸುತ್ತಾರೆ. ಈ ಪ್ರಸ್ತಾಪವು ಸಾರ್ವಜನಿಕ ವಲಯದ ಎಲ್‌ಐಸಿ ಮತ್ತು ಜಿಐಸಿಯನ್ನು ದುರ್ಬಲ ಗೊಳಿಸುವ ಸಂಚು ಮಾತ್ರವಲ್ಲ ಯುಪಿಎ ಸರ್ಕಾರವು ಸ್ವೀಕರಿಸಿರುವ ಸಾಮಾನ್ಯ ಕನಿಷ್ಠ ಕಾರ್ಯಕ್ರಮ (Common Minimum Programme)ದ ವಿರುದ್ಧವೂ ಆಗಿದೆ. ವಿದೇಶಿ ನೇರ ಬಂಡವಾಳದ ಹೆಚ್ಚಳವೆಂದರೆ ಖಾಸಗಿ ವಿಮಾ ಸಂಸ್ಥೆಗಳಿಗೆ ಇನ್ನಷ್ಟು ವಿಮಾ ವ್ಯವಹಾರ ಹೆಚ್ಚಿಸುವ ಸಾಮರ್ಥ್ಯ ನೀಡುವುದಾಗಿದೆ. ಕಾನೂನಿನನ್ವಯ ಖಾಸಗಿ ಕಂಪನಿಗಳು ನಿರ್ವಹಿಸಲೇಬೇಕಾದ ಸಾಮಾಜಿಕ ಜವಾಬ್ದಾರಿಗಳನ್ನು ಅವರು ನಿರ್ವಹಿಸದೇ ಇರಬಹುದು. ಈ ವಿಚಾರಕ್ಕೆ ಇನ್ನೊಂದು ಬಹುಮುಖ್ಯ ಆಯಾಮವಿದೆ. ಒಮ್ಮೆ ವಿದೇಶಿ ಬಂಡವಾಳದಲ್ಲಿ ಹೆಚ್ಚಳವುಂಟಾಯಿತೆಂದರೆ ಅವರ ಭಾರತೀಯ ಪಾಲುದಾರರು ತಮ್ಮ ಬಂಡವಾಳವನ್ನು ಷೇರು ಮಾರುಕಟ್ಟೆಯಲ್ಲಿ ಸಾರ್ವಜನಿಕರಿಗೆ ತೆರೆದಿಡಬಹುದು (Initial Public Offer) ಆ ಕಂಪನಿಯಲ್ಲಿನ ವಿದೇಶಿ ಪಾಲುದಾರರನ್ನು ಇನ್ನಷ್ಟು ಬಲಿಷ್ಠಗೊಳಿಸುತ್ತದೆ, ಕಂಪನಿಯ ವಹಿವಾಟಿನಲ್ಲಿ ಅವರದೇ ಮೇಲುಗೈ ಸಾಧಿಸಿದಂತಾಗುತ್ತದೆ. ಇದರಿಂದ ಭಾರತೀಯ ಜನತೆಯ ಉಳಿತಾಯದ ಮೇಲೆ ವಿದೇಶಿ ಬಂಡವಾಳದಾರರಿಗೆ ಹಿಡಿತ ಮತ್ತು ಸನಿಹ ಸಾಧಿಸುವುದು ಸರಳವಾಗುತ್ತದೆ. ಇದರಿಂದ ದೇಶದ ಆರ್ಥಿಕತೆಯ ಮೇಲೆ ದುಷ್ಪರಿಣಾಮ ವುಂಟಾಗುತ್ತದೆ. ಒಟ್ಟಾರೆಯಾಗಿ ದೇಶದ ಜನತೆಯ ಉಳಿತಾಯದ ಹಣ ಜನ ಕಲ್ಯಾಣ ಕಾರ್ಯಕ್ರಮ ಗಳಿಗೆ ದೊರೆಯುವ ಬದಲು ವಿದೇಶಿ ಬಂಡವಾಳ ಗಾರರ ಲಾಭವಾಗಿ ಪರಿವರ್ತಿತವಾಗುತ್ತದೆ. ಬೇರೆ ಬೇರೆ ಉದ್ದಿಮೆಗಳ ಅನುಭವ ಇದನ್ನು ದೃಢಪಡಿಸಿದೆ.

ಕಳೆದ ಮೂರು ವರ್ಷಗಳಲ್ಲಿ, ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆದ ನಂತರದ ಅನುಭವವನ್ನು ನಾವೇ ಸ್ವತಃ ಕಂಡಿದ್ದೇವೆ. ಕಾನೂನಿನ ಹೊರತಾಗಿ ಈ ಖಾಸಗಿ ಕಂಪನಿಗಳು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ಲಕ್ಷಿಸಿ ಕೇವಲ ಲಾಭ ತರುವ ವ್ಯವಹಾರಗಳಲ್ಲಿ ಮಾತ್ರ ತಮ್ಮನ್ನು ತೊಡಗಿಸಿಕೊಂಡಿವೆ. ಕೇವಲ ನಗರ ಪ್ರದೇಶದ ಶ್ರೀಮಂತ ವರ್ಗವನ್ನು ಮಾತ್ರವೇ ಅವು ತಮ್ಮ ಗುರಿಯಾಗಿ ಹೊಂದಿವೆ. ಅದರಿಂದಾಗಿಯೇ ಖಾಸಗಿ ಸಂಸ್ಥೆಗಳ ವಿಮಾ ಮೊತ್ತ (sum assured) ರೂ.3.4 ಲಕ್ಷವಾಗಿದ್ದರೆ ಎಲ್‌ಐಸಿಯ ಸರಾಸರಿ ಕೇವಲ 74,000 ವಾಗಿದೆ. ತಾತ್ವಿಕವಾಗಿ



ನಾವಿದನ್ನು ಪ್ರಶ್ನಿಸಲಾರೆವಾದರೂ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ತಮ್ಮ ಸಾರ್ವಜನಿಕ ಜವಾಬ್ದಾರಿ ನಿರ್ವಹಿಸುವಲ್ಲಿ ಖಾಸಗಿ ಸಂಸ್ಥೆಗಳು ಸೋತಿವೆ ಎಂಬ ನಮ್ಮ ವಾದವನ್ನು ಇದು ಪುಷ್ಟಿಗೊಳಿಸುತ್ತದೆ. ಸ್ಪರ್ಧಾತ್ಮಕ ಯುಗದಲ್ಲಿ ಸಮಾನ ಪರಿಸ್ಥಿತಿ (level playing) ಇರಬೇಕೆಂದು ಬೊಬ್ಬೆ ಹೊಡೆಯುವ ಉದಾರೀಕರಣದ ಹರಿಕಾರರು ಲಾಭಕರವಲ್ಲದ ಗ್ರಾಮೀಣ ವ್ಯವಹಾರವನ್ನು ಕೇವಲ ಸಾರ್ವಜನಿಕ ವಲಯದ ಎಲ್‌ಐಸಿ ಮತ್ತು ಜಿಐಸಿಯ ಮೇಲೆ ಹೇರಿ ಆ ಸಂಸ್ಥೆಗಳ ರೆಕ್ಕೆ ಕತ್ತರಿಸುವ ಕೆಲಸ ಮಾಡಿದ್ದಾರೆ. ತನ್ನ ಸಾರ್ವಜನಿಕ ವ್ಯವಹಾರ ನಿರ್ವಹಿಸುವ ದಿಶೆಯಲ್ಲಿ ಸಣ್ಣ ಮೊತ್ತದ ಪಾಲಿಸಿಗಳನ್ನು ದೊಡ್ಡ ಮೊತ್ತದ ಪಾಲಿಸಿಗಳಿಂದ cross subbsidy ಮಾಡುವುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಈ ರೀತಿಯ cros subsidize ಮಾಡುವುದು ಅಸಾಧ್ಯವಾಗಿ ದೇಶ ಬಡಜನತೆ ವಿಮಾ ವ್ಯಾಪ್ತಿಯಿಂದ ಹೊರಗುಳಿ ಬೇಕಾಗುತ್ತದೆ. ಇದು ಸಾರ್ವಜನಿಕ ವಲಯ ಕಾರ್ಯವೈಖರಿ ಮತ್ತು ಅಸ್ತಿತ್ವಕ್ಕೆ ಸವಾಲಾ ಬಹುದು. ವಿದೇಶಿ ಬಂಡವಾಳದ ಹೆಚ್ಚಳದಿಂದಾ ಅಂತರಾಷ್ಟ್ರೀಯ ವಿಮಾ ಉದ್ಯಮಗಳು ಭಾರತದ ಮಾರುಕಟ್ಟೆ ಪ್ರವೇಶಿಸುವುದ ಸುಲಲಿತವಾಗುತ್ತದೆ. ಈಗಾಗಲೇ ಎಐಕ್ ನಂತಹ ಬಲಿಷ್ಠ ಅಂತರಾಷ್ಟ್ರೀಯ ಕಂಪನಿ ಭಾರ ಪ್ರವೇಶಿಸಲು ಸನ್ನದ್ಧರಾಗಿರುವ ಬಗ್ಗೆ ಸ್ಪಷ್ಟ ಮಾಹಿ ಗಳಿವೆ. ಇಂತಹ ಬಲಿಷ್ಠರ ಪ್ರವೇಶದೊಂದಿ ವಿಮಾ ಉದ್ದಿಮೆಯಲ್ಲಿ ಅನೈತಿಕ ವ್ಯವಹಾರ ಮತ್ತ ಅನಾರೋಗ್ಯಕರ ಸ್ಪರ್ಧೆ ಆರಂಭವಾಗಲಿದೆ ಜಗತ್ತಿನಾದ್ಯಂತ ಪ್ರಚಲಿತವಿರುವ Merge & Acquistiteonಗಳು ಪ್ರಾರಂಭವಾಗು ತ್ತದೆ. ಇದು ಸಣ್ಣ ಮೀನು ದೊಡ್ಡ ಮೀನನ್ನು ನುಂಗುವ ಪ್ರಕ್ರಿಯೆಯಾಗಿದೆ. ಸಾಮಾನ್ಯ ವಿಮಾ ರಂಗದ ಮೇಲೂ ಈ ವಿದೇಶಿ ನೇರ ಬಂಡವಾಳ ಹೆಚ್ಚಳದ ಪ್ರಸ್ತಾಪ ತೀವ್ರ ಪರಿಣಾಮ ಮೂಡಿಸಲಿದೆ. ಈಗಾಗಲೇ ಸಾರ್ವಜನಿಕ ಸಾಮಾನ್ಯ ವಿಮಾ ಸಂಸ್ಥೆಗಳು ಲಾಭದಾಯಕವಲ್ಲದ ಆರೋಗ್ಯ ವಿಮ ಮತ್ತು thrid party moto insuranceನ ಹೊರೆ ಹೊತ್ತು ನರಳುತ್ತಿವೆ. ಖಾಸಗಿ ಸಂಸ್ಥೆಗಳು ಈ ವ್ಯವಹಾರವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದು ಸಾಮಾಜಿಕ ಜವಾಬ್ದಾರಿ ನಿರ್ವಹಿಸುವ ಹೆಸರಿನಲ್ಲಿ ಅದನ್ನು ಸಾರ್ವಜನಿಕ ವಿಮಾ ಸಂಸ್ಥೆಗಳ ಮೇಲೆ ಹೇರಲಾಗಿದೆ. ವಿದೇಶಿ ಬಂಡವಾಳ ಹೆಚ್ಚಳದಿಂದಾಗಿ ಖಾಸಗಿ ಸಂಸ್ಥೆಗಳು ಲಾಭದಾಯಕವಾದ ಬೆಂಕಿ ಅಪಘಾತ ಮತ್ತು marine insurance ನ ಹೆಚ್ಚು ಹೆಚ್ಚು ವ್ಯವಹಾರ ನಡೆಸಲು ಇನ್ನಷ್ಟು ಸಾಮರ್ಥ್ಯ ನೀಡುತ್ತದೆ. ಇದು ಸಾರ್ವಜನಿಕ ಸಾಮಾನ್ಯ ವಿಮಾ ಕಂಪನಿಗಳ ಪಾಲಿಗೆ ಮಾರಕವಾಗಲಿದೆ.

ವಿದೇಶಿ ಬಂಡವಾಳ ಹೆಚ್ಚಿಸಲು ನೀಡುತ್ತಿರುವ ಮತ್ತೊಂದು ನೆಪವೆಂದರೆ ಹೆಚ್ಚಳದ ಮೂಲಕ ಹೊಸ ತಾಂತ್ರಿಕತೆ ಮತ್ತು ವಿಭಿನ್ನ ವಿಮಾ ಪಾಲಿಸಿಗಳು ಲಭ್ಯವಾಗುತ್ತವೆಯೆಂಬುದು. ಆದರೆ ವಾಸ್ತವದಲ್ಲಿ ವಿಮಾ ವ್ಯವಹಾರದಲ್ಲಿ ಖಾಸಗಿ ಯವರ ಪ್ರವೇಶವಾದಾಗಿನಿಂದ ಇಂದಿನವರೆಗೆ ಅವಲೋಕಿಸಿದರೆ ಯಾವುದೇ ಹೊಸ ತಂತ್ರಜ್ಞಾನ ವಾಗಲೀ, ವಿಭಿನ್ನ ವಿಮಾ ಪಾಲಿಸಿಗಳಾಗಲಿ ಜಾರಿಯಾಗಿಲ್ಲ. ಬದಲಿಗೆ ಸಾರ್ವಜನಿಕ ವಲಯದ ಎಲ್‌ಐಸಿ/ ಜಿಐಸಿಯ ಪಾಲಿಸಿಗಳನ್ನು ಹೊಸ ಹೆಸರಿನಲ್ಲಿ ಪರಿಚಯಿಸಿವೆ. ವಿಮೆಯ ಮೂಲಭೂತ ರೂಪುರೇಷೆಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ.

ಖಾಸಗಿಯವರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸುವಂತೆ ಕಡ್ಡಾಯ ಗೊಳಿಸುವಲ್ಲಿ ವಿಮಾ ಪ್ರಾಧಿಕಾರ ಸೋತಿದೆ. ಇತ್ತೀಚಿನ ದಿನಗಳಲ್ಲಿ ವಿಮಾ ಪ್ರಾಧಿಕಾರದ ವರ್ತನೆ ಖಾಸಗಿ ವಿಮಾ ಸಂಸ್ಥೆಗಳತ್ತ ಪಕ್ಷಪಾತಿಯಾಗಿದೆ ಯೆಂಬುದನ್ನು ನಾವು ಗಮನಿಸಿದ್ದೇವೆ. ಸಾರ್ವಜನಿಕ ಎಲ್‌ಐಸಿ/ ಜಿಐಸಿಯನ್ನು ದುರ್ಬಲಗೊಳಿಸುವ ದೃಢ ನಿರ್ಧಾರ ಹೊಂದಿರುವ ವಿಮಾ ಪ್ರಾಧಿಕಾರವು ವಿದೇಶ ನೇರ ಬಂಡವಾಳದಲ್ಲಿ ಹೆಚ್ಚಳವುಂಟಾದರೆ ಖಾಸಗಿ ವಿಮಾ ಸಂಸ್ಥೆಗಳಿಗೆ ಸಂಪೂರ್ಣ ಶರಣಾಗುವುದು ನಿಶ್ಚಿತ. ಈಗಾಗಲೇ ಅವ್ಯವಹಾರ ಮತ್ತು ಕಾನೂನಿನ ನಿರ್ಬಂಧಗಳನ್ನು ಮುರಿದಿರುವ ಹಿನ್ನೆಲೆ ಹೊಂದಿರುವ ಈ ಕಂಪನಿಗಳ ಬೆಳವಣಿಗೆಗೆ ಇದು ಸಹಕಾರಿಯಾಗಿದೆ.

ವಿಮಾ ಉದ್ದಿಮೆಯಲ್ಲಿ ವಿದೇಶ ಬಂಡವಾಳದ ಹೆಚ್ಚಳ ರಾಷ್ಟ್ರೀಕೃತ ಎಲ್‌ಐಸಿ/ ಜಿಐಸಿಯ ಪಾಲಿಗೆ ಮಾರಕ. ಮುಂಬರುವ ದಿನಗಳಲ್ಲಿ ಒಟ್ಟಾರೆಯಾಗಿ ಅದು ಈ ದೇಶದ ಆರ್ಥಿಕ ಪರಿಸ್ಥಿತಿಯನ್ನೇ ಅಲ್ಲೋಲಕಲ್ಲೋಲಗೊಳಿಸಬಹುದಾಗಿದೆ. ಆದ್ದರಿಂದ ಸಂಘಟಿತರಾಗಿ ಸಾರ್ವಜನಿಕರು, ನೌಕರರು ಈ ಪ್ರಸ್ತಾಪವನ್ನು ವಿರೋಧಿಸಬೇಕಾಗಿದೆ.

ಶೇರುಪೇಟೆಯಲ್ಲಿ ತಲ್ಲಣವೇಕೆ?

ಪುಟ 7 ರಿಂದ

ನಂಬಿದ್ದ ಅದರ ನಾಯಕ ಮಣಿಗಳು ಮತ್ತು ಅವರ ಬಾಲಂಗೋಚಿಗಳು ಹೇರಳವಾದ ಲಾಭ ಗಳಿಸಬಹುದೆಂಬ ಆಸೆಯಿಂದ ಅಪಾರ ಪ್ರಮಾಣದ ಹೂಡಿಕೆಯನ್ನು ಷೇರುಪೇಟೆಗಳಲ್ಲಿ ತೊಡಗಿಸಿದ್ದರು. ಚುನಾವಣಾ ಫಲಿತಾಂಶಗಳು ಹೊರಬಿದ್ದಂತೆಯೇ ಜಂಘಾಬಲ ಉಡುಗಿಹೋದ ಈ ಶಕ್ತಿಗಳು ತಮ್ಮೆಲ್ಲಾ ಹೂಡಿಕೆಗಳನ್ನು ವಾಪಸ್ಸು ಪಡೆಯಲು ನಡೆಸಿದ ತರಾತುರಿಯ ಕ್ರಮಗಳು ಕೂಡಾ ಷೇರುಪೇಟೆಯ ಕುಸಿತಕ್ಕೆ ಕಾರಣವಾದವು.

ಇರಲಿ. ಷೇರುಪೇಟೆಗೆ ಅದರ ವ್ಯವಹಾರಗಳಿಗೆ ಇಷ್ಟೊಂದು ಪ್ರಾಮುಖ್ಯತೆ ಕೊಡಬೇಕಾದುದರ ಅಗತ್ಯವಿದೆಯೇ? ಖಂಡಿತವಾಗಿಯೂ ಇಲ್ಲ. ಏಕೆಂದರೆ ಷೇರುಪೇಟೆಯ ಸ್ಥಿತಿಗತಿಗಳು ದೇಶದ ಆರ್ಥಿಕ ಪರಿಸ್ಥಿತಿಯನ್ನು ಬಿಂಬಿಸುವುದಿಲ್ಲ. ಷೇರುಪೇಟೆಯ ತಲ್ಲಣಗಳಾಗಲೀ, ಕುಸಿತಗಳಾಗಲಿ ದೇಶದ ಆರ್ಥಿಕತೆಗೆ ದೊಡ್ಡ ರೀತಿಯ ಅಪಾಯವನ್ನು ತಂದೊಡ್ಡುವುದಿಲ್ಲ. ಹೀಗಿರುವಾಗ ಮಾಧ್ಯಮಗಳ ಮತ್ತು ಉಳ್ಳವರ ಭಟ್ಟಂಗಿಗಳ ಆರ್ಭಟಕ್ಕೆ, ಆಕ್ರೋಶಕ್ಕೆ ಕಾರಣವಾದರೂ ಏನಿರಬಹುದು? ಅವರ ಆತಂಕ ದೇಶದ ಆರ್ಥಿಕ ಸುರಕ್ಷತೆಯ ಬಗ್ಗೆ ಅಲ್ಲ. ಅಥವಾ ಹೂಡಿಕೆದಾರರು "ಕಳಕೊಂಡಿರಬಹುದಾದ' ಸಂಪತ್ತಿನ ಬಗ್ಗೆಯೂ ಅಲ್ಲ! ಬದಲಾಗಿ, ಲಾಭದ ಹೆಸರಿನಲ್ಲಿ ಕೊಳ್ಳೆ ಹೊಡೆಯಲು ಇರುವ ಅವಕಾಶಗಳು ಎಲ್ಲಿ ಕುಂಠಿತವಾಗುತ್ತವೋ ಎಂಬುದರ ಬಗ್ಗೆ! ಷೇರುಪೇಟೆಯ ತಲ್ಲಣಗಳಿಗಿಂತಲೂ, ಜನರು ಆಯ್ಕೆ ಮಾಡಿರುವ ಹೊಸ ಸರ್ಕಾರದ ನೀತಿಗಳು ಎಲ್ಲಿಯಾದರೂ ತಮ್ಮ ಹಿತಾಸಕ್ತಿಗಳಿಗೆ ಮಾರಕವಾಗಬಹುದೋ ಎಂಬ ಭೀತಿ ಅವರಿಗೆ. ಅವರು ಮುಂದೊಡ್ಡುವ ಕುಂಟುನೆಪಗಳನ್ನೇ ಗಮನಿಸಿ. ಷೇರುಪೇಟೆ ಅಸ್ಥಿರಗೊಂಡಾಗ, ವಿದೇಶಿ ಬಂಡವಾಳ ಹರಿದುಬರುವುದು ನಿಂತೇ ಹೋಗಬಹುದು. ವಿದೇಶಿ ಬಂಡವಾಳ ಇಲ್ಲದೆ ಹೋದರೆ ಆರ್ಥಿಕ ಸುಧಾರಣೆಯ ಪ್ರಕ್ರಿಯೆಗೆ ಹಿನ್ನಡೆ ಉಂಟಾಗುತ್ತದೆ. ಇದರಿಂದಾಗಿ ಆರ್ಥಿಕ ಪ್ರಗತಿಯನ್ನು ಸಾಧಿಸುವುದು ಅಸಾಧ್ಯವೇ ಆಗುತ್ತದೆ. ಅಂದರೆ ಒಟ್ಟಾರೆಯಾಗಿ ಉಳ್ಳವರು ಇನ್ನಷ್ಟು ಶ್ರೀಮಂತರಾಗುವುದರಿಂದ ಮಾತ್ರವೇ ದೇಶದ ಪ್ರಗತಿ, ಉನ್ನತಿ ಆಗುತ್ತದೆ ಎಂಬ ಕುತರ್ಕ.

ದುರಂತವೆಂದರೆ, ದೇಶದ ಬಹುಪಾಲು ಜನರಿಗೆ ಅದರಲ್ಲೂ ವಿದ್ಯಾವಂತರಿಗೆ, ಷೇರುಪೇಟೆಯ ಬಗೆಗಿನ ಕನಿಷ್ಠ ಅರಿವೂ ಇಲ್ಲ. ಜನಾಭಿಪ್ರಾಯವನ್ನು ಸರಿಯಾದ ನಿಟ್ಟಿನಲ್ಲಿ ರೂಪಿಸಿದಾಗ ಮಾತ್ರ ಆಳುವ ವರ್ಗದ ಸ್ವಹಿತಾಸಕ್ತಿಯ ಕುಟಿಲ ತಂತ್ರಗಳನ್ನು ಬಯಲಿಗೆಳೆಯಲು ಸಾಧ್ಯ. ಕೇವಲ ಒಂದೆರಡು ಲೇಖನಗಳ ಮೂಲಕ ಮಾತ್ರ ಇಂತಹ ಅರಿವು ಬರುತ್ತದೆ ಎಂಬ ಭ್ರಮೆ ಬೇಡ. ಜನಪರವಾದ ಪರ್ಯಾಯ ನೀತಿಗಳಿಗಾಗಿ ಹೋರಾಟ ನಡೆಸುತ್ತಲೇ, ಲಾಭಪಿಪಾಸುಗಳ ನೀತಿಗಳನ್ನು ನಿರಂತರವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಬಯಲಿಗೆಳೆಯಬೇಕಾಗುತ್ತದೆ. ಅಂತಹ ಹೋರಾಟಗಳನ್ನು ಕಟ್ಟಿ ಬೆಳೆಸುವ ಮತ್ತು ಸಫಲಗೊಳಿಸುವ ಸಲುವಾಗಿ ಬೇಕಾದ ವೈಚಾರಿಕ ನೆಲೆಯ ಕೆಲವೊಂದು ಅಂಶಗಳನ್ನು ಒದಗಿಸುವುದೇ ಈ ಲೇಖನದ ಮೂಲ ಆಶಯ.

ಅಂಗನವಾಡಿ ಕಾರ್ಯಕರ್ತೆಯರ ಹೋರಾಟ

ಅಂಗನವಾಡಿ ಕೇಂದ್ರಗಳು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ ಪ್ರಾರಂಭವಾಗಿ 29 ವರ್ಷಗಳಾಗಿವೆ. 74 ಮತ್ತು 125 ರೂ.ಗಳಿಗೆ 4-5 ಗಂಟೆಗಳ ಕಾಲ ದುಡಿಯುತ್ತಿದ್ದ ಇವರು ಸಂಘಟಿತರಾಗಿ ದೇಶದಾದ್ಯಂತ ನಿರಂತರವಾದ ಹೋರಾಟಗಳಿಂದ ಅಂಗನವಾಡಿ ನೌಕರರು ಸರ್ಕಾರದಲ್ಲಿ ಮತ್ತು ಸಮಾಜದಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ. ರಾಜಕೀಯವನ್ನು ನಿಧಾನಗತಿಯಲ್ಲಿ ಅರಿವು ಪಡೆದುಕೊಂಡು ಸರ್ಕಾರದ ಜನವಿರೋಧಿ ನೀತಿಗಳ ವಿರುದ್ಧ ಮಾತನಾಡಲು ಆರಂಭಿಸಿದ್ದಾರೆ. ಇದರ ಸೂಕ್ಷ್ಮತೆಯನ್ನು ಸರ್ಕಾರ ತಿಳಿದುಕೊಳ್ಳುತ್ತಿದೆ. ದೇಶದ ಯೋಜನಾ ಆಯೋಗಗಳು ಈ ಯೋಜನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿವೆ. ಕರ್ನಾಟಕದ ಆಡಳಿತಾತ್ಮಕ ನ್ಯಾಯಮಂಡಳಿಯೂ ಸಹ ಈ ನೌಕರರ ಪರವಾಗಿಯೇ ತೀರ್ಪು ನೀಡಿದೆ. ಏಪ್ರಿಲ್ 29 ರಂದು ಪತ್ರಿಕೆಗಳು ವರದಿ ಮಾಡಿರುವಂತೆ ಕೇಂದ್ರ ರಾಜ್ಯ ಸರ್ಕಾರಗಳಿಗೆ ಅಂಗನವಾಡಿ ಕೇಂದ್ರಗಳನ್ನು ಬಲಿಷ್ಠಗೊಳಿಸುವಂತೆ ಗಡುವು ನೀಡಿ ನಿರ್ದೇಶನವಿತ್ತಿದೆ. ಸಾಮಾನ್ಯ ಜನರು ಕೂಡ ಅಂಗನವಾಡಿ ನೌಕರರ ಪರವಾಗಿ ಮಾತನಾಡುತ್ತಿದ್ದಾರೆ.

ಅನಿವಾರ್ಯವಾಗಿ ಸರ್ಕಾರಕ್ಕೆ ಇವರ ಪರವಾದ ನಿಲುವುಗಳನ್ನು ಮತ್ತು ಕನಿಷ್ಠ ಸೌಲಭ್ಯಗಳನ್ನು ಕೊಡಬೇಕಾಗಿದೆ ಮತ್ತು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು ಖಾಯಂ ಮಾಡಬೇಕಾದ ಅನಿವಾರ್ಯತೆ ಮುಂದಿನ ದಿನಗಳಲ್ಲಿ ಬರಬಹುದಾಗಿದೆ. ಇದರಿಂದ ಸರ್ಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಹೊಸ ನೀತಿಗಳನ್ನು ರೂಪಿಸಿ ಸರ್ಕಾರದ ಎಲ್ಲಾ ಕೆಲಸಗಳನ್ನು ಕಡಿಮೆ ಗೌರವಧನಕ್ಕೆ ಕಾರ್ಯಕರ್ತೆಯರಿಂದ ದುಡಿಸಿಕೊಳ್ಳುತ್ತಿದೆ. ಈ ನೀತಿಯನ್ನು ವಿರೋಧಿಸಿ ಸಿಐಟಿಯು ಮುಂದಿನ ದಿನಗಳಲ್ಲಿ ಹೋರಾಟಗಳನ್ನು ರೂಪಿಸುತ್ತಿದೆ.

ಅಧಿಕಾರದ ವಿಕೇಂದ್ರೀಕರಣದ ಹೆಸರಲ್ಲಿ ಎಸ್.ಎಂ.ಕೃಷ್ಣ ಸರ್ಕಾರ 2002 ಕಾರ್ಯಪಡೆಯನ್ನು ರೂಪಿಸಿ (ಟಾಸ್ಕ್ ಫೋರ್ಸ್) "ಯಾವ ಕೆಲಸವನ್ನು ಯಾವ ಹಂತದಲ್ಲಿ ನಿರ್ವಹಿಸಬೇಕೋ ಆ ಹಂತದಲ್ಲೇ ನಿರ್ವಹಿಸಬೇಕು ಎಂಬ ತತ್ವದ ಸರಕಾರ 3 ಹಂತದ ಪಂಚಾಯ್ತ್ ರಾಜ್ ಸಂಸ್ಥೆಗಳಿಗೆ ಹಣಕಾಸು, ಸಿಬ್ಬಂದಿ ಮತ್ತು ಜವಾಬ್ದಾರಿಗಳನ್ನು ವಹಿಸುವುದಾಗಿದೆ.ಸಿ

ಇದರ ಪ್ರಕಾರ ಪ್ರಾಥಮಿಕ ಶಾಲೆಗಳು, ಗ್ರಾಮೀಣ ಗ್ರಂಥಾಲಯಗಳು, ವಯಸ್ಕರ ಶಿಕ್ಷಣ ಕೇಂದ್ರಗಳು, ಅಂಗನವಾಡಿಗಳು ಎ.ಎನ್.ಆರ್ ಉಪಕೇಂದ್ರಗಳು ಮತ್ತು ನ್ಯಾಯಬೆಲೆ ಅಂಗಡಿಗಳನ್ನು ಗ್ರಾಮ ಪಂಚಾಯ್ತಿಯ ಆಡಳಿತ ವ್ಯಾಪ್ತಿಗೆ ತರುವುದಾಗಿದೆ.

ಸಿಐಟಿಯು ಅಧಿಕಾರ ವಿಕೇಂದ್ರೀಕರಣಕ್ಕೆ ವಿರೋಧವಿಲ್ಲ. ಆದರೆ ಈ ಹೆಸರಲ್ಲಿ ಯಾವ ಸೇವಾನಿಯಮಾವಳಿಗಳು ಇಲ್ಲದೆ ಒಂದು ಯೋಜನೆಯಡಿಯಲ್ಲಿ ದುಡಿಯುತ್ತಿರುವ ಮಹಿಳೆಯರನ್ನು ಶೋಷಣೆ ಮಾಡುವುದನ್ನು ವಿರೋಧಿಸುತ್ತಿದೆ.

ಹೆಚ್ಚುತ್ತಿರುವ ಸಮಸ್ಯೆಗಳು :

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಕಾರ್ಯಕರ್ತೆಗೆ 1450 ರೂ ಮತ್ತು ಸಹಾಯಕಿಗೆ 700 ರೂ.ಗಳನ್ನು 4 ಹೆಡ್ ಆಫ್ ಅಕೌಂಟ್ಸ್‌ನಲ್ಲಿ ಕೊಡುತ್ತಾರೆ. ಆದರೆ ಈ ಅಭಿವೃದ್ಧಿ ಯೋಜನೆಯ ಕೆಲಸದ ಬದಲಿಗೆ ಇಲಾಖೇತರ ಕೆಲಸಗಳು ಹೆಚ್ಚಾಗಿ ಐಸಿಡಿಎಸ್‌ನ ಮುಖ್ಯ ಉದ್ದೇಶ ಪೌಷ್ಟಿಕ ಆಹಾರ ವಿತರಣೆ ಮತ್ತು ಪ್ರಾಥಮಿಕ ಆರೋಗ್ಯ ಮತ್ತು ಶಿಕ್ಷಣ ಕೊಡುವುದು ಮೂಲೆಗುಂಪಾಗುತ್ತಿದೆ.

ಪ್ರತಿ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ತೆಗೆದುಕೊಳ್ಳುವಾಗ ಎಲ್ಲೆಡೆಯೂ ಸಮಸ್ಯೆಗಳಿರುವುದು ಸಾಮಾನ್ಯವಾಗಿದೆ. ಸಮಯಕ್ಕೆ ಸರಿಯಾಗಿ ಗೌರವಧನವಿಲ್ಲ, ಸರ್ವೆ, ಪಲ್ಸ್‌ಪೋಲಿಯೋ, ಚುನಾವಣೆ, ಕುಷ್ಠರೋಗದ ಮಾತ್ರೆ ಹಂಚುವುದು, ಅಂಗವಿಕಲರ ಸಮಸ್ಯೆ, ಸ್ತ್ರೀಶಕ್ತಿ, ಕಟ್ಟಡ ಸಮಸ್ಯೆಗಳು ಹಲವಾರು. ಇನ್ನು ಕಾರ್ಯಕರ್ತೆಯರಿಗೆ ಸಂಬಂಧಿಸಿದಂತೆ ರಾಜಕಾರಣಿಗಳ ಒತ್ತಡಕ್ಕೆ ಸಿಲುಕಿ ಸಹಮತವಿಲ್ಲದಿದ್ದರೂ ವರ್ಗಾವಣೆ, ಅಂಗನವಾಡಿ ಕೇಂದ್ರಗಳಿಗೆ ಬೇಕಾದ ಸೌಲಭ್ಯಗಳನ್ನು ಕೊಡದೇ ನೌಕರರನ್ನೇ ಹೊಣೆಗಾರಿಕೆ ಮಾಡುವುದು ಹೀಗೆ ಹಲವಾರು ಸಮಸ್ಯೆಗಳು ಬೆಟ್ಟದಷ್ಟಿರುವಾಗಲೆ ಪಂಚಾಯ್ತಿಗೆ ಒಪ್ಪಿಸುವ ಪ್ರಸ್ತಾಪ ಇದನ್ನು ವಿರೋಧಿಸಿ "ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿಐಟಿಯು)ದ ಕರೆಯ ಮೇರೆಗೆ ಸುಮಾರು 45 ತಾಲ್ಲೂಕುಗಳಲ್ಲಿ ಪ್ರತಿಭಟನಾ ಸಮಾವೇಶ ನಡೆದಿದೆ.

2ನೇ ಹಂತ ಚಳುವಳಿಯ ಭಾಗವಾಗಿ ಜುಲೈ 1 ರಿಂದ 12 ರತನಕ ರಾಜ್ಯದಾದ್ಯಂತ ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಲಾಗಿದೆ.

ರಾಯಚೂರು - ಉರಿವ ಬಿಸಿಲಿನಲ್ಲಿ ದೇವದುರ್ಗಾ, ಮಾನ್ವಿ, ಲಿಂಗಸುಗೂರು ಮತ್ತು ರಾಯಚೂರು ತಾಲ್ಲೂಕುಗಳಿಂದ ಸುಮಾರು 700 ಅಂಗನವಾಡಿ ನೌಕರರು ರಾಯಚೂರಿನ ಪಾರ್ಕ್‌ನಿಂದ ಜಿಲ್ಲಾ ಪಂಚಾಯ್ತಿ ಕಛೇರಿವರೆಗೂ ಘೋಷಣೆಗಳನ್ನು ಕೂಗುತ್ತಾ ಶಿಸ್ತುಬದ್ಧ ಮೆರವಣಿಗೆ ನಡೆಸಿದರು. ನಂತರ ಸಭೆ ನಡೆಸಲಾಯಿತು. ಈ ಹೋರಾಟವನ್ನುದ್ದೇಶಿಸಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಗಿರಿಯಪ್ಪ, ಚನ್ನಬಸವಯ್ಯ, ರೈತಸಂಘದ ಕರಿಯಪ್ಪ, ಸಿಪಿಐ(ಎಂ) ಜೆ.ಸುರೇಶ್, ರಾಯಚೂರಿನ ಪದ್ಮಾ ಜಿಲ್ಲಾ ಕಾರ್ಯದರ್ಶಿ ರಂಗಯ್ಯ ಮಾತನಾಡಿದರು.

ಜಿಲ್ಲಾ ಪಂಚಾಯ್ತಿ ಮುಖ್ಯ ನಿರ್ವಹಣಾಧಿಕಾರಿಗಳಿಗೆ ಮತ್ತು ಇಲಾಖೆಯ ಜಂಟೀ ನಿರ್ದೇಶಕರಿಗೆ ಮನವಿ ಪತ್ರ ಕೊಡಲಾಯಿತು. ನಂತರ ಸ್ಥಳೀಯ ಸಮಸ್ಯೆಗಳಿಗೆ ಸಂಬಂಧಿಸಿ ಇಲಾಖಾಧಿಕಾರಿಗಳ ಬಳಿ ಪ್ರತ್ಯೇಕ ಚರ್ಚೆ ಮಾಡಲಾಯಿತು. ರ‍್ಯಾಲಿಯ ನೇತೃತ್ವವನ್ನು .ಈರಣ್ಣ, ಆದಿಲಕ್ಷ್ಮಿ ಬಸಮ್ಮ ಲಕ್ಷ್ಮಿ ಮಾನ್ವಿಯ ಪಾರ್ವತಮ್ಮ ಮೊದಲಾದವರು ವಹಿಸಿದ್ದಾರೆ.

ತುಮಕೂರು : ಜಿಲ್ಲೆಯ ಗುಬ್ಬಿ, ತುರುವೇಕೆರೆ, ಮಧುಗಿರಿ, ತಿಪಟೂರು, ಕೊರಟಗೆರೆ, ಪಾವಗಡ, ಸಿ.ಎನ್.ಹಳ್ಳಿ, ಶಿರಾ, ಕುಣಿಗಲ್, ತುಮಕೂರು ಗ್ರಾಮಾಂತರ ಮತ್ತು ನಗರಗಳಿಂದ ಸುಮಾರು 500 ನೌಕರರು ಪ್ರವಾಸಿ ಮಂದಿರದಿಂದ ಮೆರವಣಿಗೆ ನಡೆಸಿ ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಲಾಯಿತು. ಮುಖ್ಯಕಾರ್ಯನಿರ್ವಹಣಾದಿಕಾರಿಗೆ ಮನವಿ ಕೊಟ್ಟು ಸ್ಥಳೀಯ ಸಮಸ್ಯೆಗಳಿಗೆ ಸಂಬಂಧಿಸಿದ ಪ್ರತ್ಯೇಕ ಜಂಟೀ ಸಭೆಯನ್ನು ನಡೆಸಿ ತಿಂಗಳ ಗೌರವಧನವನ್ನು ಪ್ರತ್ಯೇಕ ಸಂಬಳದ ಚೀಟಿಯನ್ನು ನೀಡಲು ತೀರ್ಮಾನಿಸಿದೆ.

ಈ ಹೋರಾಟವನ್ನುದ್ದೇಶಿಸಿ ಸಿಐಟಿಯು ರಾಜ್ಯಸಮಿತಿ ಖಜಾಂಚಿಗಳಾದ ಮೀನಾಕ್ಷಿ ಸುಂದರಂ, ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮುಜಿಬ್, ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಅಲ್ಲಾ ಬಕಾಶ್ ಮೊದಲಾದವರು ಮಾತನಾಡಿದ್ದಾರೆ. ರ‍್ಯಾಲಿಯ ನೇತೃತ್ವವನ್ನು ಸಂಘದ ಜಿಲ್ಲಾ ಸಮಿತಿಯ ಮುಖಂಡರಾದ ಕಮಲ, ಗಂಗಾ, ಪಾರ್ವತಮ್ಮ ಯಲ್ಲಮ್ಮ ಜಯಮ್ಮ ಶೋಭಾ ಮೊದಲಾದವರು ವಹಿಸಿದ್ದಾರೆ.

ಬೀದರ್ ನಮ್ಮ ಸಂಘಟನೆ ಮತ್ತು ಇನ್ನೊಂದು ಸಂಘಟನೆ ಸೇರಿ ಜಂಟಿ ಹೋರಾಟವನ್ನು ಜುಲೈ 2 ರಂದು ಮಾಡಿರುವುದು ಸ್ವಾಗತಾರ್ಹ. ಸುಮಾರು ಒಂದು ಸಾವಿರದಷ್ಟು ನೌಕರರು ಬೀದರ್, ಹುಮ್ನಾಬಾದ್, ಬಸವಕಲ್ಯಾಣದ ಔರಾದ್,ಬಾಲ್ಕಿ ತಾಲ್ಲೂಕುಗಳಿಂದ ಭಾಗವಹಿಸಿ ಪ್ರತಿಭಟಿಸಿದರು. ಈ ಸಭೆಯನ್ನುದ್ದೇಶಿಸಿ ರಾಜ್ಯಕಾರ್ಯದರ್ಶಿ ಎಸ್.ವರಲಕ್ಷ್ಮಿ ಜಿಲ್ಲಾ ಕಾರ್ಯದರ್ಶಿ ಬಕುಲಾದೇವಿ. ಸುಶೀಲಾ ಹತ್ತಿ ಮಾತನಾಡಿದರು. ನಂತರ ಜಿಲ್ಲಾ ಪಂಚಾಯ್ತಿ ಅಧಿಕಾರಿಗಳಿಗೆ ಮನವಿಪತ್ರ ಅರ್ಪಿಸಲಾಯಿತು. ರ‍್ಯಾಲಿಯ ನೇತೃತ್ವವನ್ನು ಚಿತ್ರಮ್ಮ ವೀಣಾಕುಮಾರಿ, ಹುಮ್ನಾಬಾದ್‌ನ ಆಶಾ, ಬಸವಕಲ್ಯಾಣ ಶ್ರೀದೇವಿ ಚುಡೆ, ಸರೋಜಿನಿ, ಜಾರಾದನ ಮಹಾನಂದ, ಶಕುಂತಲಾ, ಬಾಲ್ಕಿಯ ಸುಶೀಲಾ ಹತ್ತಿ ಮುಂತಾದವರು ವಹಿಸಿದ್ದರು.

ಉತ್ತರ ಕನ್ನಡ: ಕಾರವಾರದ ಜಿಲ್ಲಾ ರಂಗ ಮಂದಿರದಿಂದ ಹೊರಟ ಮೆರವಣಿಗೆಯಲ್ಲಿ ಜಿಲ್ಲೆಯ ಭಟ್ಕಳ, ಹೊನ್ನಾವರ, ಕುಮಟಾ, ಶಿರಸಿ, ಮುಂಡುಗೋಡು, ಸಿದ್ದಾಪುರ, ಯಲ್ಲಾಪುರ, ಅಂಕೋಲಾ, ಕಾರವಾರ, ಜೋಯ್ಡಾ, ಹಳಿಯಾಳಗಳಿಂದ ಸುಮಾರು 1750 ಜನರು ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಿದರು. ಬಹುಶಃ ಮೊದಲ ಬಾರಿಗೆ ಕಾರವಾರದಲ್ಲಿ ಇಷ್ಟು ಸಂಖ್ಯೆಯಲ್ಲಿ ಮಹಿಳೆಯರು ನೆರೆದಿದ್ದರು. ನಂತರ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಪತ್ರ ಕೊಟ್ಟರು. ಈ ಸಭೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಸಹ ಕಾರ್ಯದರ್ಶಿಗಳಾದ ಕಾಂ.ತಿಲಕ ಜಟ್ಟಿಗೌಡ, ವಿಠ್ಠಲ ಭಂಡಾರಿ, ಸಿ.ಆರ್.ಶ್ಯಾನಬಾಗ್, ರೈತಸಂಘದ ಜಿ.ಎಲ್.ನಾಯ್ಕ, ಹೆಚ್.ಬಿ.ನಾಯ್ಕ, ಜೋಷ್.ಕೆ. ಥಾಮಸ್, ಸವಿತಾ ತನ್ಮಡಗಿ, ಯಮುನಾ ಗಾಂವ್ಕರ್‌ರವರು ಮಾತನಾಡಿದರು.

ರ‍್ಯಾಲಿಯ ನೇತೃತ್ವವನ್ನು ಶಾಲಿನಿ ಕಲ್ಮನೆ, ಶಕುಂತಲಾ ಶೆಟ್ಟಿ, ಪದ್ಮಾ ಖಾರ್ವಿ, ಜಯಶ್ರೀ ಹಿರೇಕರ್, ಶಾಂತಿ ಶೇಟ್, ಸುಧಾ ಕೊಂಡ್ಲಿ, ಲಲಿತಾ ಶಿಡಗೇರಿ, ಅಹಲ್ಯ ನಾಯ್ಕ ಇನ್ನು ಮೊದಲಾದವರು ವಹಿಸಿದ್ದರು.

ಗುಲ್ಬರ್ಗಾ: ಆಳಂದ, ಚಿಂಚೋಳಿ, ಶಹಾಪುರ, ಯಾದಗಿರಿ, ಚಿತ್ತಾಪುರ, ಅಫಜಲಪುರ, ಗುಲ್ಬರ್ಗ ಗ್ರಾಮಾಂತರ ಮತ್ತು ನಗರ ಯೋಜನೆಗಳಿಂದ ಸಾವಿರಕ್ಕೂ ಮೀರಿ ನೌಕರರು ಕನ್ನಡ ಸಾಹಿತ್ಯ ಪರಿಷತ್ತು ಭವನದಿಂದ ಜಿಲ್ಲಾ ಪಂಚಾಯ್ತಿ ಕಛೇರಿಯವರೆಗೆ ಮೆರವಣಿಗೆ ನಡೆಸಿ ಜಿಲ್ಲಾ ಪಂಚಾಯ್ತಿ ಕೆಲಸಗಳನ್ನು ಸ್ಥಗಿತಗೊಳಿಸಲಾಯಿತಲ್ಲದೆ ಕಛೇರಿ ಒಳಗಿದ್ದವರಿಗೆ ದಿಗ್ಬಂಧನ ಹಾಕಲಾಯಿತು. ಅಂದು ಸಂಜೆ 4 ಗಂಟೆಯವರೆಗೂ ಧರಣಿ ನಡೆದ ನಂತರ ಜಿಲ್ಲಾ ಪಂಚಾಯ್ತಿ ಉಪಾಧ್ಯಕ್ಷರ ಸಮ್ಮುಖದಲ್ಲಿ ಜಂಟೀ ಸಭೆ ನಡೆದು 3 ತಿಂಗಳ ಕಾಲ ಗ್ರಾಮ ಪಂಚಾಯ್ತಿಗಳಿಂದ ದೃಢೀಕರಣ ಪತ್ರ ತರದೆ ಗೌರವಧನ ಪಾವತಿ ಮಾಡಬೇಕೆಂಬುದನ್ನು ಒಪ್ಪಿಸಲಾಯಿತು.

ಈ ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯಸಮಿತಿ ಅಧ್ಯಕ್ಷರಾದ ಶಾಂತಾ ಘಂಟೆ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಜೆಎಂಎಸ್ ನ ಮೀನಾಕ್ಷಿ ಬಾಳೆ, ರೈತಸಂಘದ ಕಠಾರೆ, ಗಂಗಮ್ಮ ಬಸಮ್ಮ ಸೌಭಾಗ್ಯಮ್ಮ ಮೊದಲಾದ ಮುಖಂಡರು ಮಾತನಾಡಿದರು. ರ‍್ಯಾಲಿಯ ನೇತೃತ್ವವನ್ನು ಜಿಲ್ಲಾ ಅಧ್ಯಕ್ಷರಾದ ಗೌರಮ್ಮ ದಾಕ್ಷಾಯಣಮ್ಮ ಈರಮ್ಮ ಶಂಕ್ರಮ್ಮ, ಬಂಗಾರಮ್ಮದ ಮಹಾನಂದ, ಪುಷ್ಪಾ, ಶಶಿಕಲಾ ಮುಂತಾದವರು ವಹಿಸಿದ್ದರು.



ಕೊಪ್ಪಳ : ಕುಷ್ಟಗಿ ಮತ್ತು ಗಂಗಾವತಿ ತಾಲೂಕುಗಳಿಂದ ಸುಮಾರು 500 ಕ್ಕೂ ಹೆಚ್ಚು ನೌಕರರು ರ‍್ಯಾಲಿಯಲ್ಲಿ ಭಾಗವಹಿಸಿ ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಿದರು. ಜಿಲ್ಲಾ ಕಾರ್ಯನಿರ್ವಹಣಾಧಿಕಾರಿಗಳಿಗೆ ಮನವಿ ಪತ್ರ ಕೊಟ್ಟು ಸ್ಥಳೀಯ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಈ ಸಭೆಯನ್ನುದ್ದೇಶಿಸಿ ಪದ್ಮಾವತಿ ಜಿ.ದೇಸಾಯಿ, ಅಂಜನಾ, ರೈತಸಂಘದ ಆರ್.ಕೆ.ದೇಸಾಯಿ ಮತ್ತು ಸಿಐಟಿಯುವಿನ ಮುಖಂಡರು ಮಾತನಾಡಿದರು. ರ‍್ಯಾಲಿಯ ನೇತೃತ್ವವನ್ನು ಗಿರಿಜಾ, ಮಹಾಂತಮ್ಮ ಗುರುರಾಜ ದೇಸಾಯಿ ಮುಂತಾದವರು ವಹಿಸಿದ್ದರು.

ಬೆಳ್ತಂಗಡಿ: ಜೂನ್ 5 ರಂದು 100 ಕ್ಕೂ ಹೆಚ್ಚು ನೌಕರರು ಬೆಳ್ತಂಗಡಿ ತಾಲೂಕು ಪಂಚಾಯ್ತಿಯ ಮುಂದೆ ಧರಣಿ ನಡೆಸಲಾಯಿತು. ಸ್ಥಳೀಯ ಸಮಸ್ಯೆಗಳಿಗೆ ಸಂಬಂಧಿಸಿ ಹಾಗೂ ಪಂಚಾಯ್ತಿಗೆ ಕೊಡುವುದನ್ನು ವಿರೋಧಿಸಿ ಅಧಿಕಾರಿಗಳಿಗೆ ಮನವಿ ಪತ್ರ ಕೊಡಲಾಯಿತು. ಈ ಧರಣಿಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಸಿಐಟಿಯುವಿನ ಬಿ.ಎಂ.ಭಟ್, ಜೆಎಂಎಸ್‌ನ ಸುಕನ್ಯಾ, ರೈತ ಸಂಘದ ಶಿವಕುಮಾರ್ ಮೊದಲಾದವರು ಮಾತನಾಡಿದರು. ರ‍್ಯಾಲಿಯ ನೇತೃತ್ವವನ್ನು ವಸುಂಧರಾ, ಸಿದ್ದಮ್ಮ ಬೀಡಿ ಸಂಘಟನೆಯ ಗೀತಾ ಮೊದಲಾದವರು ವಹಿಸಿದ್ದರು.

ಮಂಡ್ಯ: ಜೂನ್ 6 ರಂದು ಮಳವಳ್ಳಿ, ಮದ್ದೂರು, ಮಂಡ್ಯ ಮತ್ತು ನಾಗಮಂಗಲ ತಾಲೂಕುಗಳಿಂದ ಸುಮಾರು 700 ಕ್ಕೂ ಹೆಚ್ಚು ನೌಕರರು ಜ್ಯುಬಿಲಿ ಪಾರ್ಕ್‌ನಿಂದ ಮೆರವಣಿಗೆ ಹೊರಟು ಮಂಡ್ಯ ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಿದರು. ಪೋಲೀಸ್‌ನವರೊಂದಿಗೆ ವಾದ-ವಿವಾದ ನಡೆಸಿ ಆ ರಸ್ತೆಯನ್ನು ಸಂಪೂರ್ಣ ತಡೆ ಮಾಡಿದರು. ನಂತರ ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು ಮತ್ತು ಇಲಾಖೆಯ ಜಂಟಿ ನಿರ್ದೇಶಕರಿಗೆ ಮನವಿ ಪತ್ರ ಕೊಟ್ಟು ಸ್ಥಳೀಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಜಂಟೀ ಸಭೆಯನ್ನು ಮಾಡಲಾಯಿತು.

ಈ ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಸಿಐಟಿಯು ಜಿ.ರಾಮಕೃಷ್ಣ, ಡಿವೈಎಫ್‌ಐನ ಭರತರಾಜ, ಸಿಪಿಎಂನ ಪುಟ್ಟಮಾದು, ಜೆಎಂಎಸ್‌ನ ಸಿ.ಕುಮಾರಿದೇವಿ ಮೊದಲಾದವರು ಮಾತನಾಡಿದರು. ರ‍್ಯಾಲಿಯ ನೇತೃತ್ವವನ್ನು ಗಂಗಾ, ಜಯಲಕ್ಷ್ಮಿ ಲತಾ, ನಾಗರತ್ನ, ಪ್ರಮಿಳಾ, ಸುನಂದಾ, ಪುಷ್ಪಾ ಮೊದಲಾದವರು ವಹಿಸಿದ್ದರು.

ಮೈಸೂರು : ಜೂನ್ 6 ರಂದು ಟೌನ್‌ಹಾಲ್‌ನಿಂದ ಮೆರವಣಿಗೆ ಹೊರಟು ಜಿಲ್ಲಾ ಪಂಚಾಯಿತಿಗೆ ಸುಮಾರು 800 ಜನ ನೌಕರರು ನಂಜನಗೂಡು ಒಂದೇ ತಾಲೂಕಿನಿಂದ ಭಾಗವಹಿಸಿದ್ದು ವಿಶೇಷವಾಗಿತ್ತು. ಈ ಹೋರಾಟವನ್ನು ಮುರಿಯಲು ಕೆಲವು ಶಕ್ತಿಗಳ ಯೋಚನೆಯನ್ನು ಪ್ರತಿರೋಧಿಸಿ ನೌಕರರು ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಈ ಹೋರಾಟವನ್ನುದ್ದೇಶಿಸಿ ಸಂಘದ ರಾಜ್ಯ ಉಪಾಧ್ಯಕ್ಷರಾದ ಅಲ್ಲಾ ಬಕಾಶ್, ಸಿಐಟಿಯುವಿನ ಜಿಲ್ಲಾ ಕಾರ್ಯದರ್ಶಿ ಜಗದೀಶ್, ಅಧ್ಯಕ್ಷರಾದ ಜಯರಾಂ, ಸುರೇಶ್, ಶಿವಪ್ಪ, ಮೊದಲಾದವರು ವಹಿಸಿದ್ದರು. ಸ್ಥಳೀಯ ಸಮಸ್ಯೆಗಳನ್ನು ಅಧಿಕಾರಿಗಳೊಂದಿಗೆ ಚರ್ಚಿಸಿ ಇತ್ಯರ್ಥಪಡಿಸಲಾಯಿತು.

ಬಳ್ಳಾರಿ : ಜೂನ್ 7 ರಂದು ಶಿರಗುಪ್ಪ, ಹೊಸಪೇಟೆ, ಬಳ್ಳಾರಿ, ಹಗರಿಬೊಮ್ಮನಹಳ್ಳಿ, ಸಂಡೂರು ತಾಲೂಕುಗಳಿಂದ ಸುಮಾರು ಒಂದು ಸಾವಿರ ಜನರು ಭಾಗವಹಿಸಿ, ಉರಿಯುವ ಬಿಸಿಲಿನಲ್ಲಿಯೇ ಮೆರವಣಿಗೆ ನಡೆಸಿ ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಲಾಯಿತು. ಈ ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ರಘು, ಪ್ರಧಾನ ಕಾರ್ಯದರ್ಶಿ ವೆಂಕಟರಮಣ, ಸಿಪಿಎಂನ ಜಿಲ್ಲಾ ಕಾರ್ಯದರ್ಶಿ ಬಸವರಾಜು, ಜೆಎಂಎಸ್‌ನ ಚಂದ್ರ, ಆರ್.ಎಸ್.ಬಸವರಾಜು ಮೊದಲಾದವರು ಮಾತನಾಡಿದರು. ರ‍್ಯಾಲಿಯ ನೇತೃತ್ವವನ್ನು ನಾಗರತ್ನಾ, ಮಂಜುಳಾ, ಸೌಭಾಗ್ಯ, ಲೀಲಾವತಿ, ಯರ್‍ರವ್ವ, ಮಂಗಳಾ ಮುಂತಾದವರು ವಹಿಸಿದ್ದರು.

ಕೋಲಾರ: ಜುಲೈ 8 ರಂದು ಕೋಲಾರದ ಪ್ರವಾಸಿಮಂದಿರದಿಂದ ಸಮಾರು 500 ನೌಕರರು ಮೆರವಣಿಗೆ ಹೊರಟು ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಿದರು. ಸುರಿವ ಮಳೆಯಲ್ಲೂ ಸತತ 3 ಗಂಟೆ ಧರಣಿ ನಡೆಸಿದರು. ಅಧಿಕಾರಿಗಳೇ ಬಂದು ಮನವಿ ಪತ್ರ ಸ್ವೀಕರಿಸಿದರು.

ಈ ಪ್ರತಿಭಟನೆಯನ್ನುದ್ದೇಶಿಸಿ ರಾಜ್ಯಕಾರ್ಯದರ್ಶಿ ಎಸ್.ವರಲಕ್ಷ್ಮಿ ಸಿಐಟಿಯು ಮುಖಂಡರಾದ ಗಾಂಧಿನಗರ ನಾರಾಯಣಸ್ವಾಮಿ, ರೈತ ಸಂಘದ ಹೋಳೂರು ಶಂಕರ, ಎಸ್‌ಎಫ್‌ಐನ ಗೀತಾ, ಸಂಘದ ಜಿಲ್ಲಾ ಮುಖಂಡರಾದ ಈಶ್ವರಮ್ಮ ಸುನಂದಾರವರು ಮಾತನಾಡಿದರು.

ರ‍್ಯಾಲಿ ನೇತೃತ್ವವನ್ನು ಮುನಿರಾಜಮ್ಮ ಮೀನಾಕ್ಷಿ, ಗೌರಮ್ಮ ನೇತ್ರಾವತಿ, ವೆಂಕಟಲಕ್ಷ್ಮಮ್ಮ ಉಮಾ, ಲಕ್ಷ್ಮೀದೇವಿ, ಸಿದ್ದಗಂಗಪ್ಪ ಮೊದಲಾದವರು ವಹಿಸಿದ್ದರು.

ಬೆಳಗಾಂ: ಜುಲೈ 8 ರಂದು ಬೆಳಗಾಂ ಜಿಲ್ಲೆಯಲ್ಲಿ ಹುಕ್ಕೇರಿ, ಅಥಣಿ, ರಾಮದುರ್ಗ, ಬೆಳಗಾಂ, ಚಿಕ್ಕೋಡಿ, ರಾಯಬಾಗ, ಗೋಕಾಖದಲ್ಲಿ ಸುಮಾರು 600 ಕ್ಕೂ ಹೆಚ್ಚಿನ ಜನರು ಪಾಲ್ಗೊಂಡು ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಿದರು. ಜಿಲ್ಲಾಪಂಚಾಯ್ತಿ ಕಾರ್ಯ ನಿರ್ವಾಹಕಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಸಭೆಯನ್ನುದ್ದೇಶಿಸಿ ಸಂಘಟನೆಯ ರಾಜ್ಯ ಕಾರ್ಯದರ್ಶಿಗಳಾದ ಯಮುನಾ ಗಾಂವ್ಕರ್, ಸಿಐಟಿಯುವಿನ ಜಿಲ್ಲಾ ಕಾರ್ಯದರ್ಶಿ ಎಸ್.ಸಿ.ಕಾಂಬ್ಳೆ, ಅಧ್ಯಕ್ಷರಾದ ಕರಾಡೆ, ಇಂಡಾಲ್‌ನ ಪವಾರ್, ಎಲ್‌ಐಸಿಯ ಕುಲಕರ್ಣಿ, ಸಿಪಿಐಎಂ ಮುಖಂಡರಾದ ವಿ.ಪಿ.ಕುಲಕರ್ಣಿ, ಗೈಬು ಮೊದಲಾದವರು ಮಾತನಾಡಿದರು. ರ‍್ಯಾಲಿಯ ನೇತೃತ್ವವನ್ನು ಸುಜಾತ

ಪುಟ 11 ಕ್ಕೆ

ಧರ್ಮಛತ್ರದಲ್ಲಿ ತ್ರಿಶಂಕು

ಪುಟ 12 ರಿಂದ

ಇಷ್ಟಾದರೂ ತ್ರಿಶಂಕುವಿನ ಮನಸ್ಸು ಹಿಂಜರಿಯುತ್ತಿತ್ತು. ಆತ ಬಹಳ ದೀನನಾಗಿ ಹೇಳಿದ- 'ಸಾಹೇಬರೆ, ನನಗೆ ಯಾಕೊ ಹೇಗೆ ಹೇಗೊ ಆಗುತ್ತಿದೆ. ನಾವು ಅಲ್ಲಿ ಕೇವಲ ಮನಸ್ಸಿನಿಂದ ಮಾತ್ರ ಇರಬಹುದೆ ಹೊರತು ದೇಹ ಸಹಿತವಾಗಿ ಇರಲು ಹೋದರೆ ಅವರು ಸ್ವೀಕರಿಸಲಿಕ್ಕಿಲ್ಲವೊ ಏನೋ...'.

ವಿಶ್ವಾಮಿತ್ರರ ಅಭಿಮಾನ ಜಾಗ್ರತವಾಯಿತು. ತ್ರಿಶಂಕು ಅವರ ಶಕ್ತಿಯ ಮೇಲೆಯೆ ಅಪನಂಬಿಕೆ ಮಾಡುತ್ತಿದ್ದಾನೆಂದು ಅವರಿಗನ್ನಿಸಿತು. ಅವರು ಎದ್ದು ನಿಂತರು. ಅವರ ತೇಜಸ್ಸು ಜಾಗ್ರತವಾಯಿತು. ಹೇಳಿದರು- 'ತ್ರಿಶಂಕು, ನಾನು ವಿಶ್ವಾಮಿತ್ರ ರೆಂಟ್ ಕಂಟ್ರೋಲರ್, ನನ್ನ ಮಾತನ್ನು ಯಾವುದೇ ಮನೆ ಮಾಲೀಕ ತಳ್ಳಿ ಹಾಕಲಾರ. ನನಗೆ ಇಪ್ಪತ್ತು ವರ್ಷ ಸರ್ವಿಸ್ ಆಗಿದೆ. ಇದೇನೂ ಕಡಿಮೆ ತಪಸ್ಸಲ್ಲ. ನಾನು ನಿನ್ನನ್ನು ಸ್ವರ್ಗಪುರಿಯಲ್ಲಿ ನೆಲೆಸುವಂತೆ ಮಾಡುತ್ತೇನೆ. ನನ್ನ ಮಾತೆಂದರೆ ಸುಮ್ಮನೆಯೆ? ಹೋಗು, ಸಂಜೆ ಒಳಗೆ ಇಂದ್ರನಲ್ಲಿ ತಲುಪಿ ಬಿಡು'.

ತ್ರಿಶಂಕು ಸಂಜೆ ಕೈಗಾಡಿಯಲ್ಲಿ ಸಾಮಾನು ಸರಂಜಾಮುಳನ್ನೆಲ್ಲ ಹಾಕಿಕೊಂಡು ಸಿವಿಲ್ ಲಾಯಿನ್ಸ್‌ನ ದಾರಿ ಹಿಡಿದ. ಇಂದ್ರ ದೇವರ ಬಂಗಲೆಯನ್ನು ತಲುಪಿದ. ಇಂದ್ರ ದೇವರು ತಮ್ಮ ತೋಟದಲ್ಲಿ ಆರಾಮಕುರ್ಚಿಯಲ್ಲಿ ಒರಗಿಕೊಂಡು ತೋಟದ ಕೆಲಸದ ಆಳಿಗೆ ಆಜ್ಞೆ ಮಾಡುತ್ತಿದ್ದರು. ತ್ರಿಶಂಕು ಕೈಗಾಡಿಯನ್ನು ರಸ್ತೆಯಲ್ಲಿ ನಿಲ್ಲಿಸಿ ಇಂದ್ರನವರ ಎದುರು ಹೋಗಿ ನಿಂತ.

'ನಮಸ್ಕಾರ ಸಾಹೇಬರೆ'.

'ಹ್ಞೂ, ಏನಾಗಬೇಕು?'

ನಮಸ್ಕಾರಕ್ಕೆ ಉತ್ತರವಾಗಿ 'ಹ್ಞೂ' ಕೇಳಿ ತ್ರಿಶಂಕುವಿಗೆ ತಲೆ ಬಿಸಿಯಾಯಿತು. ಆದರೆ ತನ್ನ ಅವಶ್ಯಕತೆ ಮನಗಂಡು ಸಹಿಸಿಕೊಂಡ. ಆತನಿಗೆ ತಾನೆಲ್ಲೊ ಯಾರದ್ದೊ ಮನೆ ಬಾಗಿಲಿಗೆ ಭಿಕ್ಷೆ ಬೇಡಲಿಕ್ಕೆ ನಿಂತಂತೆ ಮತ್ತು ಮನೆಯೊಳಗಿನಿಂದ ಮುಂದೆ ನಡೆಯೆಂಬ ದನಿ ದೇಳಿದಂತೆ ಎನ್ನಿಸಿತು. ಮನಸ್ಸು ಗಟ್ಟಿ ಮಾಡಿಕೊಂಡು ಹೇಳಿದ- 'ನಿಮಗೆ ವಿಶ್ವಾಮಿತ್ರನವರು ಮನೆ ಬಾಡಿಗೆ ವಿಚಾರದಲ್ಲಿ ಫೋನ್ ಮಾಡಿದ್ದರಲ್ಲವೇ, ಅದಕ್ಕಾಗಿದಯೇ.....' ಇಂದ್ರ ಹೇಳಿದರು- 'ಹ್ಞಾ ಹ್ಞಾ ಸರಿ, ನಿನ್ನ ಸಾಹೇಬರೆಲ್ಲಿ?'

'ಯಾವ ಸಾಹೇಬರು?' ತ್ರಿಶಂಕುವಿಗೆ ಮಾತಿನ ಅರ್ಥ ಆಗಲಿಲ್ಲ. ಇಂದ್ರ ಸಿಟ್ಟಿಗೆದ್ದು ಹೇಳಿದರು- 'ಅರೇ, ಅವರೇ ಯಾರಿಗೆ ಮನೆ ಬೇಕೊ ಅವರು'.

ತ್ರಿಶಂಕುವಿಗೆ ಕಪಾಲಕ್ಕೆ ಹೊಡೆದ ಹಾಗಾಯಿತು. ಆತನೆಂದ- 'ಸ್ವಾಮೀ, ನಾನು-ನಾನೇ ಮನೆ ಬೇಕಾದವನು'.

ಇಂದ್ರ ಎದ್ದು ಕುಳಿತರು. ಕಣ್ಣೆತ್ತಿ ಆತನ್ನು ನೋಡಿದರು. ಸಿಟ್ಟಿನಿಂದ ಗದರಿದರು- 'ನೀನು ನನ್ನ ಮನೆಯಲ್ಲಿ ಇರುವೆಯಾ? ಏನು! ವಿಶ್ವಾಮಿತ್ರ, ಹಗಲಿನಲ್ಲಿಯೂ ಅಮಲಿನಲ್ಲಿ ಇರುತ್ತಾನೆಯೆ?'

ತ್ರಿಶಂಕು ಸಾಹಸವನ್ನು ಒಟ್ಟುಗೂಡಿಸಿಕೊಂಡು ಹೇಳಿದ- 'ಏಕೆ ಅಂತಹ ಆಗಬಾರದ್ದು ಏನು ಆಗಿಹೋಯ್ತು?'

ಇಂದ್ರ ತನ್ನಷ್ಟಕ್ಕೆ ಅಂದುಕೊಂಡ- ಯಾವನೊ ಯೋಗ್ಯನಿಗೆ ಮನೆ ಬೇಕಿತ್ತೆಂದು ನಾನು ತಿಳಿದಿದ್ದೆ.

ತ್ರಿಶಂಕು ಮನೆಯ ಆಸೆಯನ್ನು ಈಗ ಬಿಟ್ಟ. ಇದರಿಂದ ಆತನಿಗೆ ಮಾತನಾಡುವ ಶಕ್ತಿ ಬಂತು. ಆತ ಒರಟಾಗಿಯೇ ಕೇಳಿದ- 'ನಾನು ಏಕೆ ಇರಲು ಸಾಧ್ಯವಿಲ್ಲ. ಯಾಕೆ ನಾನು ಮನುಷ್ಯ ಅಲ್ಲವೆ?'

ಇಂದ್ರ ಮತ್ತೆ ಆತನನ್ನು ದಿಟ್ಟಿಸಿ ನೋಡಿದ. ಹೌದು ಇವನು ಮನುಷ್ಯನೆ, ಹೇಳಿದರು- 'ಯಾರು ಬರೀ ಮನುಷ್ಯರೋ ಅವರು ಇಲ್ಲಿ ಇರಲಾರರು.'

'ಅಂದರೆ?' ತ್ರಿಶಂಕುವೆಂದ.

ಇಂದ್ರ ಹೇಳಿದರು- 'ಅಂದರೆ ಅರ್ಥ ಇಷ್ಟೇ, ನೀನು ಇಲ್ಲಿರಲು ಯೋಗ್ಯನಲ್ಲ. ನಾನು ಮನುಷ್ಯನನ್ನು ನೋಡಿಯೇ ಗುರುತಿಸಬಲ್ಲೆ".

ತ್ರಿಶಂಕುವಿನ ಶಾಲಾ ಮಾಸ್ತರಿಕೆ ಎಚ್ಚೆದ್ದಿತು. ಆತ ಮಾತಿನ ಪೂರ್ಣ ಅರ್ಥ ತಿಳಿಯಲು ಬಯಸಿದ. ಅದಕ್ಕಾಗಿ ಕೇಳಿದ- 'ಹಾಗಿದ್ದರೆ ಇಲ್ಲಿರಲು ಯಾವ ಯೋಗ್ಯತೆ ಬೇಕು?'

ಇಂದ್ರ ಸಿಟ್ಟಿನಿಂದ ಆತನನ್ನು ನೋಡಿದರು ಮತ್ತು ಹೇಳಿದರು- 'ಭಿಕ್ಷುಕರು ಇಲ್ಲಿ ಇರಲು ಸಾಧ್ಯವಿಲ್ಲ. ನಿನ್ನ ಹತ್ತಿರ ಮೋಟರ್ ಇದೆಯೇ? ಟ್ರಾನ್ಸಿಸ್ಟರ್ ಇದೆಯೇ? ರೆಫ್ರಿಜರೇಟರ್ ಇದೆಯೇ? ಸೋಫಾಸೆಟ್ ಇದೆಯೇ?'

ತ್ರಿಶಂಕು ಇಂದ್ರನ ಕೋಪತಪ್ತ ಮುಖದ ಸೌಂದರ್ಯವನ್ನು ನೋಡುತ್ತಾ ಇದ್ದ. ಇಂದ್ರ ಹೇಳುತ್ತಾ ಹೋದರು- 'ನಿನ್ನ ಮಕ್ಕಳು ಕಾನ್ವೆಂಟಿನಲ್ಲಿ ಓದುತ್ತಾರೊ, ಹಳ್ಳಿ ಶಾಲೆಯಲ್ಲೋ? ಕ್ಯಾಕ್ಟಸ್‌ನಲ್ಲಿ ಎಷ್ಟು ಪ್ರಭೇದಗಳಿವೆಯೆಂದು ನಿನಗೆ ಗೊತ್ತೆ? ನೀನು ಯಾವ ಕ್ಲಬ್ಬಿಗೆ ಹೋಗುತ್ತಿ?'

ಉತ್ತರಕ್ಕೆ ಸ್ವಲ್ಪ ಸಮಯ ಬಿಟ್ಟು ಇಂದ್ರ ಹೇಳಿದರು- 'ಮತ್ತೆ ನೀನು ಇಲ್ಲಿ ಬರುವ ಧೈರ್ಯ ಹೇಗೆ ಮಾಡಿದೆ?' ತ್ರಿಶಂಕು ಸ್ವಲ್ಪ ಗಡುಸಾಗಿಯೇ ಉತ್ತರಿಸಿದ- 'ನನ್ನನ್ನು ವಿಶ್ವಾಮಿತ್ರ ಅವರು ಕಳಿಸಿದ್ದಾರೆ. ಅವರು ರೆಂಟ್ ಕಂಟ್ರೋಲರ್. ಅವರ ಆದೇಶ....'

ಇಂದ್ರ ಕ್ರುದ್ಧರಾಗಿ ಎದ್ದು ನಿಂತರು- ಒಂದು ಬೆರಳನ್ನು ಅವನ ಎದೆ ಸೀಳುವಂತೆ ಮುಂದೆ ತಿರುಗಿಸುತ್ತಾ ಗರ್ಜಿಸಿದರು. 'ನನಗೆ ವಿಶ್ವಾಮಿತ್ರನ ಬೆದರಿಕೆ ತೋರಿಸುತ್ತೀಯಾ? ಇಂಥ ರೆಂಟ್ ಕಂಟ್ರೋಲರ್ ಇಲ್ಲಿ ಇಪ್ಪತ್ತಕ್ಕೂ ಹೆಚ್ಚು ಬಂದು ಹೋಗಿದ್ದಾರೆ. ಸೆಕ್ರೆಟರಿಗೆ ಹೇಳಿ ನಾಳೆಯೇ ಅವನನ್ನು ಇಲ್ಲಿಂದ ಟ್ರಾನ್ಸ್‌ಫರ್ ಮಾಡಿಸಿಬಿಡುತ್ತೇನೆ. ವಿಶ್ವಾಮಿತ್ರನ ಅಪ್ಪನೂ ಕೂಡ ನಿನ್ನನ್ನು ಇಲ್ಲಿ ನೆಲಸಲು ಬಿಡುವುದು ಸಾಧ್ಯವಿಲ್ಲ. ಏನು, ನೀನು ನನ್ನ ಮನೆಗಳನ್ನು ಅನಾಥಾಲಯ ಎಂದು ಭಾವಿಸಿದ್ದೆಯಾ?'

ವಿಶ್ವಾಮಿತ್ರನಿಗೂ ಬೈಗುಳ ಬಿದ್ದದ್ದನ್ನು ನೋಡಿ ಇನ್ನು ತ್ರಿಶಂಕುವಿಗೆ ಅಲ್ಲಿರಲು ಯಾವುದೇ ಕಾರಣ ಕಾಣಲಿಲ್ಲ. ಅವನು ಕೈಗಾಡಿ ದೂಡಿಕೊಂಡು ನೇರವಾಗಿ ವಿಶ್ವಾಮಿತ್ರನ ಬಂಗಲೆಗೆ ಹೋದ. ಹೇಳಿದ- 'ಸಾಹೇಬರೆ, ಇಂದ್ರದೇವರು ನನ್ನನ್ನು ಓಡಿಸಿದರು. ಅಲ್ಲಿರಲು ನಾನು ಯೋಗ್ಯನಲ್ಲವೆಂದರು. ಅವರು ನಿಮಗೂ ಬೈದರು.' ವಿಶ್ವಾಮಿತ್ರನ ಹುಬ್ಬುಗಂಟೇರಿತು. ಕಣ್ಣುಗಳು ಕೆಂಪಾದವು.

'ಆ ಇಂದ್ರ ಬೋಳಿಮಗನಿಗೆ ಇಷ್ಟು ಸೊಕ್ಕೆ? ಅವನನ್ನು ನಾಳೆ ನಾನು ನೋಡಿಕೊಳ್ಳುತ್ತೇನೆ. ಇವತ್ತು ರಾತ್ರಿ ನೀನು ಹೇಗಾದರೂ ಕಳೆ. ನಾಳೆ ನಿನಗೆ ಅವನ ಮನೆ ಕೊಡಿಸುತ್ತೇನೆ.'

ತ್ರಿಶಂಕು ಕೈ ಜೋಡಿಸಿಕೊಂಡು ಹೇಳಿದ- 'ಸಾಹೇಬರೆ, ನಾನು ಅಲ್ಲಿ ಇರುವುದಿಲ್ಲ. ಅವರು ಬರೀ ಕಾಡು ಜನರು, ಅವರ ನಡುವೆ ನಾನು ಖಂಡಿತಾ ಇರಲಾರೆ.'

ವಿಶ್ವಾಮಿತ್ರ ಸಿಟ್ಟಿನಿಂದ ಆತನನ್ನು ನೋಡಿದ ಮತ್ತು ಎಂದ- 'ನೀನು ಅಲ್ಲೇ ಇರಬೇಕು. ಇದು ಈಗ ಮನೆಯ ಪ್ರಶ್ನೆ ಅಲ್ಲ. ನನ್ನ ಪ್ರತಿಷ್ಠೆಯ ಪ್ರಶ್ನೆ'.

ತಿಶಂಕುವೆಂದ- 'ಸಾಹೇಬರೆ, ಈಗ ಆ ಮಾತು ಬೇಡ. ನಾನು ಅಲ್ಲಿಗೆ ಹೋಗುವುದಿಲ್ಲ. ನಾನಂತೂ ನನ್ನ ಅದೇ ಹಳೆ ಮನೆಯಲ್ಲಿ ಇರುತ್ತೇನೆ'.

ಹೊರಡಲು ತಯಾರಾದ. ವಿಶ್ವಾಮಿತ್ರನೆಂದ- 'ಆದರೆ, ಅಲ್ಲಿ ನೀನು ಹೇಗೆ ಇರುತ್ತಿ? ಆ ಮನೆಯನ್ನು ಇವತ್ತೆ ನಾನು ಬೇರೆಯವರಿಗೆ ಅಲಾಟ್ ಮಾಡಿಬಿಟ್ಟಿದ್ದೇನೆ'.

ತ್ರಿಶಂಕುವಿನ ಕಣ್ಣಿನಲ್ಲಿ ಇಡೀ ಜಗತ್ತೆ ಕೆಲ ಕಾಲ ಉರುಟುರುಟು ಉಂಡುಂಡೆಯಾಗಿ ತಿರುಗಲು ತೊಡಗಿತು.

ಆತ ರಸ್ತೆಗೆ ಬಂದ.

ಆ ಕೈಗಾಡಿ ತೆಗೆದುಕೊಂಡು ಧರ್ಮ ಛತ್ರದೆಡೆಗೆ ಸಾಗಿದ.

ಅಂದಿನಿಂದ ತ್ರಿಶಂಕು ಧರ್ಮ ಶಾಲೆಯಲ್ಲೇ ಇದ್ದಾನೆ.

ಪ್ರತಿಗಾಮಿ ನೀತಿಗಳಿಂದ ಬಿಜೆಪಿಗಷ್ಟೇ ಪ್ರಯೋಜನ

ಪುಟ 5 ರಿಂದ

ಸುದ್ದಿಯಿತ್ತು - ನೌಕರರ ಭವಿಷ್ಯ ನಿಧಿ ಮತ್ತು ಸಣ್ಣ ಉಳಿತಾಯಗಳ ಬಡ್ಡಿ ದರ ಏರಬಹುದು ಎಂದು ಕಾರ್ಮಿಕರು ಮತ್ತು ಸಣ್ಣ ಉಳಿತಾಯಗಾರರಿಗೆ ಇದು ಹರ್ಷದ ಸುದ್ದಿ. ಆದರೆ ಹಣಕಾಸು ಮಂತ್ರಿಗಳ ಬಜೆಟ್ ಭಾಷಣ ಮುಗಿಯುವ ವೇಳೆಗೆ ಇವರೆಲ್ಲರ ಹರ್ಷ ಕರಗಿ, ಬರಸಿಡಿಲು ಬಡಿದಂತಾಗಿತ್ತು. ಏಕೆಂದರೆ ಇಂತಹ ಯಾವ ಪ್ರಕಟಣೆಯೂ ಅದರಲ್ಲಿ ಇರಲಿಲ್ಲ. ದೇಶದ ರಾಜಧಾನಿಯ ಹೆಚ್ಚಿನ ಇಂಗ್ಲಿಷ್, ಹಿಂದಿ, ಉರ್ದು ಮತ್ತು ಪಂಜಾಬಿ ಪತ್ರಿಕೆಗಳು ಇಂತಹ ಸುದ್ದಿ ಹೇಗೆ ಪ್ರಕಟಿಸಿದವು ಎಂಬುದು ಈಗಲೂ ರಹಸ್ಯವಾಗಿ ಉಳಿದಿದೆ. ಅದು ಅಧಿಕಾರಸ್ತರು ನೆಟ್ಟ ಸುದ್ದಿಯೇ? ಮಾಧ್ಯಮ ದೊರೆಗಳದ್ದೇ? ಅಥವಾ ಕೆಲವು ಪಟ್ಟಭದ್ರ ಹಿತಾಸಕ್ತಿಗಳದ್ದೇ? ಏನೇ ಇರಲಿ, ಅದು ಕೋಟ್ಯಾಂತರ ಜನಗಳ ಮೇಲೊಂದು ಕ್ರೂರ ಅಪಹಾಸ್ಯ ವಾಗಿತ್ತು.

ಹಣಕಾಸು ಮಂತ್ರಿಗಳಿಗೆ ಇದುವರೆಗೂ ಈ ಹಾಸ್ಯಪ್ರಸಂಗ ಏಕೆ ನಡೆಯಿತು ಎಂದು ಸ್ಪಷ್ಟಪಡಿಸುವುದಾಗಲೀ, ತನ್ನ ಮಂತ್ರಾಲಯದ ಕೈವಾಡ ಇದರಲ್ಲಿ ಇಲ್ಲ ಎಂದು ತಿಳಿಸುವುದಾಗಲೀ ಅಗತ್ಯ ಎಂದೇ ಅನಿಸಿಲ್ಲ.

ಅದೇನೇ ಇರಲಿ, ಜನರು ಭವಿಷ್ಯನಿಧಿ ಮತ್ತು ಸಣ್ಣ ಉಳಿತಾಯಗಳ ಮೇಲಿನ ಬಡ್ಡಿದರ ಏರುತ್ತದೇ ಎಂದೇ ನಿರೀಕ್ಷಿಸಿದ್ದರು. ಆದರೆ ಹಣಕಾಸು ಮಂತ್ರಿಗಳು ಬಂಡವಾಳಶಾಹಿಗಳು ಒತ್ತಾಯಿಸುತ್ತಿದ್ದಂತೆ ಅವನ್ನು ಇಳಿಸಲಿಲ್ಲ, ಅತ್ತ ಏರಿಸಲೂ ಇಲ್ಲ. ಅಧಿಕೃತ(ಹಾಗೂ ಬಹಳ ಮೋಸದಂತೆ ಕಾಣುವ) ಹಣದುಬ್ಬರ ದರ ಶೇ 6 ಮಟ್ಟವನ್ನು ಮೀರಿದರೂ ಸರ್ಕಾರ ನಿಗದಿತ ಬಡ್ಡಿ ದರಗಳು ಹಾಗೆಯೇ ಉಳಿದಿವೆ. ವಾಸ್ತವವಾಗಿ ಅದನ್ನು ಹಣದುಬ್ಬರಕ್ಕೆ ಜೋಡಿಸಲಾಗುವುದು ಎನ್ನಲಾಗಿತ್ತು. ಆದರೆ ಈಗ ಬಡ್ಡಿ ದರಗಳನ್ನು ಏರಿಸುವ ಬದಲು ಮುಂದೆ ಇಳಿಸುವ ಅಪಾಯವೇ ಹೆಚ್ಚಿದೆ.

ಅಮೆರಿಕಾದಲ್ಲಿ ಬಡ್ಡಿ ದರಗಳು ಬಹಳ ಕಡಿಮೆಯಿವೆ ಎಂದು ಮತ್ತೆ-ಮತ್ತೆ ಹೋಲಿಸಿ ಹೇಳಲಾಗುತ್ತಿದೆ. ಇಂತಹ ಹೋಲಿಕೆಗಳು ಅರ್ಥಹೀನ. ಟೈಂಸ್ ಆಫ್ ಇಂಡಿಯಾದ ಜೂನ್ 4 ರ ಸಂಪಾದಕೀಯ ಹೇಳಿರುವಂತೆ 'ಈ ಅಭಿವೃದ್ಧಿ ಹೊಂದಿದ ದೇಶಗಳ ಸೂಚ್ಯಂಕಗಳು ನಾವು ಅನುಸರಿಸಬಹುದಾದ ಸೂಚ್ಯಂಕಗಳಲ್ಲ. ಬಂಡವಾಳ ಹೆಚ್ಚಿರುವ ದೇಶಗಳು ಕಡಿಮೆ ಬಡ್ಡಿದರ ಹೊಂದಿರುತ್ತವೆ. ಬಂಡವಾಳ ಬೇಕಾಗಿರುವ ದೇಶಗಳಲ್ಲಿ ಅದು ಹೆಚ್ಚಿರುತ್ತದೆ. ಕಾರಣ ಸರಳ-ಈ ದೇಶಗಳು ಬಂಡವಾಳವನ್ನು ಆಕರ್ಷಿಸಲು ಹೆಚ್ಚಿನ ಪ್ರತಿಫಲ ನೀಡಬೇಕಾಗುತ್ತದೆ.

ಇನ್ನೊಂದೆಡೆ ಚಿದಂಬರಂ ಸಾಹೇಬರು ಸೇವಾ ತೆರಿಗೆ ದರಗಳನ್ನು 8 ರಿಂದ 10 ಶೇಕಡಾಕ್ಕೇರಿಸಿದರೆ ಮತ್ತು 57 ರಿಂದ 71 ಸೇವೆಗಳಿಗೆ ವಿಸ್ತರಿಸಿದ್ದಾರೆ. ಇದೊಂದು ಪರೋಕ್ಷ ತೆರಿಗೆಯಾಗಿದ್ದು, ಇದರಹೊರೆ ಕೂಡಾ ಬಹಳಮಟ್ಟಿಗೆ ಜನಸಾಮನ್ಯರ ಮೇಲೆಯೇ ಬೀಳುತ್ತದೆ.

ವ್ಯಂಗ್ಯವೆಂದರೆ ಚಿದಂಬರಂ ಸಾಹೇಬರು ಬಜೆಟ್ಟಿನಲ್ಲಿ ಪ್ರಸ್ತಾಪಿಸಿದ ಶೇರು ಮಾರುಕಟ್ಟೆ ವ್ಯವಹಾರಗಳ ಮೇಲಿನ ತೆರಿಗೆಯನ್ನು ಇಳಿಸುವುದಾಗಿ ಶೇರು ಮಾರುಕಟ್ಟೆ ಸಟ್ಟಾಕೋರರಿಗೆ ಭರವಸೆ ನೀಡಿದ್ದಾರೆ.

ಇನ್ನೊಂದು ತಪ್ಪು ಹೆಜ್ಜೆ

ಈಗ ಕಾಂಗ್ರೆಸ್ ನೇತೃತ್ವದ ಯುಪಿಎ ಮತ್ತೊಂದು ತಪ್ಪು ಪ್ರಯತ್ನ ನಡೆಸ ಹೊರಟಿದೆ. ಇದನ್ನು ತಡೆಯದಿದ್ದರೆ ಒಂದು ದಿನ ಅದು ಆತ್ಮಹತ್ಯೆಗಿಳಿಯಬೇಕಾದೀತು. ಯುಪಿಎನ ವಿದೇಶಿ ನೇರ ಹೂಡಿಕೆ ನೀತಿ ಎನ್‌ಡಿಎ ಮುಖದಲ್ಲಿ ನಗು ತಂದಿದೆಯಂತೆ, ಏಕೆಂದರೆ ಟೆಲಿಕಾಂ ಮತ್ತು ವಿಮಾ ರಂಗದಲ್ಲಿ ಎಫ್‌ಟಿಐ ಗರಿಕೆ ಎನ್‌ಡಿಎ ಯ ವಿಚಾರ ಎಂದು ಒಂದು ಪತ್ರಿಕೆ ಟಿಪ್ಪಣಿ ಮಾಡಿತ್ತು. ಈಗ ಜುಲೈ 13 ರ ಇಂಡಿಯನ್ ಎಕ್ಸ್‌ಪ್ರೆಸ್ ವರದಿಯನ್ನು ನೋಡಿ -

"ಎಡ ಮಿತ್ರ ಪಕ್ಷಗಳಿಂದ ವಿರೋಧ ಎದುರಿಸಬೇಕಾಗಿರುವ ಯುಪಿಎ ಸರ್ಕಾರ-ತನ್ನ ಹಿಂದಿನ ಸರ್ಕಾರದಂತೆ-ಪರಿಷ್ಕರಿಸಿದ ಎಫ್‌ಡಿಐ ಮಿತಿ ಸಾಧಿಸಲು ವಿರೋಧ ಪಕ್ಷಗಳಿಗೆ ಮೊರೆಯಿಡಬಹುದು. ಬಿಜೆಪಿ ತನ್ನ ರಕ್ಷಣೆಗೆ ಬರಬಹುದು ಎಂಬುದು ಸರ್ಕಾರದ ನಿರೀಕ್ಷೆ. ಏಕೆಂದರೆ ಜನವರಿ 2000 ದಲ್ಲಿ ರಾಜ್ಯಸಭೆಯಲ್ಲಿ ವಿಮಾ ಮಸೂದೆಗೆ ಕಾಂಗ್ರೆಸ್ ಬೆಂಬಲ ನೀಡಿತ್ತು. 1999 ರಲ್ಲಿ ಲೋಕಸಭೆಯಲ್ಲಿ ಎನ್‌ಡಿಎ ಯ ಬಲವೇ ಅದಕ್ಕೆ ಸಾಕಾಗಿತ್ತು. ಕಳೆದ ವಾರ ವಿಮಾ ವಿಲಯದಲ್ಲಿ ಎಫ್‌ಡಿಐ ಮಿತಿಯನ್ನು 26 ರಿಂದ 49 ಶೇಕಡಾಕ್ಕೆ ಏರಿಸುವ ಬಜೆಟ್ ಪ್ರಕಟಣೆಯ ನಂತರ ಎರಡೂ ಪಕ್ಷಗಳ ನಡುವೆ ಚರ್ಚೆ ನಡೆಯುತ್ತಿದೆ ಎಂದು ಮೂಲಗಳು ತಿಳಿಸಿವೆ.

ಈ ವರದಿ ಮುಂದುವರೆದು ಹೀಗೆ ಹೇಳಿದೆ - 'ಚಿದಂಬರಂ ಮುಂದುವರೆದು ಸಿಐಐ ಹಾಗೂ ಫಿಕಿ (FICCI) ಎಡ ಪಕ್ಷಗಳಲ್ಲಿನ ತಮ್ಮ ಕೇಂದ್ರ ಗೆಳೆಯರ ಬಳಿ ಮಾತನಾಡಿ ಅವರಿಗೆ ಮನವರಿಕೆ ಮಾಡಬೇಕು(ಈ ಪ್ರಯತ್ನ ಪ್ರಗತಿಪರ ಎಂದು!) ಎಂದು ಹೇಳಿದ್ದಾರೆ".

ಅಂದರೆ ಈಗ ಯಾವುದು ಪ್ರಗತಿಪರ ಎಂದು ಎಡಪಕ್ಷಗಳಿಗೆ ಬಂಡವಾಳಶಾಹಿಗಳು ಉಪದೇಶ ನೀಡಬೇಕು!

ಈ ಪ್ರಯತ್ನ ಸಾಮ್ರಾಜ್ಯಶಾಹಿಯ ಬೊಗಳುವ ನಾಯಿಯಂತೆ ವರ್ತಿಸುತ್ತಿರುವ ವಿಶ್ವಬ್ಯಾಂಕ್-ಐಎಂಎಫ್ ಮತ್ತು ದೇಶೀ ಬಂಡವಾಳಶಾಹಿಗಳನ್ನು ಸಂತೃಪ್ತಗೊಳಿಸಲಿಕ್ಕಾಗಿ ಎಂಬುದರಲ್ಲಿ ಸಂದೇಹವಿಲ್ಲ. ಯೋಜನಾ ಆಯೋಗದ ಮುಖ್ಯಸ್ಥ ಮೊಂಟೆಕ್‌ಸಿಂಗ್ ಅಹ್ಲುವಾಲಿಯಾ ಇಂಡಿಯನ್ ಎಕ್ಸ್‌ಪ್ರೆಸ್‌ಗೆ ನೀಡಿದ ಸಂದರ್ಶನದಲ್ಲಿ (ಜುಲೈ 13) ವಿಶ್ವಬ್ಯಾಂಕನ್ನು ಹೊಗಳಿದ ರೀತಿ ನೋಡಿದರೆ ಸಂದೇಹವೇನೂ ಉಳಿಯುವುದಿಲ್ಲ. ಸಂದರ್ಶನ ನಡೆಸಿದ ಪತ್ರಿಕೆಯ ಮುಖ್ಯ ಸಂಪಾದಕ ಶೇಖರ್ ಗುಪ್ತಾರವರು ಅಹ್ಲುವಾಲಿಯಾರನ್ನು 'ನೀವು, ಒಬ್ಬ ಐಎಂಎಫ್ ಮನುಷ್ಯ...' ಎಂದು ವರ್ಣಿಸಿದ್ದು ಮಾತ್ರ ಸರಿಯಾಗಿಯೇ ಇತ್ತು.

ಆದರೆ ಇಲ್ಲಿ ಬಹಳ ಮುಖ್ಯ ಅಂಶವೆಂದರೆ ಕಾಂಗ್ರೆಸ್ ನಿಜವಾಗಿಯೂ ಎಫ್‌ಟಿಐ ಮಿತಿ ಹೆಚ್ಚಿಸಲು ಬಿಜೆಪಿಯ ನೆರವು ಪಡೆಯಲು ಯೋಜಿಸುತ್ತಿದ್ದರೆ ಅದು ಜನಸಮೂಹಗಳಿಗೆ ವಿಶ್ವಾಸಘಾತ ಬಗೆದಂತಾಗುತ್ತದೆ. ಏಕೆಂದರೆ ದೇಶವನ್ನು ಬಿಜೆಪಿ-ಎನ್‌ಡಿಎ ದುರಾಡಳಿತದಿಂದ ಉಳಿಸಲು ಜನತೆ ಯುಪಿಎಗೆ ಮತ ನೀಡಿದ್ದರು.

ಎಡಪಕ್ಷಗಳು ಈ ವಿಷಯಗಳನ್ನು ಸರ್ಕಾರದ ಬಳಿ ಎತ್ತಲು ಆರು ಸದಸ್ಯರ ಒಂದು ತಂಡವನ್ನು ರಚಿಸಿದೆ. ಯಾವುದೇ ಜನ-ವಿರೋಧಿ ಕ್ರಮ ಕೈಗೊಳ್ಳದಂತೆ ಎಡಪಕ್ಷಗಳು ತಮ್ಮ ಕೈಲಾದ ಪ್ರಯತ್ನಗಳನ್ನೆಲ್ಲಾ ನಡೆಸುತ್ತವೆ. ಏಕೆಂದರೆ ಅಂತಹ ಕ್ರಮ ಬಿಜೆಪಿ ಮತ್ತು ಅದರೊಂದಿಗೆ ಕೈ ಮಿಲಾಯಿಸಿದವರಿಗೆ ಪ್ರಯೋಜನ ತರುತ್ತದೆ. ಎಡಪಕ್ಷಗಳು ಈ ಸರ್ಕಾರವನ್ನು ಬೀಳಿಸುವುದಿಲ್ಲ ಎಂಬುದು ಖಂಡಿತ. ಅಂದ ಮಾತ್ರಕ್ಕೆ ಎಡಪಕ್ಷಗಳು ಎಲ್ಲವನ್ನು ಬೆಂಬಲಿಸುತ್ತವೆ ಎಂದು ತಿಳಿಯಬಾರದು. ಕಾಂಗ್ರೆಸ್ ಮತ್ತು ಯುಪಿಎ ಕೂಡಾ ಈ ಪ್ರತಿಗಾಮಿ ಆರ್ಥಿಕ ನೀತಿಗಳೇ ಕೋಮುವಾದೀ ಪ್ರಯತ್ನದೊಂದಿಗೆ ಬಿಜೆಪಿ ನೇತೃತ್ವದ ಸರ್ಕಾರದ ಸೋಲಿಗೆ ಕಾರಣವಾದದ್ದು ಎಂಬುದನ್ನು ನೆನಪಿಸಿಕೊಳ್ಳುವುದು ಒಳ್ಳೆಯದು.

ಇಂಡೋನೇಶ್ಯಾ ಅಧ್ಯಕ್ಷೀಯ ಚುನಾವಣೆ :

ಅಧ್ಯಕ್ಷೆ ಮೇಘವತಿ ಸೋಲಿನತ್ತ

ಶರತ್ ಚಂದ್ರ

ಇಂಡೋನೇಶ್ಯಾದಲ್ಲಿ ಮೊದಲ ಬಾರಿಗೆ ನೇರ ಅಧ್ಯಕ್ಷೀಯ ಚುನಾವಣೆಗಳ ನಡೆದಿದೆ. ಕೆಲವು ತಿಂಗಳ ಹಿಂದೆ ಪಾರ್ಲಿಮೆಂಟರಿ ಚುನಾವಣೆ ನಡೆದಿವೆ. ಈ ಎರಡೂ ಚುನಾವಣೆಗಳು ಕುತೂಹಲ ಕೆರಳಿಸಿದ್ದು, ಭಾರಿ ಹಿಂಸಾಚಾರ ಅರಾಜಕತೆಯ ಆತಂಕ ತೋರಿದ್ದವು. ಆದರೂ ಶಾಂತಿಯುತವಾಗಿ ಕೊನೆಗಂಡಿವೆ. ಮಾತ್ರವಲ್ಲ ಆಶ್ಚರ್ಯಕಾರಿ ಫಲಿತಾಂಶಗಳನ್ನು ನೀಡಿವೆ. ಎರಡರಲ್ಲೂ ಅಧ್ಯಕ್ಷೆ ಮೇಘವತಿಯವರ ಪಕ್ಷ ಮೊದಲ ಸ್ಥಾನ ಪಡೆಯುವಲ್ಲಿ ಸೋತಿದೆ. ಎರಡೂ ಚುನಾವಣೆಗಳಲ್ಲಿ ಶೇಕಡಾ 80-85ರವರೆಗೆ ಭಾರಿ ಮತದಾನ ಆಗಿದೆ. ಇಸ್ಲಾಮ್ ಮತ್ತು ಪ್ರಜಾಸತ್ತೆ ಒಟ್ಟಿಗೆ ಇರಲಾರವು ಎಂದು ಹೇಳುವ, ಆದರೆ ಶೇಕಡಾ ಮತದಾನ 40 ರಿಂದ 50 ಕ್ಕಿಂತ ಹೆಚ್ಚಿಗೆ ಏರದ ದೇಶಗಳ ಪ್ರಜಾಸತ್ತೆ - ಪಂಡಿತರು ಮೂಗಿನ ಮೇಲೆ ಬೆರಳಿಡುವಂತೆ ಮಾಡಿದೆ.

ಮೇಘವತಿ ಎರಡನೇ ಸ್ಥಾನಕ್ಕೆ

ಅಧ್ಯಕ್ಷೀಯ ಚುನಾವಣೆಗಳಲ್ಲಿ ಈಗಿನ ಆಳುವ ಪಕ್ಷ ಪೀಪಲ್ಸ್ ಡೆಮೊಕ್ರಾಟಿಕ್ ಪಾರ್ಟಿ ಹಾಗೂ ಅಧ್ಯಕ್ಷೆ ಮೇಘವತಿ ಎರಡನೇ ಸ್ಥಾನಕ್ಕೆ ತಳ್ಳಲ್ಪಟ್ಟಿವೆ. ಮೂವತ್ತು ವರ್ಷಗಳಿಗಿಂತಲೂ ಹೆಚ್ಚು ಕಾಲ ಸರ್ವಾಧಿಕಾರ ನಡೆಸಿದ ಅಧ್ಯಕ್ಷ ಸುಹಾರ್ತೊ ಪಕ್ಷ ಗೋಲ್ಕರ್ ಪಕ್ಷ ಮತ್ತು ಅದರ ಅಭ್ಯರ್ಥಿ ಜನರಲ್ ವೀರಾಂತೊ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಹಿಂದೆ ಅಧ್ಯಕ್ಷೆ ಮೇಘಾವತಿಯ ಸಂಪುಟದಲ್ಲಿ ಭದ್ರತಾ ಮಂತ್ರಿಯಾಗಿದ್ದು ರಾಜೀನಾಮೆ ಕೊಟ್ಟು ಹೊರಬಂದಿದ್ದ ಜನರಲ್ ಸುಸಿಲೊ ಮೊದಲ ಸ್ಥಾನದಲ್ಲಿದ್ದಾರೆ. ಜನರಲ್ ವಿರಾಂತೊರವರ ಗೊಲ್ಕರ್ ಮತ್ತು ಮೇಘವತಿಯವರ ಪಕ್ಷ ದೇಶವ್ಯಾಪಿ ಸಂಘಟನೆ ಹೊಂದಿದ್ದು, ವ್ಯಾಪಕ ಜನಬೆಂಬಲ ಹೊಂದಿದ್ದರೂ ಅವರನ್ನು ಜನರಲ್ ಸುಸಿಲೊ ಹಿಂದೆ ಹಾಕಿದ್ದಾರೆ. ಅವರ ಡೆಮೊಕ್ರಾಟಿಕ್ ಪಕ್ಷ ಕೆಲವೇ ತಿಂಗಳುಗಳ ಹಿಂದೆ ಸ್ಥಾಪಿತವಾಗಿದ್ದರೂ, ಎರಡು ದೊಡ್ಡ ಸ್ಥಾಪಿತ ಪಕ್ಷಗಳನ್ನು ಹಿಂದೆ ಹಾಕಿದೆ.

ಜನರಲ್ ಸುಸಿಲೊ ಶೇಕಡಾ 33.5 ಮತಗಳಿಸಿದ್ದಾರೆ. ಪ್ರಸ್ತುತ ಅಧ್ಯಕ್ಷೆ ಮೇಘವತಿ ಶೇಕಡಾ 26.25 ಮತಗಳಿಸಿದ್ದಾರೆ? ಮೂರನೇ ಸ್ಥಾನದಲ್ಲಿರುವ ಜನರಲ್ ವಿರಾಂತೊ ಶೇಕಡಾ 23 ಮತಗಳಿಸಿದ್ದಾರೆ. ಇಂಡೋನೇಶ್ಯಾದ ಅಧ್ಯಕ್ಷೀಯ ಚುನಾವಣಾ ನಿರ್ಣಯಗಳ ಪ್ರಕಾರ ಯಾವ ಅಭ್ಯರ್ಥಿಗೂ ಶೇಕಡಾ 50 ಕ್ಕಿಂತ ಹೆಚ್ಚು ಮತ ಬರದಿದ್ದರೆ, ಮೊದಲ ಎರಡು ಅಭ್ಯರ್ಥಿಗಳ ನಡುವೆ ಎರಡನೇ ಸುತ್ತಿನ ಚುನಾವಣೆ ನಡೆಯುತ್ತದೆ.

ಸುಸಿಲೊ-ಮೇಘವತಿ ಎರಡನೇ ಸುತ್ತಿಗೆ

ಅಧ್ಯಕ್ಷೀಯ ಚುನಾವಣೆಗಳ ಎರಡು ವಾರಗಳ ನಂತರವೂ ಇನ್ನೂ ಎಲ್ಲಾ ಮತಗಳ ಎಣಿಕೆ ನಡೆದಿಲ್ಲ. ಭಾರಿ ಸಂಖ್ಯೆಯಲ್ಲಿ ಮತಗಳು ಕುಲಗೆಟ್ಟಿರುವುದು; ಸರ್ಕಾರದ ದುರುಪಯೋಗ ಹಲವು ಕಡೆ ಅಕ್ರಮಗಳ ಆರೋಪ ಇತ್ಯಾದಿ ನಡೆದಿದ್ದರೂ ಇಡೀ ಮತದಾನದ ಕ್ರಮಬದ್ಧತೆ ಪ್ರಶ್ನಾರ್ಹವಾಗಲಿಲ್ಲ. ಇನ್ನೂ ಸಾಕಷ್ಟು ಮತ ಎಣಿಕೆ ನಡೆಯಲಿದ್ದರೂ, ಅಧ್ಯಕ್ಷೀಯ ಅಭ್ಯರ್ಥಿಗಳ ಸ್ಥಾನ ಬದಲಾಗುವ ಸಾಧ್ಯತೆ ಇಲ್ಲ ಎನ್ನಲಾಗಿದೆ. ಹಾಗೆನೇ ಯಾವುದೇ ಅಭ್ಯರ್ಥಿಗೆ ಶೇಕಡಾ 50 ಕ್ಕಿಂತ ಹೆಚ್ಚಾಗಿ



ಮೇಘವತಿ

ಮತ ಬರುವ ಸಾಧ್ಯತೆಯೂ ಇಲ್ಲ. ಆದ್ದರಿಂದ ಇಂಡೋನೇಶ್ಯಾದ ಅಧ್ಯಕ್ಷೀಯ ಚುನಾವಣಾ ನಿಯಮಗಳ ಪ್ರಕಾರ, ಎರಡನೇ ಸುತ್ತಿನ ಮತದಾನ ಇನ್ನು ಎರಡು-ಮೂರು ತಿಂಗಳ ಒಳಗೆ ನಡೆಯಲಿದೆ. ಜನರಲ್ ಸುಸಿಲೊ ಮತ್ತು ಮೇಘವತಿ ನಡುವೆ ನೇರ ಹಣಾಹಣಿ ನಡೆಯಲಿರುವುದು ಹೆಚ್ಚು ಕಡಿಮೆ ಖಚಿತವಾಗಿದೆ.

ಏಪ್ರಿಲ್‌ನಲ್ಲಿ ನಡೆದ ಪಾರ್ಲಿಮೆಂಟರಿ ಚುನಾವಣೆಗಳಲ್ಲಿ ಗೋಲ್ಕರ್ ಪಾರ್ಟಿ (ಜನರಲ್ ವೀರಾಂತೊರವರ ಪಕ್ಷ) ಅತ್ಯಂತ ದೊಡ್ಡ ಪಕ್ಷವಾಗಿ ಹೊಮ್ಮಿತ್ತು. ಶೇಕಡಾ 22 ಮತಗಳನ್ನು ಗೋಲ್ಕರ್ ಗಳಿಸಿದೆ. ಅಧ್ಯಕ್ಷ ಮೇಘವತಿಯವರ ಪಿಡಿಪಿ ಶೇಕಡಾ 19 ಮತಗಳಿಸಿ ಎರಡನೇ ಸ್ಥಾನ ಗಳಿಸಿದೆ. ಹಿಂದಿನ ಚುನಾವಣೆಗಳಲ್ಲಿ ಅದರ ಎರಡು ಪಟ್ಟು ಮತಗಳಿಸಿದ್ದು ಈ ಬಾರಿ ತನ್ನ ಜನಪ್ರಿಯತೆ ಕಳೆದುಕೊಂಡಿದೆ. ಜನರಲ್ ಸುಸಿಲೊರವರ ಪಕ್ಷ ಮತ್ತು ಇನ್ನೊಂದು ಪಿಜೆಪಿ ತಲಾ ಶೇಕಡಾ 7 ಮತ ಗಳಿಸುವ ಮೂಲಕ ಎಲ್ಲರನ್ನೂ ಚಕಿತ ಮಾಡಿದ್ದವು.

ಪುನಃ ಜನರಲ್‌ಗಳ ದರ್ಬಾರ್?

ಹಿಂದೆ ಸುಹಾರ್ತೊ ಗೋಲ್ಕರ್ ಸರ್ವಾಧಿಕಾರದ ವಿರುದ್ಧ ಪ್ರಜಾಸತ್ತಾತ್ಮಕ ಪ್ರತಿಭಟನೆಯ ಪ್ರತೀಕವಾಗಿದ್ದ ಮೇಘವತಿ ತನ್ನ ಜನಪ್ರೀಯತೆ ಕಳೆದುಕೊಂಡಿದ್ದಾರೆ ಅಂತ ಕಾಣುತ್ತಿದೆ. ಮುಖ್ಯವಾಗಿ ಮಿಲಿಟರಿ ಅಧಿಕಾರಶಾಹಿಯ ಭಾರಿ ಭ್ರಷ್ಟಾಚಾರ ತಡೆಯುವಲ್ಲಿ ಪರಿಣಾಮಕಾರಿ ಕ್ರಮ ತೆಗೆದುಕೊಳ್ಳದ್ದು ಮತ್ತು ಜನಪರ ಆರ್ಥಿಕ ನೀತಿಗಳನ್ನು ಜಾರಿಗೆ ತರದ್ದು ಮೇಘವತಿ ಪಕ್ಷ ತನ್ನ ಜನಬೆಂಬಲ ಕಳೆದುಕೊಳ್ಳುವಂತೆ ಮಾಡಿದೆ. ಈ ಎರಡು ಪಕ್ಷಗಳಿಂದಾಚೆಗೆ ಭ್ರಷ್ಟಾಚಾರ ವಿರುದ್ಧ ಜನ-ಪರ ನೀತಿಗಳ ಬಗ್ಗೆ ಮಾತನಾಡುವವರೆಲ್ಲಾ ಜನತೆಗೆ ಭರವಸೆ ಹುಟ್ಟಿಸಿದ್ದಾರೆ ಅಂತ ಕಾಣುತ್ತದೆ. ಮೂರು ದಶಕಗಳಲ್ಲಿ ಮಿಲಿಟರಿ ಸರ್ವಾಧಿಕಾರದ ಬೂಟುಗಾಲಿನಡಿಯಲ್ಲಿ ನರಳಿದ್ದ ಇಂಡೋನೇಶ್ಯನ್ನರಿಗೆ ಪ್ರಜಾಸತ್ತೆಯ ಶಕ್ತಿ ಅರ್ಥವಾಗಿದೆ. ಅದನ್ನು ಚಲಾಯಿಸುತ್ತಿದ್ದಾರೆ.

ಆದರೆ ಇಂಡೋನೇಶ್ಯಾದ ರಾಜಕೀಯ ಚರಿತ್ರೆ ಮಿಲಿಟರಿ ಮತ್ತು ಸಾಮ್ರಾಜ್ಯಶಾಹಿ ಶಾಮೀಲಾಗಿ ಜನರಿಗೆ ಟೋಪಿ ಹಾಕಿದ ಪಿತೂರಿಗಳಿಂದ ತುಂಬಿದೆ ಅಂತಹುದರಲ್ಲಿ ಮೂವರು ಅಭ್ಯರ್ಥಿಗಳಲ್ಲಿ ಇಬ್ಬರು ಸೈನ್ಯದಿಂದ ಬಂದಿರುವುದು ಆತಂಕಕಾರಿಯೇ. ಇಂಡೋನೇಶ್ಯಾ ಸೈನ್ಯಾಧಿಕಾರಿಗಳು ಅಮೇರಿಕನ್ ಸಾಮ್ರಾಜ್ಯಶಾಹಿ ತನಗೆ ಅನುಕೂಲವಾಗುವಂತೆ ತರಬೇತಿ ನೀಡಿದ್ದು, ಅವರ ಮೇಲೆ ಸಾಕಷ್ಟು ನಿಯಂತ್ರಣ ಹೊಂದಿದೆ. ಜನರಲ್ ಸುಸಿಲೊ ಪರ ಅಮರೀಕನ್ ಸರ್ಕಾರ ವಾಲಿದೆ ಎಂಬ ಸುದ್ದಿ ಸಹ ಒಳ್ಳೆಯ ಸುದ್ದಿಯಲ್ಲ. ಆದರೆ ಇಂಡೋನೇಶ್ಯನ್ನರ ರಾಜಕೀಯ ಪ್ರಜ್ಞೆ ಎತ್ತರಿಸಿರುವುದು ಸ್ಪಷ್ಟ ಮತ್ತು ಸ್ವಾಗತಾರ್ಹ ಸಂಗತಿ.

"ಸುಳ್ಳು ಹೇಳಲಿಲ್ಲ- ಸತ್ಯವೂ ಹೇಳಲಿಲ್ಲ!"

ಇರಾಕಿ ಗೂಢಾಚಾರ ವರದಿ ಬಗ್ಗೆ ತನಿಖಾ ವರದಿ

ಇರಾಕ್ ಮೇಲೆ ಯುದ್ಧ ಸಾರಲು ಅಮೇರಿಕ ಮತ್ತು ಬ್ರಿಟೀಷ್ ಗೂಢಾಚಾರ ಸಂಸ್ಥೆಗಳು (ಅನುಕ್ರಮವಾಗಿ ಸಿಐಎ ಮತ್ತು ಎಂಐ6), ಸದ್ದಾಂ ಹುಸೇನ ಬಳಿ ರಾಸಾಯನಿಕ ಅಣು ಶಸ್ತ್ರಾಸ್ತ್ರಗಳು ಇವೆ ಎಂಬ ವರದಿ ಕೊಟ್ಟಿವೆ ಎಂಬುದು ಪ್ರಮುಖ ನೆಪವಾಗಿತ್ತು. ಇದನ್ನು ಆಗಲೇ ಯುದ್ಧ-ವಿರೋಧಿ ಚಳುವಳಿಗಳು ಪ್ರಶ್ನಿಸಿದ್ದವು. ಆದರೆ ಈಗ ಎರಡೂ ಸರ್ಕಾರಗಳು ನೇಮಿಸಿದ ತನಿಖಾ ಸಮಿತಿಗಳೇ ಇವು ಸುಳ್ಳು ಎಂದು ತನಿಖಾ-ನಂತರದ ವರದಿಯಲ್ಲಿ ಹೇಳಿವೆ.

ಡಾ.ಕೆಲ್ಲಿ ಬಲಿ

ಬ್ರಿಟನ್‌ನಲ್ಲಂತೂ ಗೂಢಚಾರ- ವರದಿಯ ಹಗರಣ ಒಬ್ಬ ಹಿರಿಯ ರಕ್ಷಣಾ ತಜ್ಞ ವಿಜ್ಞಾನಿಯನ್ನು ಬಲಿ ಸಹ ತೆಗೆದುಕೊಂಡಿತ್ತು. ರಕ್ಷಣಾತಜ್ಞ ಡಾ.ಕೆಲ್ಲಿ ಬಿಬಿಸಿಗೆ ಕೊಟ್ಟ ಸಂದರ್ಶನವೊಂದರಲ್ಲಿ ಇಂತಹ ಗೂಢಚಾರ ವರದಿಗಳು ಅತಿರಂಜಿತ ಎಂದಿದ್ದನ್ನು ಬಿಬಿಸಿ, ಪ್ರಸಾರ ಮಾಡಿತ್ತು. ಡಾ.ಕೆಲ್ಲಿ ಮೇಲೆ 'ಅಧಿಕೃತ ಗೋಪ್ಯ'ಗಳನ್ನು ಬಿಬಿಸಿಗೆ ಹೇಳಿದ ಆರೋಪದ ಮೇಲೆ ಸರ್ಕಾರಿ ತನಿಖೆ ನಡೆಸಲಾಯಿತು. ಇದರಿಂದ ಬೇಸತ್ತ ಡಾ.ಕೆಲ್ಲಿ ಸಂಶಯಾಸ್ಪದ ರೀತಿಯಲ್ಲಿ ಸತ್ತರು. ಅವರು ಆತ್ಮಹತ್ಯೆ ಮಾಡಿಕೊಂಡರು ಎಂಬುದು ಪೊಲೀಸರ ವಾದ. ಆಗಲೇ ಈ ಬಗ್ಗೆ ತನಿಖೆಗೆ ನೇಮಿಸಿದ್ದ ಹಟ್ಟನ್‌ರ ವರದಿ, ಬಿಬಿಸಿ ಡೈರೆಕ್ಟರ್ ಜನರಲ್ ಮತ್ತು ಒಬ್ಬ ವರದಿಗಾರ ರಾಜೀನಾಮೆ ನೀಡಬೇಕಾಗಿ ಬಂದಿತ್ತು.

ಬಟ್ಲರ್ ವರದಿ

ಆದರೆ ಅದೇ ಸಮಯದಲ್ಲಿ ಬ್ರಿಟೀಷ್ ಸರ್ಕಾರಕ್ಕೆ ಕೊಡಲಾದ ವರದಿ ಎಷ್ಟು ಪಕ್ಕಾ ಗೂಢಚಾರ ವರದಿ ಮತ್ತು ವಿಶ್ಲೇಷಣೆ ಮೇಲೆ ಆಧಾರಿತವಾಗಿದೆಯೆ ಎಂಬ ಬಗ್ಗೆ ತನಿಖೆಗೆ ಆಜ್ಞೆ ಮಾಡಲಾಗಿತ್ತು. ಆ ಬಟ್ಲರ್ ವರದಿ ಈಗ ಬಂದಿದೆ. ಅದರ ಪ್ರಕಾರ ಬ್ರಿಟೀಷ್ ಸರ್ಕಾರಕ್ಕೆ ಕೊಡಲಾದ ವರದಿ ಪಕ್ಕಾ ಗೂಢಚಾರ ವರದಿ ಮತ್ತು ವಿಶ್ಲೇಷಣೆಗೆ ಒಳಗಾಗಿರಲಿಲ್ಲ ಮಾತ್ರವಲ್ಲ, ಕೆಲವು ವರದಿಗಳ ಮೂಲದ ಬಗ್ಗೆ ಇರುವ ಅನುಮಾನಗಳನ್ನು ವಿವರವನ್ನು ವರದಿ ರಾಜಕೀಯ ಅಧಿಕಾರಗಳ ಹಂತಗಳಲ್ಲಿ ಮೇಲೆ ತಲುಪದಂತೆ ತೆಗೆಯಲಾಯಿತು. ಅಲ್ಲದೆ ರಕ್ಷಣಾ ಖಾತೆ ವಿಶ್ಲೇಷಕರು ಪ್ರಶ್ನಿಸಿದ್ದ ಕೆಲವು ನಿರ್ಣಯಗಳನ್ನು ಹಾಗೆ ಮೇಲಕ್ಕೆ ಕಳಿಸಲಾಗಿತ್ತು. ಸದ್ದಾಂ ಹುಸೇನ್ ಬಳಿ 45 ನಿಮಿಷಗಳ ಒಳಗೆ ನಿರ್ಧಾರ ಮಾಡಿ ಬ್ರಿಟನ್ ಮೇಲೆ ದಾಳಿ ಮಾಡಬಹುದಾದ ರಾಸಾಯನಿಕ ಅಣು ಶಾಸ್ತ್ರ ಕ್ಷಮತೆ ಇದೆ ಎಂಬ ಮಾಹಿತಿ ಬಂದು ಇದನ್ನೇ ಡಾ.ಕೆಲ್ಲಿ ಪ್ರಶ್ನೆ ಮಾಡಿದ್ದು, ಆದರೆ ಈಗ ಬಟ್ಲರ್ ಅವರ ಸತ್ಯಾಸತ್ಯತೆ ಪ್ರಶ್ನಿಸಿದ್ದಾರೆ.

ಪೂರ್ಣ ಸತ್ಯ ಹೇಳಲಿಲ್ಲ

ಕ್ಯಾಬಿನೆಟ್ ಮತ್ತು ಪಾರ್ಲಿಮೆಂಟ್ ಮಂಡಿಸಲಾದ ವರದಿ ಪಕ್ಷಗಳ ಮೇಲೆ ಆಧಾರಿತವಲ್ಲ ಮಾತ್ರವಲ್ಲ, ಬೇಕಾದ ಹಾಗೆ ತಿರುಚಲಾಗಿತ್ತು ಎಂಬ ತೀರ್ಮಾನಕ್ಕೆ ಬಟ್ಲರ್ ವರದಿ ಬಂದಿದೆ. ಆದರೆ ಅದನ್ನು ಮಾಡಿದವರು ಯಾರು? ಅವರ ಉದ್ದೇಶ ಏನು? ಎಂಬುದರ ಬಗ್ಗೆ ಕೆದಕಲು ಹೋಗಿಲ್ಲ. ಯಾರನ್ನೂ ಈ ಪ್ರಮಾದಕ್ಕೆ ದೋಷಿ ಮಾಡದೆ, ಇದು ಒಟ್ಟಾರೆ ವ್ಯವಸ್ಥೆಯ ದೋಷ ಎಂದು ಕೈತೊಳೆದುಕೊಂಡಿದೆ. ಪ್ರಧಾನಿ ಬ್ಲೇರ್ ಮತ್ತು ಮಂತ್ರಿಮಂಡಲಕ್ಕೆ ಇದು ಸುಳ್ಳು ವಿಶ್ಲೇಷಣೆ ಎಂದು ಗೊತ್ತಿತ್ತೆ? ಗೊತ್ತಿದ್ದಲ್ಲಿ ಪಾರ್ಲಿಮೆಂಟಿಗ ಹೇಳಿದ್ದರೆ? ಎಂಬ ಪ್ರಶ್ನೆಗೆ ಉತ್ತರವಿಲ್ಲದೆ ಹೋಗಿದೆ. ಆದರೆ ಮುಂದಿನ ವಾರದಲ್ಲಿ ಪಾರ್ಲಿಮೆಂಟ್‌ನಲ್ಲಿ ಮತ್ತು ಆಚೆಗೆ ತೀವ್ರ ಚರ್ಚೆ ನಡೆಯಲಿದೆ.

ಇರಾಕ್ ಯುದ್ಧ ಪೂರ್ತಿ, ಬೊಗಳೆ ವಾದಗಳ ಮೇಲೆ ಆಧಾರಿತವಾಗಲು, ಈ 'ಅಧಿಕೃತ ಸತ್ಯ' ಇದನ್ನು ಬಳಸಿ ಶಾಂತಿ ಚಳುವಳಿ ಹೋರಾಟಕ್ಕಿಳಿಯಬೇಕಿದೆ.

ಅಂಗನವಾಡಿ ಕಾರ್ಯಕರ್ತೆಯರ ಹೋರಾಟ

ಪುಟ 9 ರಿಂದ

ಬೆಳಗಾವಂಕರ, ಮುಬಿಲ್ಲಾ, ಕಲ್ಪನಾ ಹುಕ್ಕೇರಿ, ಅನ್ನಪೂರ್ಣಾ, ಪ್ರೇಮ ಕಿಲ್ಲಾದೆ ಇನ್ನೂ ಮುಂತಾದವರು ವಹಿಸಿದ್ದರು.

ಹಾಸನ: ಜುಲೈ 9 ರಂದು ಹಾಸನದಲ್ಲಿ ಹೊಳೆನರಸೀಪುರ, ಹಾಸನ, ಅರಸೀಕೆರೆ ತಾಲ್ಲೂಕುಗಳಿಂದ ಸುಮಾರು 700 ಜನರು ಭಾಗವಹಿಸಿ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಿದರು. ನಂತರ ಜಿಲ್ಲಾ ಪಂಚಾಯ್ತಿ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಮನವಿ ಪತ್ರ ಕೊಡಲಾಯಿತು. ಈ ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಸುಕುಮಾರ್, ಸಂಘಟನೆಯ ಮುಖಂಡರಾದ ಸುನೀತಾ, ಮಂಜಮ್ಮ ಡಿವೈಎಫ್‌ಐನ ಧರ್ಮೇಶ್ ಮೊದಲಾದವರು ಮಾತನಾಡಿದರು.

ಬಿಜಾಪುರ: ಸುರಿಯುವ ಮಳೆಯಲ್ಲಿಯೂ ಬಿಜಾಪುರ, ಮುದ್ದೇಬಿಹಾಳ, ಇಂಡಿ, ಬೀಳಗಿ, ಬಸವನ ಬಾಗೇವಾಡಿಗಳಿಂದ ಸುಮಾರು 600 ಜನರು ಭಾಗವಹಿಸಿದ್ದರು. ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕಿ ಅಧಿಕಾರಿಗಳಿಗೆ ಮನವಿ ಪತ್ರ ಕೊಡಲಾಯಿತು. ಈ ಪ್ರತಿಭಟನೆಯನ್ನುದ್ದೇಶಿಸಿ ಸಂಘಟನೆಯ ಮುಖಂಡರಾದ ನೀಲಮ್ಮ ಬೋರಾವತಿ, ಸಂಘದ ರಾಜ್ಯ ಸಹಕಾರ್ಯದರ್ಶಿಗಳಾದ ಯಮುನಾ ಗಾಂವ್ಕರ, ಜೆಎಂಎಸ್‌ನ ಸುರೇಖಾ, ರೈತ ಸಂಘದ ಭೀಮಸಿ ಕಲಾದಗಿಯವರು ಮಾತನಾಡಿದರು. ಒಟ್ಟಾರೆಯಾಗಿ ಸುರಿಯುವ ಮಳೆ,ಕೆಲವೆಡೆ ಬಿಸಿಲು ಲೆಕ್ಕಿಸದೇ ಅಂದು ಕೆಲಸ ದೂರದೂರದ ಜಿಲ್ಲಾ ಕೇಂದ್ರಗಳಿಗೆ ಸ್ವಂತ ಖರ್ಚಿನಿಂದ ಗರ್ಭಿಣಿ-ಬಾಣಂತಿ ಮಹಿಳೆಯರು 2-3 ವರ್ಷದ ಕಂದಮ್ಮಗಳನ್ನು ಕಂಕುಳಲ್ಲಿರಿಸಿಕೊಂಡು, 60-70 ವರ್ಷದ ವೃದ್ಧೆಯರು ಈ ಹೋರಾಟದಲ್ಲಿ ಕನಿಷ್ಠ 2-3 ಕಿಲೋಮೀಟರ್ ನಡೆದು 3-4 ಗಂಟೆಗಳ ಕಾಲ ಜಿಲ್ಲಾ ಪಂಚಾಯ್ತಿ ಮುತ್ತಿಗೆ ಹಾಕುವುದರ ಮೂಲಕ ಈ ಅಸಂಘಟಿತ ವಿಭಾಗಕ್ಕೆ ಸೇರಿದ ಮಹಿಳೆಯರು ಇಡೀರಾಜ್ಯದ ಜನರ ಮತ್ತು ಮಾಧ್ಯಮಗಳ ಮಗನ ಸೆಳೆಯಲು ಶಕ್ಯವಾದರೂ ಸರ್ಕಾರದ ನೀತಿಯನ್ನು ಗೆಲ್ಲಲು ಮತ್ತಷ್ಟು ಹೋರಾಟಕ್ಕೆ ಸಜ್ಜುಗೊಳ್ಳಬೇಕಾದ ಅನಿವಾರ್ಯತೆ ನಮ್ಮ ಮುಂದಿದೆ. ಒಟ್ಟಾರೆಯಾಗಿ 15 ಜಿಲ್ಲೆಗಳಲ್ಲಿ ನಡೆದ ಹೋರಾಟದಲ್ಲಿ ಸುಮಾರು 1500 ಮಹಿಳೆಯರು ಪಾಲ್ಗೊಂಡಿರುವುದನ್ನು ಗಮನಿಸಬೇಕಾಗಿದೆ.

- ಎಸ್.ವರಲಕ್ಷ್ಮಿ

ಧರ್ಮಛತ್ರದಲ್ಲಿ ತ್ರಿಶಂಕು

ಹರಿಶಂಕರ ಪರಸಾಯಿ



ಯಾವುದೋ ಒಂದು ಪಟ್ಟಣದ ಸಣ್ಣ ಗಲ್ಲಿಯಲ್ಲಿ ಒಂದು ಸಾಧಾರಣ ಮನೆಯಲ್ಲಿ ಒಬ್ಬನು ವಾಸಿಸುತ್ತಿದ್ದನು. ಅವನ ಹೆಸರು ತ್ರಿಶಂಕು. (ಪೌರಾಣಿಕ ಕಥೆಯ ಪ್ರಕಾರ ತ್ರಿಶಂಕುವನ್ನು ಋಷಿ ವಿಶ್ವಾಮಿತ್ರನು ತನ್ನ ತಪೋಬಲದಿಂದ ದೇಹ ಸಹಿತವಾಗಿ ಸ್ವರ್ಗಕ್ಕೆ ಕಳಿಸಿದ. ಅಲ್ಲಿ ದೇವತೆಗಳು ಅವನನ್ನು ಕೆಳಗೆ ದೂಡಿದರು. ಹಾಗಾಗಿ ಅವನು ಮಧ್ಯದಲ್ಲಿಯೇ ತಲೆಕೆಳಗಾಗಿ ನೇತಾಡುತ್ತಿದ್ದಾನೆ) ಅವನು ಒಂದು ಸಣ್ಣ ಶಾಲೆಯಲ್ಲಿ ಮಾಸ್ತರನಾಗಿದ್ದ.

ತ್ರಿಶಂಕುವಿಗೆ ಪ್ರತಿಯೊಂದು ವಿಷಯದಲ್ಲೂ ಅಸಂತೋಷವಿತ್ತು. ಆತನಿಗೆ ಇವೆಲ್ಲಕ್ಕಿಂತ ಹೆಚ್ಚು ಅತೃಪ್ತಿತಯು ತನ್ನ ಮನೆಯ ಬಗೆಗೇ ಇತ್ತು. ಒಂದು ಒಳ್ಳೆಯ ಬಡಾವಣೆಯಲ್ಲಿ ಒಂದು ಒಳ್ಳೆಯ ಮನೆಯಲ್ಲಿ ತಾನು ಇರಬೇಕೆಂಬುದು ಅವನ ಜೀವನದ ಬಹುದೊಡ್ಡ ಅಭಿಲಾಷೆಯಾಗಿತ್ತು. ಯಾರಾದರೂ ಮನೆ ಮಾಲಿಕರ ಮಕ್ಕಳು ಶಾಲೆಯಲ್ಲಿ ಓದುತ್ತಿದ್ದರೆ ಆತ ಅವರನ್ನು ಅತಿಹೆಚ್ಚು ಪ್ರೀತಿಸುತ್ತಿದ್ದ, ಅವನು ಯೋಚಿಸುತ್ತಿದ್ದ - 'ಎಂದಾದರೂ ಒಂದು ದಿನ ಮನೆಯ ಮಾಲೀಕ ಪ್ರಸನ್ನನಾಗಿ ನಿನಗೇನು ಬೇಕು ಎಂದು ಕೇಳಿದರೆ ಆಗ ಆತ ತನಗೊಂದು ಒಳ್ಳೆಯ ಮನೆ ಬೇಕೆಂದು ಕೇಳಬೇಕೆಂದುಕೊಂಡಿದ್ದ'.

ಆ ಪಟ್ಟಣದಲ್ಲಿ ಒಬ್ಬ ರೆಂಟ್ ಕಂಟ್ರೋಲರ್ ಇದ್ದರು. ಅವರ ಹೆಸರು ವಿಶ್ವಾಮಿತ್ರ. ವಿಶ್ವಾಮಿತ್ರ ಮನೆಗಳ ಬಾಡಿಗೆಯನ್ನು ನಿಯಂತ್ರಿಸುತ್ತಿದ್ದರು ಮತ್ತು ಖಾಲಿಯಾದ ಮನೆಗಳನ್ನು ಬಾಡಿಗೆದಾರರಿಗೆ ಕೊಡಿಸುತ್ತಿದ್ದರು.

ವಿಶ್ವಾಮಿತ್ರನ ಮಗ ತ್ರಿಶಂಕುವಿನ ಕ್ಲಾಸಿನಲ್ಲಿ ಓದುತ್ತಿದ್ದ. ಸಹಜವಾಗಿಯೇ ತ್ರಿಶಂಕು ಅವನನ್ನು ಅತಿ ಹೆಚ್ಚುಪ್ರೀತಿಸುತ್ತಿದ್ದ. ಆದರೆ ಆ ಹುಡುಗ ಓದುವುದರಲ್ಲಿ ಬಹಳ ದಡ್ಡ. ಅದಕ್ಕೆ ವಿಶ್ವಾಮಿತ್ರ ತನ್ನ ಮಗನಿಗೆ ಪುಸ್ತಕವನ್ನು ಜಾಗ್ರತೆಯಾಗಿ ಇಟ್ಟುಕೊಳ್ಳಲು ಹೇಳುತ್ತಿದ್ದ. ಏಕೆಂದರೆ ಮುಂದಿನ ವರ್ಷವೂ ಅದು ಬೇಕಾಗಬಹುದು! ಆದರೆ ತ್ರಿಶಂಕುವಿನ ಪಾಠದಿಂದಾಗಿ ಆತ ಪಾಸಾದ.

ವಿಶ್ವಾಮಿತ್ರನಿಗೆ ಬಹಳ ಸಂತೋಷವಾಯಿತು. ಒಂದು ದಿನ ಹುಡುಗ ಪಾಸಾದ ಬಗ್ಗೆ ಅವರು ಕೊಟ್ಟ ಮಿಠಾಯಿ ಕೊಟ್ಟರು. ತ್ರಿಶಂಕು ಅದನ್ನು ತಿನ್ನುತ್ತಿದ್ದಂತೆಯೆ ವಿಶ್ವಾಮಿತ್ರ ಹೇಳಿದರು- 'ತ್ರಿಶಂಕು ಮೇಸ್ತ್ರೇ, ನನಗೆ ನಿನ್ನ ಬಗ್ಗೆ ಬಹಳ ಖುಷಿಯಾಗಿದೆ. ನಿನಗಾಗಿ ನಾನು ಏನಾದರೂ ಮಾಡಲು ಇಚ್ಛಿಸುತ್ತೇನೆ. ಹೇಳು ನಿನಗೆ ಏನು ಬೇಕು?'

ತ್ರಿಶಂಕು ಅವೊಂದು ಕ್ಷಣಕ್ಕಾಗಿಯೇ ಹಲವಾರು ವರ್ಷಗಳಿಂದ ಕಾಯುತ್ತಿದ್ದ. ಅವನ ಕಣ್ಣಿನಲ್ಲಿ ಹಲವಾರು ಮನೆಗಳು ತೂಗಿ ತೂಗಿ ಹೋದುವು. ಆದರೆ ಆತ ಗಡಿಬಿಡಿ ಮಾಡಲಿಲ್ಲ. ಬಹಳ ಧೈರ್ಯದಿಂದ ಹೇಳಿದ- 'ಸಾಹೇಬರೆ, ಪ್ರತಿಫಲ ಪಡೆಯಲಿಕ್ಕೆ ನಾನು ಅಂತಾದ್ದೇನು ಮಾಡಿದ್ದೇನು? ನಾನು ನನ್ನ ಕರ್ತವ್ಯ ಮಾಡಿದ್ದೇನೆ ಅಷ್ಟೆ. ನೀವು ಇಡೀ ಪಟ್ಟಣದ ಜನರಿಗೆ ಮನೆ ಕೊಡಿಸುತ್ತೀರಿ. ಹಾಗಿರುವಾಗ ನಿಮ್ಮ ಮಗನೇ ಪಾಸಾಗದಿದ್ದರೆ ಇಡೀ ಪಟ್ಟಣಕ್ಕೇ ಅಪಮಾನ. ನಾನು ಒಬ್ಬ ನಾಗರಿಕನಾಗಿ ನನ್ನ ಕರ್ತವ್ಯ ನಿರ್ವಹಿಸಿದ್ದೇನೆ. ನನಗೆ ನಿಮ್ಮ ಕೃಪೆಯ ಹೊರತು ಬೇರೇನೂ ಬೇಕಾಗಿಲ್ಲ'.

ಈ ಮಾತುಗಳನ್ನು ಕೇಳಿ ವಿಶ್ವಾಮಿತ್ರನ ಹೃದಯವು ಮತ್ತಷ್ಟು ಅಗಲವಾಯಿತು. ಅವರು ತ್ರಿಶಂಕುವಿನ ಬಗ್ಗೆ ದಯೆ ತೋರಲು ಆತುರರಾಗಿದ್ದರು. ಹೇಳಿದರು- 'ಇಲ್ಲ, ತ್ರಿಶಂಕು, ನೀನು ಏನಾದರೂ ಕೇಳು. ನಿನ್ನ ಋಣ ನನ್ನ ಮೇಲಿದೆ. ಬಾಲಕನ ಒಬ್ಬ ತಂದೆ ಜನ್ಮ ಕೊಟ್ಟವನಾದರೆ ಮತ್ತೊಬ್ಬ ವಿದ್ಯೆ ಕೊಟ್ಟವ. ನೀನು ಹುಡುಗನಿಗೆ ಓದು ಬರಹದ ಜೊತೆಗೆ ಈ ಅಮೂಲ್ಯ ವಿದ್ಯೆಯನ್ನೂ ಕಲಿಸಿರುವೆ. ನಿನ್ನ ಸ್ಥಾನ ನನ್ನ ಸ್ಥಾನಕ್ಕಿಂತಲೂ ಮಿಗಿಲಾದುದು. ಹೇಳು, ನಿನಗೇನು ಬೇಕು?'

ಕಬ್ಬಿಣವು ಚೆನ್ನಾಗಿ ಕಾದಿದೆಯೆಂದು ತ್ರಿಶಂಕುವಿಗೆ ಅನ್ನಿಸಿತು, ಆತನೆಂದ- 'ಸರಿ ಸಾಹೇಬರೆ, ನೀವು ಇಷ್ಟು ಹೇಳುವಾಗ... ಹಾಗಾದರೆ ನೀವು ಒಂದು ಒಳ್ಳೆಯ ಕಡ ಒಂದು ಮನೆ ಕೊಡಿ ಸಾಕು'.

ವಿಶ್ವಾಮಿತ್ರ ಸ್ವಲ್ಪ ಯೋಚಿಸತೊಡಗಿದರು, ಕೊನೆಗೆಂದರು- 'ತ್ರಿಶಂಕು ಮೇಸ್ತ್ರೇ, ನೀನು ಬಹಳ ಕಷ್ಟಕರವಾದದ್ದನ್ನೇ ಕೇಳಿದೆ. ಈಗ ಮನೆಗಳ ಅಭಾವ ಬಹಳ ಇದೆ. ಮನೆ ಬದಲಿಗೆ ನೀನು ಒಂದು ದೇಶವನ್ನೇ ಕೇಳಿದ್ದರೂ ಅದನ್ನು ಕೊಡಲು ನನಗೆ ಅಷ್ಟು ಕಷ್ಟವಾಗುತ್ತಿರಲಿಲ್ಲ. ಇರಲಿ, ನಾನು ಮಾತು ಕೊಟ್ಟಾಗಿದೆ. ನಿನಗೆ ನಾನು ಮನೆ ಕೊಡಿಸುತ್ತೇನೆ".

ವಿಶ್ವಾಮಿತ್ರ ಮೇಜಿನ ಡ್ರಾಯರಿನಿಂದ ಒಂದು ಡೈರಿ ತೆಗೆದರು ಮತ್ತು ಅದರ ಪುಟಗಳನ್ನು ತಿರುವಿ ಹಾಕತೊಡಗಿದರು. ಒಂದು ಪುಟಕ್ಕೆ ಬರುತ್ತಲೆ ನಿಂತರು ಮತ್ತು ಫೋನ್ ಚಲಾಯಿಸಿದರು.

'ಹಲೋ, ಹಾ... ಯಾರು ಇಂದ್ರನವರಾ? .... ನಾನು ವಿಶ್ವಾಮಿತ್ರ ಮಾತನಾಡುತ್ತಿದ್ದೇನೆ.', 'ನಮಸ್ಕಾರ, ಹೌದು, ನಿಮ್ಮ ಅನುಗ್ರಹ.', 'ಹ್ಹೆ ಹ್ಹೆ ಹ್ಹೆ ಹ್ಹೆ ನೋಡಿ ನಾನು ಒಂದು ಮುಖ್ಯ ವಿಚಾರಕ್ಕೆ ಸಂಬಂಧಿಸಿ ನಿಮಗೆ ತೊಂದರೆ ಕೊಡುತ್ತಿದ್ದೇನೆ. ನಿಮ್ಮ ಹತ್ತಿರ ಮನೆ ಖಾಲಿ ಇದೆಯೇ? ಸರಿ. ನಮ್ಮದೇ ಒಂದು ಜನ ಇದೆ....ಹೌದು. ಒಳ್ಳೆಯ ಮನುಷ್ಯ.... ಹಾಗಾದರೆ ಕಳಿಸಲೆ?..... ಸಂಜೆ ಒಳಗೆ?....ಒಳ್ಳೇದು ಒಳ್ಳೇದು. ನಮಸ್ಕಾರ." ವಿಶ್ವಾಮಿತ್ರ ಫೋನ್ ಕೆಳಗಿಟ್ಟರು. ತ್ರಿಶಂಕುವಿನೊಡನೆಂದರೆ- 'ನೋಡು, ನಿನ್ನ ಕೆಲಸ ಆಯ್ತು. ಪಟ್ಟಣದಲ್ಲಿ ಅತ್ಯಂತ ಒಳ್ಳೆಯ ಬಡಾವಣೆಯಲ್ಲಿ ನಿನಗೆ ಮನೆ ನಿಶ್ಚಯ ಮಾಡಿದ್ದೇನೆ.' ತ್ರಿಶಂಕುವಿನ ಮುಖದ ಒಂದೊಂದು ಎಸಳೂ ಫೋನಿನಲ್ಲಿ ಆಗುತ್ತಿದ್ದ ಒಂದೊಂದು ಮಾತಿಗೆ ಅರಳುತ್ತಿದ್ದುದು, ಈಗ ಪೂರ್ತಿಯಾಗಿ ಅರಳಿತು. ಆತ ಕೇಳಿದ 'ಆ ಮನೆ ಎಲ್ಲಿದೆ?'

ವಿಶ್ವಾಮಿತ್ರ ಎಂದರು- 'ನಮ್ಮ ಪಟ್ಟಣದ ಅತಿ ಸುಂದರ ಬಡಾವಣೆ 'ಸ್ವರ್ಗಪುರಿ'ಯಲ್ಲಿದೆ. ಅದನ್ನು ಸಿವಿಲ್ ಲಾಯಿನ್ಸ್ ಎಂದೂ ಕರೆಯುತ್ತಾರೆ. ಅಲ್ಲಿ ಇಂದ್ರದೇವನೆಂಬ ಇಲಾಖೆಯಲ್ಲಿ ಇಂಜಿನಿಯರ್ ಆಗಿದ್ದರು. ಆಗ ಅವರು ರಾಷ್ಟ್ರ ನಿರ್ಮಾಣದ ಕೆಲಸವನ್ನು ಎಷ್ಟು ಶ್ರದ್ಧೆಯಿಂದ ಮಾಡುತ್ತಿದ್ದರೆಂದರೆ ನಿವೃತ್ತರಾಗುತ್ತಲೆ ಅವರದ್ದೇ ಆದ ಹದಿನೈದು - ಇಪ್ಪತ್ತು ಮನೆಗಳಾದವು. ಅವೆಲ್ಲವನ್ನೂ ಬಾಡಿಗೆಗೆ ಕೊಟ್ಟಿದ್ದಾರೆ. ಅವುಗಳಲ್ಲಿ ಒಂದು ಮನೆಯ ಒಂದು ಭಾಗ ನಿನಗೆ ಕೊಡಿಸಿದ್ದೇನೆ.'

ತ್ರಿಶಂಕುವು ಮೊದಲು ಕೇಳಿದ ಪ್ರಶ್ನೆ- 'ಬಾಡಿಗೆ?', ವಿಶ್ವಾಮಿತ್ರರು ಹೇಳಿದರು- 'ನೀನು ಆ ಬಗ್ಗೆ ಚಿಂತಿಸಬೇಡ. ನಾನೆಲ್ಲಾ ಮಾತಾಡುತ್ತೇನೆ. ನೀನು ಸಂಜೆ ಒಳಗೆ ಇಂದ್ರನವರ ಬಳಿ ಹೋಗಿ ಬಿಡು. ಇವತ್ತು ತಾರೀಕು 31. ನಿನ್ನ ಮನೆಯನ್ನು ಇವತ್ತೆ ಖಾಲಿ ಮಾಡು. ಇಲ್ಲದಿದ್ದರೆ ನಾಳೆ ಮನೆ ಮಾಲಿಕ ಇನ್ನೊಂದು ತಿಂಗಳ ಬಾಡಿಗೆ ವಸೂಲು ಮಾಡಿಯಾನು. ಹೋಗುವಾಗ ಸಾಮಾನು ಸರಂಜಾಮನ್ನೆಲ್ಲ ತೆಗೆದುಕೊಂಡೇ ಹೋಗು'.

ತ್ರಿಶಂಕು ದ್ವಂದ್ವದಲ್ಲಿ ಸಿಲುಕಿದ. ಸ್ವರ್ಗಪುರಿ ಅಥವಾ ಸಿವಿಲ್ ಲಾಯಿನ್ಸ್‌ನ ಪ್ರಪಂಚವೇ ಬೇರೆಯಾಗಿತ್ತು. ಅಲ್ಲಿಯ ನಿವಾಸಿಗಳು ಒಂದು ಬೇರೆಯೇ ಜಾತಿಯವರು. ತ್ರಿಶಂಕು ಅವರನ್ನು ಪ್ರಶಂಸೆ ಮತ್ತು ಭಯದಿಂದ ನೋಡುತ್ತಿದ್ದ. ಎಷ್ಟೋ ಬಾರಿ ಅಲ್ಲಿ ವಾಸಿಸುವ ಕಲ್ಪನೆ ಮಾಡಿ ಸುಖದ ಅನುಭವವನ್ನು ಪಡೆದಿದ್ದ. ಆದರೆ ಈಗ ಅಲ್ಲಿ ವಾಸಿಸುವ ಸಂದರ್ಭ ಬಂದಾಗ ಹಿಂದೆ ಮುಂದೆ ನೋಡತೊಡಗಿದೆ. ನಾನಲ್ಲಿ ಹೇಗೆ ಇರಲಿ ಎಂದು ಯೋಚಿಸತೊಡಗಿದ. ನನಗೆ ಅಲ್ಲಿಯ ಜನರಿರಲು ಬಿಟ್ಟಾರೆಯೇ ಎಂದೂ ಅನ್ನಿಸಿತು.

ಆದರೂ ಹೆದರುತ್ತಲೇ ಕೇಳಿದ- 'ಸಾಹೇಬರೆ, ಅಲ್ಲಿ ಬೇರೆಯೇ ಬಗೆಯ ಜನರು ವಾಸಿಸುತ್ತಾರೆ. ಆ ಜಾತಿಯೇ ಬೇರೆ. ಅವರು ತಮ್ಮ ನಡುವೆ ನನ್ನನ್ನು ಇರಲು ಬಿಟ್ಟಾರೆಯೇ?'.

ವಿಶ್ವಾಮಿತ್ರ ಹೇಳಿದರು- 'ನೀನು ಎಂತಹ ಮೂರ್ಖತನದ ಮಾತನಾಡುತ್ತಿ? ತ್ರಿಶಂಕು, ಅಲ್ಲಿ ಮನೆ ಸಿಕ್ಕುವುದೇ ದೊಡ್ಡ ಸೌಭಾಗ್ಯದ ವಿಚಾರ. ನೀನು ಇಂಥ ಸೌಭಾಗ್ಯವನ್ನು ಬಿಟ್ಟು ಬಿಡುತ್ತೀಯಾ? ನೀನು ಹೆದರಬೇಡ, ಯಾವ ಅನುಮಾನವನ್ನೂ ಮಾಡಬೇಡ. ಹೋಗು, ನಾನು ಹೇಳಿದ ಮೇಲೆ ಇಂದ್ರ ನಿನಗೆ ಕೈ ಜೋಡಿಸಿ ಮನೆ ಕೊಡುತ್ತಾರೆ.'

ಪುಟ 10 ನೋಡಿ

ಗಡಿ ವಿವಾದದ ಬಗ್ಗೆ ಗೊಂದಲ ಮೂಡಿಸುವ 'ಕಂಠಿ'



ವಿವಾದಾತ್ಮಕ ವಿಷಯಗಳನ್ನು ಕೈಗೆತ್ತಿಕೊಂಡು ಚಿತ್ರ ನಿರ್ಮಿಸುವುದು ಈಗೊಂದು ಟ್ರೆಂಡ್. ಉದಾಹರಣೆಗೆ ಕಾಶ್ಮೀರದ ಸಮಸ್ಯೆಯ ಬಗ್ಗೆ, ಪಾಕಿಸ್ತಾನದೊಂದಿಗಿನ ಸಂಬಂಧದ ಕುರಿತು ಅಥವಾ ವಿವಾದಿತ ವ್ಯಕ್ತಿಗಳ ಕುರಿತು ಹೀಗೆ..... ಇದು ಹಿಂದಿ ಚಿತ್ರಗಳ ಮಾತಾಯಿತು. ಕನ್ನಡದಲ್ಲೂ ಅಂತಹದ್ದೊಂದು ಪ್ರಯತ್ನ, ಅದೇ 'ಕಂಠಿ' ಚಿತ್ರ. ಬೆಳಗಾವಿ ಕರ್ನಾಟಕದ ಅವಿಭಾಜ್ಯ ಅಂಗವಾಗಿದೆ. ಆದರೆ ಅಲ್ಲಿನ ಮರಾಠಿ ಭಾಷಿಕರು ಅದನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂಬ ಬೇಡಿಕೆಯನ್ನಿಟ್ಟು ಹಲವು ವರ್ಷಗಳಿಂದ ಹೋರಾಡುತ್ತಿದ್ದಾರೆ. ಅದು ನ್ಯಾಯಸಮ್ಮತವೇ, ಅಲ್ಲವೇ ಎಂಬುದು ಬೇರೆ ವಿಷಯ. ಏಕೆಂದರೆ ಕೇರಳದ ಬಹುತೇಕ ಕನ್ನಡಿಗರಿರುವ ಕಾಸರಗೋಡಿನವರು ಅದನ್ನು ಕರ್ನಾಟಕಕ್ಕೆ ಸೇರಿಸಬೇಕೆಂದು ಹೋರಾಡುತ್ತಿದ್ದಾರೆ. ಈ ಗಡಿ ವಿವಾದಗಳು ಮತ್ತೆಮತ್ತೆ ಸಮಸ್ಯೆಗಳಾಗಿ ಮಾರ್ಪಟ್ಟಿವೆ. ಇದಕ್ಕೆ ಮುಖ್ಯ ಕಾರಣ ಆಳುವ ವರ್ಗಗಳ ಬೇಜವಾಬ್ದಾರಿ ಇರಬಹುದು ಅಥವಾ ಸ್ಥಳೀಯರ ಭಾಷಾ ದುರಾಭಿಮಾನ ಅಥವಾ ಸ್ವಹಿತಾಸಕ್ತಿಗಳಿರಬಹುದು. ಆದರೆ ಇಂತಹ ವಿವಾದಗಳ ಮೂಲ ಸಮಸ್ಯೆಯನ್ನರಿಯದೇ ಅಥವಾ ಕಾಳಜಿಯೂ ಇಲ್ಲದೆ, ಕೇವಲ ಜನರ ಗಮನ ಸೆಳೆದು ತಮ್ಮ ಬೇಳೆಯನ್ನು ಸ್ವಲ್ಪ ಬೇಯಿಸಿಕೊಳ್ಳುವ ಉದ್ದೇಶವೇ ಕಾಣುತ್ತದೆ ಈ 'ಕಂಠಿ' ಚಿತ್ರದಲ್ಲಿ.

ಇದೊಂದು ಸಾಮಾನ್ಯ ಪ್ರೇಮ ಕಥೆ. ಕೇವಲ ಇಷ್ಟೇ ಆಗಿದ್ದರೆ ಚೆನ್ನಾಗಿರುತ್ತಿತ್ತೇನೋ. ಆದರೆ ನಿರ್ದೇಶಕ ಭರತ್ ರವರು ಮರಾಠಿ-ಕನ್ನಡಿಗರ ನಡುವಿನ ಘರ್ಷಣೆಯನ್ನು ನಡುವೆ ತೂರಿಸಿ, ಎಳೆದಾಡಿದ್ದಾರೆ. ಭಾಷಾ ಸಾಮರಸ್ಯದ ಬಗ್ಗೆ ನೈಜ ಕಾಳಜಿಯಿದ್ದಿದ್ದರೆ ಈ ಚಿತ್ರ ಹಾದಿ ತಪ್ಪುತ್ತಿರಲಿಲ್ಲವೇನೋ? ಆದರೆ ಚಿತ್ರದ ಮಧ್ಯಂತರದವರೆಗೂ ಲವಲವಿಕೆಯಿಂದ ಕೂಡಿದ್ದು ನಂತರ ಅಂತ್ಯದವರೆಗೂ ಅಡ್ಡದಾರಿಯಲ್ಲೇ ಸಾಗುವ ಚಿತ್ರ ಅಂತಿಮವಾಗಿ ಭಾಷಾ ಸಾಮರಸ್ಯದ ಬಗ್ಗೆ ಒಂದು ಭಾಷಣ ಬಿಗಿದು ಅಂತಿಮ ಗೊಳ್ಳುತ್ತದೆ. ಆದರೆ ಸಮಸ್ಯೆಗೆ ಪರಿಹಾರವೇನು? ಆ ಬಗ್ಗೆ ಚಕಾರವಿಲ್ಲ?

ಚಿತ್ರದುರ್ಗದ ಯುವಕನಾದ ಕಂಠಿ (ಮುರುಳಿ) ವಿದ್ಯಾಭ್ಯಾಸಕ್ಕಾಗಿ ಬೆಳಗಾವಿಗೆ ಬರುತ್ತಾನೆ. ಅಲ್ಲಿ ಮರಾಠಿ ಯುವತಿ(ರಮ್ಯ) ಯೊಂದಿಗೆ ಪ್ರೀತಿ ಉಂಟಾಗುತ್ತದೆ. ಆದರೆ ಭಾಷಾ ವಿವಾದದ ರೂವಾರಿಗಳು, ರಾಜಕೀಯ ಪುಡಾರಿಗಳು ಇವರಿಬ್ಬರನ್ನು ಒಂದುಗೂಡಲು ಬಿಡದೆ ಅಡ್ಡಿಯುಂಟುಮಾಡುತ್ತಾರೆ. ರಾಜಕೀಯ ಪುಡಾರಿಗಳ ನಡುವಿನ ವೈಮನಸ್ಯವನ್ನು ತನಗೆ ಬೇಕಾದಂತೆ ಬಳಸಿಕೊಳ್ಳಲು ನಾಯಕ ಯತ್ನಿಸುವುದೇ ನಿರ್ದೇಶಕನ ಕೀಳಭಿರುಚಿಯನ್ನು ತೋರಿಸುತ್ತದೆ. ಕೊನೆಗೆ ವಿವಾದದ ಸ್ಪಷ್ಟ ತಿಳುವಳಿಕೆಯಿಲ್ಲದೆ ತಮ್ಮಲ್ಲಿರುವ ಗೊಂದಲವನ್ನು ಪ್ರೇಕ್ಷಕರಿಗೆ ವರ್ಗಾಯಿಸಿದ್ದಾರೆ ನಿರ್ದೇಶಕರು. ಇವು ಚಿತ್ರದ ನ್ಯೂನ್ಯತೆಗಳಾದರೂ ಚಿತ್ರದ ಮೊದಲರ್ಧದಲ್ಲಿ ತಮ್ಮ ಪ್ರತಿಭೆಯಲ್ಲಿ ಮೆರೆದಿದ್ದಾರೆ. ನಾಯಕ ಮುರುಳಿ, ಆತನ ಸ್ನೇಹಿತರು ಮತ್ತು ನಾಯಕಿ ರಮ್ಯಾ ಲವಲವಿಕೆಯಿಂದ ಕಂಗೊಳಿಸುತ್ತಾರೆ. ಪ್ರೀತಿ, ಪ್ರೇಮ, ಕೀಟಲೆಯ ದೃಶ್ಯಗಳು ನೋಡುಗರಿಗೆ ಖುಷಿ ಕೊಡುತ್ತವೆ. ಉಳಿದ ಪಾತ್ರಧಾರಿಗಳು ಉತ್ತಮವಾಗಿ ಅಭಿನಯಿಸಿದ್ದಾರೆ.

ನಕುಲ

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH